ವಾಗಿ ವಿಧಾನ ಸಭೆಯಲ್ಲಿ ಬಹಳ ಆಸಕ್ತಿಯಿಂದ ಕೆಲಸ ಮಾಡುತ್ತಿದ್ದರು. ನನಗೆ ತಿಳಿದ ಹಾಗೆ ಅವರು ಒಂದು ಕಳವಳವನ್ನು ವ್ಯಕ್ತಪಡಿಸುತ್ತಿದ್ದರು. ಅದೇನೆಂದರೆ, ಈ ಸದನದ ಸಮಯವನ್ನು ಸದಸ್ಯರುಗಳು ಎಷ್ಟು ಪರಿಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕೋ, ಎಷ್ಟು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಬೇಕೋ ಅಷ್ಟು ಪ್ರಮಾಣದಲ್ಲಿ ಉಪಯೋಗಿಸುತ್ತಿಲ್ಲವೆಂದು ಅನೇಕ ಸಾರಿ ನನ್ನ ಹತ್ತಿರ ಹೇಳುತ್ತಿದ್ದರು. ನಾವೂ ಸಹ ಅನೇಕ ಸಂದರ್ಭಗಳಲ್ಲಿ ಅನೇಕಾನೇಕ ಚರ್ಚೆಗಳು, ವಿಧವಿಧವಾದ ಚರ್ಚೆಗಳನ್ನು ಹಲವಾರು ರೀತಿಯಲ್ಲಿ ಮಾಡುತ್ತಿದ್ದೇವೆ. ಯಾವ ಚರ್ಚೆಗೆ ಪ್ರಾತಿನಿಧ್ಯ ಕೊಡಬೇಕು, ಯಾವ ವಿಷಯಕ್ಕೆ ಪ್ರಾತಿನಿಧ್ಯ ಕೊಡಬೇಕೆಂದು ತಿಳಿದುಕೊಂಡು ಕೆಲಸ ಮಾಡುವುದು ಬಹಳ ಒಳ್ಳೆಯದು. ನಾನು ಇಷ್ಟು ಮಾತ್ರ ಹೇಳುತ್ತೇನೆ. ಮಾನ್ಯ ಸಿಂಗರಿಗೌಡರು ನಮಗೆ ಅನೇಕ ರೀತಿಯಲ್ಲಿ ಸೂಚನೆ ಹಾಗೂ ಸಲಹೆಗಳನ್ನು ಕೊಡುತ್ತಿದ್ದರು. ನಾನು ಅವರ ರೂಮ್‌ಗೆ ಭೇಟಿ ಕೊಟ್ಟಾಗಲೂ ಸಹ ನನ್ನ ಹತ್ತಿರ ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು. ಇವೊತ್ತಿನ ದಿವಸ ಇವರು ರಿಟೈರ್ ಆಗಿದ್ದಾರೆ. ನನಗನಿಸಿದ ಹಾಗೆ ಅವರ ಸೇವೆಯನ್ನು ಇನ್ನೂ ಉಪಯೋಗ ಮಾಡಿಕೊಳ್ಳಬೇಕು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರೂ ಸಹ ಹೇಳಿದ್ದಾರೆ. ಅವರಿಗೆ ಒಳ್ಳೆಯ ಸದ್ಗುಣಗಳಿದ್ದವು. ಅವರಿಗೆ ಇನ್ನೂ ಒಳ್ಳೆಯ ಕೆಲಸ ಮಾಡುವುದಕ್ಕೆ ದೇವರು ಶಕ್ತಿ ಕೊಡಲೆಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ, ನಮ್ಮ ಸ್ನೇಹಿತರು ಹೇಳಿದ ಹಾಗೆ ಸಿಂಗರಿಗೌಡರು ಬಹಳ ಮೃದು ಸ್ವಭಾವದವರು. ಎಷ್ಟು ಕೆಲಸ ಇದ್ದರೂ ಬೇಜಾರುಪಟ್ಟುಕೊಳ್ಳದೆ ಸಂತೋಷದಿಂದ ಮಾಡುತ್ತಿದ್ದರು. ಯಾವ ಸದಸ್ಯರಾದರೂ ಅವರ ಹತ್ತಿರ ಹೋದರೆ ಸರಿಯಾದ ಸಲಹೆಗಳನ್ನು ಕೊಡುತ್ತಿದ್ದರು. ನಿಜವಾಗಿ ಅವರು ನಿಗರ್ವಿ. ಅಂಥವರ ಸೇವೆ ಬಹಳ ಅಗತ್ಯವಾಗಿತ್ತು. ಇನ್ನೂ ಏನಾದರೂ ಅವರ ಸೇವೆಯನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಇದ್ದರೆ, ಉಪಯೋಗಿಸಿಕೊಳ್ಳಬೇಕೆಂದು ಹೇಳಿ ಈ ರೆಸೆಲ್ಯೂಷನ್‌ನ್ನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು.— ಪ್ರಸ್ತಾಪ ಏನೆಂದರೆ.— “ದಿನಾಂಕ ೩೧ನೇ ಅಕ್ಟೋಬರ್ ೧೯೮೭ರಂದು ವಿಧಾನ ಮಂಡಲದ ಕಾರ್ಯದರ್ಶಿ ಸ್ಥಾನದಿಂದ ನಿವೃತ್ತಿ ಹೊಂದಿದ ಶ್ರೀ ಕೆ. ಎಸ್. ಸಿಂಗರಿಗೌಡ ಅವರು ತಮ್ಮ ಸೇವಾ ಅವಧಿಯಲ್ಲಿ ಸದನಕ್ಕೆ ಹಾಗೂ ಪಾರ್ಲಿಮೆಂಟರಿ ಪರಂಪರೆಗೆ ನೀಡಿದ ಉತ್ತಮ ಸೇವೆಗಾಗಿ ಅಧ್ಯಕ್ಷರ, ಸರ್ಕಾರದ ಹಾಗೂ ವಿಧಾನ ಸಭೆಯ ಸದಸ್ಯರ ಮೆಚ್ಚಿಗೆಯನ್ನು ದಾಖಲುಗೊಳಿಸಿ ಅದನ್ನು ಅವರಿಗೆ ತಿಳಿಸುವಂತೆ ಮಾನ್ಯ ಸಭಾಧ್ಯಕ್ಷರನ್ನು ಕೋರಬೇಕೆಂದು ಈ ಸದನವು ನಿರ್ಣಯಿಸುತ್ತದೆ.

(ನಿರ್ಣಯವನ್ನು ಅಂಗೀಕರಿಸಲಾಯಿತು)

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾಪ

ಅಧ್ಯಕ್ಷರು.— ಜನವರಿ ೨೦ ೧೯೮೮ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ.”

ಶ್ರೀ ಪಿ.ಎಂ. ಚಿಕ್ಕಬೋರಯ್ಯ (ಚಾಮರಾಜ).— ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ರಾಜ್ಯಪಾಲರು ದಿನಾಂಕ ೨೦-೧-೧೯೮೮ ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣಕ್ಕಾಗಿ ವಿಧಾನ ಸಭೆಯ ಸದಸ್ಯರಾದ ನಾವು ಮಾನ್ಯ ರಾಜ್ಯಪಾಲರಿಗೆ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸಲು ತಮ್ಮ ಅಪ್ಪಣೆಯನ್ನು ಕೋರುತ್ತೇನೆ.

ಅಧ್ಯಕ್ಷರು.— ಮಾನ್ಯ ರಮೇಶ್‌ಕುಮಾರ್‌ರವರು ಅನುಮೋದಿಸುವುದು.

ಶ್ರೀ ರಮೇಶ್ ಕುಮಾರ್.— ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ಪಿ. ಎಂ. ಚಿಕ್ಕಬೋರಯ್ಯನವರು ರಾಜ್ಯಪಾಲರ ಭಾಷಣಕ್ಕೆ ಮಂಡಿಸಿದ ವಂದನಾರ್ಪಣ ಪ್ರಸ್ತಾಪವನ್ನು ಅನುಮೋದಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪವನ್ನು ಅನುಮೋದಿಸಲಾಗಿದೆ. ಈಗ ಮಾನ್ಯ ಚಿಕ್ಕಬೋರಯ್ಯನವರು ತಮ್ಮ ಭಾಷಣವನ್ನು ಪ್ರಾರಂಭ ಮಾಡಬಹುದು.

† ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಮಗೆಲ್ಲರಿಗೂ ತಿಳಿದ ಹಾಗೆ ಜನತಾ ಸರಕಾರ ತಾನು ಅಧಿಕಾರಕ್ಕೆ ಬಂದಾಗ, ಏನು ಆಶ್ವಾಸನೆಗಳನ್ನು ಕೊಟ್ಟಿತ್ತೋ ಅದರಲ್ಲಿ ಬಹುತೇಕವುಗಳನ್ನು ಪಾಲಿಸಿದ್ದಾರೆ. ಇನ್ನೂ ಅನೇಕ ರೀತಿಯಲ್ಲಿ ಸಕ್ರಿಯವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾ ಇದ್ದಾರೆ ಎನ್ನುವ ವಿಷಯವನ್ನು ತಿಳಿಸಿದ್ದಾರೆ. ಇದರ ಬಗ್ಗೆ ನನ್ನ ಒಂದೆರಡು ವಿಷಯಗಳನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ.

ನಾವು ರಾಷ್ಟ್ರದಲ್ಲಿ ರಾಜ್ಯಾಂಗವನ್ನು ಅಳವಡಿಸಿಕೊಂಡು ಪ್ರಜಾಪ್ರಭುತ್ವದ ಆಧಾರದ ಮೇಲೆ, ಪ್ರಜಾಪ್ರಭುತ್ವದ ತಳಹದಿಯಲ್ಲಿ ರಾಷ್ಟ್ರದ ಹಾಗೂ ರಾಜ್ಯದ ಕಾರ್ಯಕಲಾಪಗಳು ನಡೆಯಬೇಕೆಂದು ಅದಕ್ಕೆ ನಾವುಗಳೆಲ್ಲರೂ ಕಂಕಣಬದ್ಧರಾಗಿದ್ದೇವೆ. ಈ ದಿಸೆಯಲ್ಲಿ ಪ್ರಜಾಪ್ರಭುತ್ವ ಎಂದಾಗ ನನ್ನ ಅಭಿಲಾಷೆ ಪ್ರಕಾರ ಪ್ರಜೆಗಳನ್ನು ಪ್ರಭುಗಳಾಗಿ ಮಾಡಬೇಕಾದರೆ ಏನೇನು ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಂಡಿದ್ದೇವೆ, ಯಾವ ಯಾವ ಕಾರ್ಯಕ್ರಮಗಳಲ್ಲಿ ಎಷ್ಟರಮಟ್ಟಿಗೆ ಸಫಲರಾಗಿದ್ದೇವೆ ಎಂಬ ಬಗ್ಗೆ ಆ ಒಂದು ವಿಲಕ್ಷಣೆಯನ್ನು ಮಾಡುವುದು ನಮ್ಮ ಕರ್ತವ್ಯವಾಗಿದೆ ಎಂದು ನಾನು ತಿಳಿಯುತ್ತೇನೆ.

ಪ್ರಜೆಗಳನ್ನು ಪ್ರಭುಗಳಾಗಿ ಮಾಡಬೇಕಾದರೆ ಅತೀ ಮುಖ್ಯವಾಗಿ ಬೇಕಾದುದು ಅವನಿಗೆ ವಿದ್ಯಾಭ್ಯಾಸ ಕೊಡುವುದು, ಅಷ್ಟೇ ಅಲ್ಲದೆ ಅವನ ಹಕ್ಕುಗಳ ಬಗ್ಗೆ ಒಂದು ಅರಿವನ್ನು ಅವನಲ್ಲಿ ಮೂಡಿಸುವುದು, ಆ ಹಕ್ಕುಗಳನ್ನು ಯಾವ ರೀತಿಯಲ್ಲಿ ತನಗೆ ಪ್ರಯೋಜನವಾಗುವ ರೀತಿಯಲ್ಲಿ ಬಳಸಿಕೊಳ್ಳಬೇಕೆನ್ನುವ ಪ್ರಜ್ಞೆ ಅವನಲ್ಲಿ ಬರುವಂತೆ ಮಾಡುವುದು ಮುಂತಾಗಿ ಇವೆಲ್ಲವನ್ನೂ ಅವರಲ್ಲಿ ಹುಟ್ಟಿಸಬೇಕು. ಆ ದಿಕ್ಕಿನಲ್ಲಿ ರಾಷ್ಟ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಯಾವುದೇ ಸಮಸ್ಯೆಗಳನ್ನು ಎದುರಿಸುತ್ತಾ ಇವೆ ಎನ್ನುವುದನ್ನು ಕೂಡ ನಾವು ಯೋಚನೆ ಮಾಡಬೇಕಾಗಿದೆ. ಇಲ್ಲ ನನಗೆ ತೋರಿದ ಪ್ರಕಾರ ನಾಲ್ಕು ಸಮಸ್ಯೆಗಳು ಇವೆ. ಅವುಗಳ ಪೈಕಿ ಮೊದಲನೆಯದು, ಬಡತನ, ಅನಕ್ಷರತೆ, ಶಾಸನದಲ್ಲಿನ ದುಷ್ಪರಿಣಾಮಗಳು, ಮತ್ತು ಕೊನೆಯದಾಗಿ, ಸಮಬಾಳು ಮತ್ತು ಸಮಪಾಲು ಬೇಕೆಂಬ ಅರಿವು ಸರ್ವ ಪ್ರಜೆಗೆ ಆಗಬೇಕು ಎಂಬ ಆಕಾಂಕ್ಷೆ ಇರುವುದು. ಈ ದಿಕ್ಕಿನಲ್ಲಿ ಯೋಚನೆ ಮಾಡಿದಾಗ, ರಾಜ್ಯ ಸರಕಾರವು ಯೋಜನೆಗಳನ್ನು ನಿರೂಪಿಸಿಕೊಂಡು ಬಡತನವನ್ನು ನಿರ್ಮೂಲನೆ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಅದನ್ನು ನಿರ್ವಹಿಸುತ್ತಾ ಇದೆ ಎನ್ನುವುದನ್ನು ವಿಶ್ಲೇಷಣೆ ಮಾಡಬೇಕಾಗಿದೆ.

ಬಡತನ ನಿರ್ಮೂಲನ ಕಾರ್ಯಕ್ರಮದಲ್ಲಿ ರಾಜ್ಯ ಸರಕಾರ ಕೆಲವು ಕಾರ್ಯಕ್ರಮಗಳಲ್ಲಿ ಅದನ್ನು ಪರಿಣಾಮಕಾರಿಯಾಗಿ ಕಾರ್ಯಗತ ಮಾಡಿ ಜನಗಳಿಗೆ ಅದರ ಫಲವು ದೊರಕುವಂತೆ ಮಾಡಿದೆ. ನಮಗೆ ಸ್ವಾತಂತ್ರ್ಯ ಬಂದು ನಾಲ್ಕು ದಶಕಗಳು ಆಯಿತು. ಇದರಲ್ಲಿ ಕೇವಲ ೫ ವರ್ಷಗಳಿಂದ ಮಾತ್ರ ಜನತಾ ಸರಕಾರ ಕಾರ್ಯವನ್ನು ನಿರ್ವಹಣೆ ಮಾಡುತ್ತಾ ಇದೆ ಈ ೫ ವರ್ಷಗಳ ಅವಧಿಯಲ್ಲಿ ಅಷ್ಟರಮಟ್ಟಿನ ಫಲದಾಯಕವಾದ ಅದರಲ್ಲೂ ಸಮಾಜ ಕಲ್ಯಾಣವನ್ನು ಮಾಡತಕ್ಕಂತಹ ಕಾರ್ಯಕ್ರಮವನ್ನು ರಾಜ್ಯ ಸರಕಾರ ಕೈಗೊಂಡಿದೆಯೇ ಅನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಮೊಟ್ಟಮೊದಲನೆಯದಾಗಿ ಬಡತನ ನಿರ್ಮೂಲನಕ್ಕಾಗಿ ಏನೇನು ಕಾರ್ಯಕ್ರಮವನ್ನು ಹಾಕಿಕೊಂಡಿದೆ ಎನ್ನುವುದನ್ನು ನಾವು ಯೋಚನೆ ಮಾಡಿದ್ದ ಪಕ್ಷಕ್ಕೆ ನಮ್ಮ ನಾಡು ಗ್ರಾಮಾಂತರಗಳಿಂದ ಕೂಡಿದ ನಾಡು ನಮ್ಮ ನಾಡಿನ ಬೆನ್ನೆಲುಬು ರೈತ ಆ ರೈತ ಈ ಗ್ರಾಮಾಂತರ ಜನಗಳಿಗೆ ಅದರಲ್ಲೂ ರೈತ ಜನಾಂಗಕ್ಕೆ ಎಷ್ಟರ ಮಟ್ಟಿಗೆ ಅವರ ಬವಣೆ ಮತ್ತು ಆಕಾಂಕ್ಷೆಗಳನ್ನು ನೆರವೇರಿಸಲು ರಾಜ್ಯ ಸರಕಾರ ಪ್ರಯತ್ನ ಮಾಡಿದೆ ಮತ್ತು ಆ ಪ್ರಯತ್ನ ಮಾಡುವಾಗ, ಆ ಪ್ರಯತ್ನದ ಫಲ ಈ ಸಮಾಜಕ್ಕೆ ಎಷ್ಟು ಲಭ್ಯವಾಗಿದೆ ಅಥವಾ ಅದರಿಂದ ಎಷ್ಟು ಜನರಿಗೆ ಅನುಕೂಲವಾಗಿದೆ, ಕಲ್ಯಾಣವಾಗಿದೆ, ಕೆಳದರ್ಜೆಯಲ್ಲಿನ ಎಷ್ಟು ಜನರು ಮೇಲೆರಿದ್ದಾರೆ ಎನ್ನುವುದನ್ನು ಯೋಚನೆ ಮಾಡಬೇಕಾಗಿತ್ತು. ಈ ದಿಕ್ಕಿನಲ್ಲಿ ಯೋಚನೆ ಮಾಡುವಾಗ ಅನೇಕ ಸಮಸ್ಯೆಗಳನ್ನು ಕೂಡ ಈ ರಾಜ್ಯ ಸರಕಾರ ಎದುರಿಸಬೇಕಾಯಿತು. ಮೊದಲನೆಯದು ಈಗ್ಗೆ ಸುಮಾರು ೪ ವರ್ಷಗಳ ಕಾಲದಿಂದ

ಬರ ಪರಿಹಾರ ಕಾರ್ಯವನ್ನು ಮಾಡುವುದು ಒಂದು ದೊಡ್ಡ ಸಮಸ್ಯೆಯಾಗಿ ಸಮಾಜದ ಮುಂದೆ ಬಂತು. ಆ ಕಾಲದಲ್ಲಿ ಬರ ಪರಿಹಾರಕ್ಕಾಗಿ ಎಷ್ಟು ಶ್ರಮ ಪಡಬೇಕಾಯಿತು ಎಂಬುದನ್ನು ಕೂಡ ಯೋಚನೆ ಮಾಡಬೇಕು. ರಾಜ್ಯ ಸರಕಾರದ ಆರ್ಥಿಕ ಪರಿಸ್ಥಿತಿ ಇದರಿಂದಾಗಿ ಯಾವ ರೀತಿ ವ್ಯತ್ಯಾಸ ವಾಯಿತು ಎನ್ನುವುದನ್ನು ಯೋಚನೆ ಮಾಡಿದರೆ ಬರ ಪರಿಹಾರ ಕಾಲದಲ್ಲಿ ಪ್ರತಿಯೊಬ್ಬರೂ ಕೂಡ ಒಂದು ರೀತಿಯ ಸಹಕಾರವನ್ನು ಸರ್ಕಾರಕ್ಕೆ ಮಾಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರ ಭಾಷಣ ಕೇಳುವುದಕ್ಕೆ ೩೪ ಮಂತ್ರಿಗಳಲ್ಲಿ ೪ ಜನ ಮಂತ್ರಿಗಳು ಮಾತ್ರ ಇದ್ದಾರೆ. ಅವರು ಮೊದಲನೆಯದಾಗಿ ಪ್ರಪೋಸ್ ಮಾಡುತ್ತಿದ್ದಾರೆ, ಅವರು ಮಾತನಾಡುವುದನ್ನು ಕೇಳುವುದಕ್ಕೆ ಇಲ್ಲಿ ಮಾನ್ಯ ಮಂತ್ರಿಗಳೂ ತಯಾರಿಲ್ಲ. ನಿಮ್ಮ ಭಾಷಣಕ್ಕೇನಾದರೂ, ಅವರು ಬಾಯ್‌ಕಾಟ್ ಮಾಡಿದ್ದಾರೆಯೇ ? ಮಾನ್ಯ ಮುಖ್ಯಮಂತ್ರಿಗಳೊಬ್ಬರು ಇದ್ದರು ಈಗ ಅವರೂ ಕೂಡ ಹೊರಟು ಹೋಗಿದ್ದಾರೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ನನಗೆ ಸಂತೋಷ. ಮಾನ್ಯ ಉಪ ವಿರೋಧ ಪಕ್ಷದ ನಾಯಕರು ಹಾಗೂ ಇನ್ನೂ ಅನೇಕ ಸನ್ಮಾನ್ಯ ಸದಸ್ಯರಿದ್ದಾರೆ. ಆದ್ದರಿಂದ ನಾನು ಏನು ಹೇಳಬೇಕೆಂದು ಇದ್ದೆನೆಯೋ ಅದನ್ನು ಹೇಳಲಿಕ್ಕೆ ನನಗೆ ಅವಕಾಶ ಕೊಡುತ್ತಾರೆಂದು ನಾನಾದರೂ ನಂಬಿದ್ದೇನೆ. ಕ್ಷಾಮ ಬಂದ ಕಾಲದಲ್ಲಿ ಸುಮಾರು ೪-೫ ವರ್ಷಗಳಿಂದ ಅನೇಕ ಜನರಿಗೆ ಮತ್ತು ಜಾನುವಾರುಗಳಿಗೆ ಕೂಡ ಬಹಳ ತೊಂದರೆಯಾಯಿತು. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ಅದನ್ನು ಎಷ್ಟರ ಮಟ್ಟಿಗೆ ಎದುರಿಸಿತು ಎನ್ನುವುದು ಈ ಸದನದಲ್ಲಿರುವ ಎಲ್ಲಾ ಸದಸ್ಯರಿಗೂ ಕೂಡ ಅರಿವಾಗಿದೆ. ಅದರ ವಿಷಯದಲ್ಲಿ ವಿಶ್ಲೇಷಣೆ ಮಾಡುವುದಕ್ಕೆ ಹೊರಟರೆ ನಿಜವಾಗಿಯೂ ಕೂಡ ಒಂದು ಪ್ರಬಂಧವನ್ನೇ ಬರೆಯಬಹುದೆಂದು ನನಗನ್ನಿಸುತ್ತದೆ. ಬರ ಪರಿಹಾರದ ಬಗ್ಗೆ ಎಷ್ಟು ಕ್ರಮ ತೆಗೆದುಕೊಂಡರು ಮತ್ತು ಅದು ಎಷ್ಟು ಜನರಿಗೆ ತಲುಪಿತು ಎನ್ನುವ ವಿಷಯವನ್ನು ಸೂಕ್ಷ್ಮವಾಗಿ ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ. ೧೯೮೫ನೇ ಇಸವಿಯಲ್ಲಿ ಸುಮಾರು ೧೭೫ ತಾಲ್ಲೂಕುಗಳ ಪೈಕಿ ೩೦ ತಾಲ್ಲೂಕಿನಲ್ಲಿ ಮಳೆ ಕಡಿಮೆಯಾಗಿ ಕ್ಷಾಮದ ಪರಿಸ್ಥಿತಿ ಉದ್ಭವವಾಯಿತು. ಹಾಗೆಯೇ ಮುಂದೆ ಬಂದರೆ ೧೯೮೫ ರಂದು ಸುಮಾರು ೧೨೯ ತಾಲ್ಲೂಕುಗಳಿಗೆ ಈ ಬರದ ಪರಿಸ್ಥಿತಿ ಉಂಟಾಗಿ ಅದರಲ್ಲಿ ಸುಮಾರು ೧೭ ತಾಲೂಕುಗಳಲ್ಲಿ ಬಹಳ ತೊಂದರೆಗೆ ಈಡಾಗಿದ್ದ ಜನ ಇದ್ದರು, ಇವೆಲ್ಲವನ್ನೂ ಕೂಡಾ ಪರಿಗಣಿಸಿ ರಾಜ್ಯ ಸರ್ಕಾರ ಜನಕ್ಕೆ ಅವರ ದಿನನಿತ್ಯದ ಪೂರೈಗೆ ಏನು ಆಗಬೇಕು, ಅವೆಲ್ಲವೂ ಆಗಿದೆ. ಕೆಲಸವನ್ನು ಒದಗಿಸಿ, ಕೆಲಸದ ಜೊತೆಗೆ ಅವರಿಗೆ ಧಾನ್ಯದ ರೂಪದಲ್ಲಿ ಮತ್ತೆ ಜಾನುವಾರುಗಳಿಗೆ ಮೇವಿನ ರೂಪದಲ್ಲಿ ಕೊಟ್ಟು ಈ ಬರದ ಒಂದು ಶಾಖ ಜನಕ್ಕೆ ಅಥವಾ ಜಾನುವಾರುಗಳಿಗೆ ತಗುಲದೇ ಇದ್ದಹಾಗೆ ಏರ್ಪಾಟು ಮಾಡಿದರು. ಈ ಸಂದರ್ಭದಲ್ಲಿ ನಾನಾದರೂ ಹೇಳುವುದಕ್ಕೆ ಇಚ್ಛೆಪಡುವುದು ಇಷ್ಟೆ. ಎಷ್ಟೇ ಕಷ್ಟವಾದರೂ ಕೂಡಾ ಇಷ್ಟು ದಿವಸಗಳ ಕಾಲ ನಾಲ್ಕು ವರ್ಷಗಳ ಕಾಲ ಸತತವಾಗಿ ಬಂದ ಬರ ಪರಿಹಾರವನ್ನು ಬಹಳ ದೃಢನಿಶ್ಚಯದಿಂದ ಮತ್ತು ಧೈರ್ಯದಿಂದ ಈ ರಾಜ್ಯ ಸರ್ಕಾರ ಎದುರಿಸಿದೆ. ಇದರಿಂದ ಜನಕ್ಕೆ ಅನೇಕ ವಿಧದಲ್ಲಿ ಕಲ್ಯಾಣವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು.

ಎರಡನೆಯದಾಗಿ ನಾನು ಮೊದಲೇ ತಿಳಿಸಿದ ಹಾಗೆ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ಪ್ರಜೆಯನ್ನು ಪ್ರಭುವನ್ನಾಗಿ ಮಾಡಬೇಕು ಎಂದು ಹೇಳಿದಹಾಗೆ, ಆ ದಿಕ್ಕಿನಲ್ಲೂ ಕೂಡಾ ರಾಜ್ಯ ಸರ್ಕಾರ ಎರಡು ಕೆಲಸಗಳನ್ನು ಮುಖ್ಯವಾಗಿ ಮಾಡಿದೆ. ಒಂದನೆಯದು ಹಿಂದಿನ ಸರ್ಕಾರದಲ್ಲಿ ೧೨ ವರ್ಷಗಳ ಕಾಲ ನಗರಸಭೆಗಳಿಗೆ ಮತ್ತು ಪುರಸಭೆಗಳಿಗೆ ಯಾವ ಚುನಾವಣೆಯನ್ನು ಮಾಡದೇ ಅಧಿಕಾರಿಗಳ ಕೈಯಲ್ಲಿ ಅಧಿಕಾರವನ್ನು ಕೊಟ್ಟಿದ್ದು, ಅದನ್ನು ಅವರೇ ನಿರ್ವಹಿಸುತ್ತಿದ್ದುದು, ನಂತರ ಜನತಾ ಸರ್ಕಾರ ಬಂದ ಸ್ವಲ್ಪ ದಿವಸಗಳಲ್ಲಿ ಅವರು ಚುನಾವಣೆಯನ್ನು ಮಾಡಿ ಪ್ರಜೆಗಳಿಂದ ಆರಿಸಲ್ಪಟ್ಟ ಜನರೇ ಈ ವಾಹಿವಾಟವನ್ನು ನಡೆಸಬೇಕು ಎನ್ನುವ ಒಂದು ಅಭಿಲಾಷೆಯನ್ನು ತೋರಿಸಿಕೊಟ್ಟರು. ನಂತರ ಹಾಗೆಯೇ ರಾಜ್ಯದ ಅಧಿಕಾರ ವಿಕೇಂದ್ರೀಕರಣ, ಆರ್ಥಿಕ ವಿತರಣೆ, ಇವರೆಡನ್ನೂ ಕೂಡಾ ರಾಜ್ಯ ಸರ್ಕಾರ ಮಾಡಲೇಬೇಕು ಎಂದು ದೃಢ ನಿಶ್ಚಯದಿಂದ ಜಿಲ್ಲಾ ಪರಿಷತ್ತು ಮತ್ತೆ ಮಂಡಲ ಪಂಚಾಯಿತಿಗಳನ್ನು ಏರ್ಪಾಡು ಮಾಡಿತು. ಅದಕ್ಕಾಗಿ ಚುನಾವಣೆಯನ್ನು ತಂದರು. ಪ್ರತಿಯೊಬ್ಬ ಪ್ರಜೆಯೂ

ಕೂಡಾ ತನ್ನ ಒಂದು ಕರ್ತವ್ಯವನ್ನು ಮತ್ತು ಅವರ ಹಕ್ಕನ್ನು ಕೂಡಾ ನೆನೆಸಿಕೊಳ್ಳಲೇಬೇಕು. ಇದು ಪ್ರತಿಯೊಬ್ಬರಿಗೂ ಅರಿವು ಆಗಬೇಕು ಎನ್ನುವ ದೃಷ್ಟಿಯಿಂದ ಈ ಎರಡು ಸಂಸ್ಥೆಗಳನ್ನು ಮತ್ತು ಇದರ ಜೊತೆಗೆ ನ್ಯಾಯ ಪಂಚಾಯಿತಿಯನ್ನು ನೇಮಕ ಮಾಡಿ ಈಗ ಇವುಗಳು ನಡೆಯುತ್ತಾ ಬಂದಿದೆ. ಈ ಚುನಾವಣೆಯಲ್ಲಿ ಹಲವು ಎಡರುತೊಡರುಗಳು ಬಂದಿರಬಹುದು. ಅದು ಇದ್ದಾಗ್ಯೂ ಕೂಡಾ ಅಧಿಕಾರ ವಿಕೇಂದ್ರೀಕರಣ ಅಲ್ಲದೇ ಏನು ಈ ರಾಜ್ಯಕ್ಕೆ ಉತ್ಪತ್ತಿ ಇದೆಯೋ ಅದನ್ನು ಜಿಲ್ಲಾ ಪರಿಷತ್ತು ಮತ್ತು ಮಂಡಲಪಂಚಾಯಿತಿಗಳಿಗೆ ಹಂಚಿಕೆ ಮಾಡಿ ಜನರ ಭವಿಷ್ಯವನ್ನು ಜನರೇ ತೀರ್ಮಾನ ಮಾಡಿಸಿಕೊಳ್ಳಲಿ, ಜನರೇ ರೂಢಿಸಿಕೊಳ್ಳಲಿ ಎನ್ನುವ ದೃಷ್ಟಿಯಿಂದ ಇದನ್ನು ಏರ್ಪಾಡು ಮಾಡಿದರು. ಇದರಲ್ಲಿ ಮುಖ್ಯವಾಗಿ ಒಂದು ಮಾತನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಯುವ ಜನತೆ ಎಲ್ಲಾ ರಾಷ್ಟ್ರದಲ್ಲೂ ಕೂಡಾ ಒಂದು ದೊಡ್ಡ ಸ್ವತ್ತು ಇದ್ದ ಹಾಗೆ. ಯುವಕರು ಇದ್ದರೂ ಈಗಿನ ಅವರ ಹಕ್ಕಿನ ಬಗ್ಗೆ ಅವರಿಗೆ ಅರಿವು ಆಗಬೇಕು ಎನ್ನುವ ದೃಷ್ಟಿಯಿಂದ ರಾಜ್ಯಸರ್ಕಾರ ಪ್ರತಿಯೊಬ್ಬ ಯುವಕ ೧೮ ವರ್ಷ ತುಂಬಿದವನು ಮತದಾರ ಎನ್ನುವ ಒಂದು ಘೋಷಣೆ ಮಾಡಿ ಅದರ ಪ್ರಕಾರ ೧೮ ವರ್ಷ ವಯಸ್ಸು ತುಂಬಿದ ಎಲ್ಲರೂ ಕೂಡ ಮತ ನೀಡಬಹುದು ಎನ್ನುವ ಒಂದು ಹಕ್ಕನ್ನು ಕೊಟ್ಟರು. ಇದು ರಾಷ್ಟ್ರದಲ್ಲಿಯೇ ಮೊದಲನೆಯ ಬಾರಿಗೆ ಆಗಿದೆ ಎಂದು ಹೇಳಿದರೆ ತಪ್ಪಾಗಲಾರದು. ರಾಷ್ಟ್ರವುಲ್ಲಿ ನಿರೂಪಿಸಲ್ಪಟ್ಟಿರುವ ವಯಸ್ಸಿನ ಮಿತಿ ೨೧ ಎಂದು ಇದ್ದರೂ ಕೂಡ ಈ ಜಿಲ್ಲಾ ಪರಿಷತ್ತು ಮತ್ತು ಮಂಡಲಪಂಚಾಯಿತಿಗಳಿಗೆ ೧೮ ವರ್ಷ ತುಂಬಿದ ಯುವಕನು ಮತವನ್ನು ಹಾಕುವುದಕ್ಕೆ ಅರ್ಹನಾಗುತ್ತಾನೆ ಎನ್ನುವ ದೃಷ್ಟಿಯಿಂದ ಅವನ ಹಕ್ಕನ್ನು ಅವನು ಅರಿತುಕೊಳ್ಳಲಿ, ಯಾವ ಸ್ಥಿತಿಯಲ್ಲಿ ಅವನು ರಾಜ್ಯದ ಅಥವಾ ಅವರ ಕಾರ್ಯಭಾರದಲ್ಲಿ ತಾನು ಪಾಲುದಾರ ತನಗೂ ಕೂಡಾ ಹಕ್ಕು ಇದೆ ಎನ್ನುವ ಭಾವನೆ ಉಂಟಾಗಲೀ ಎನ್ನು ದೃಷ್ಟಿಯಿಂದ ಮಾಡಿದ್ದಾರೆ.

೩–೦೦ ಪಿ.ಎಂ.

ಎರಡನೆಯದಾಗಿ ಬಹಳಷ್ಟು ವರ್ಷಗಳಿಂದ ಶೋಷಿತರಾಗಿದ್ದಂತಹ ಮಹಿಳಾ ವರ್ಗದವರಿಗೆ, ಶೇಕಡ ೫ರಷ್ಟು ಮೀಸಲ್ಪಟ್ಟು ಏನು ಇದ್ದಾರೆ ಅವರಿಗೂ ಇದರಲ್ಲಿ ಭಾಗಿಯಾಗುವಂತೆ ಮಾಡಿರುವುದು. ಬಹು ಪ್ರಾಮುಖ್ಯವಾದುದು. ಮೊದಲ ಬಾರಿಗೆ ರಾಷ್ಟ್ರದಲ್ಲಿ ಎಲ್ಲವೂ ಆಗದಿದ್ದರೂ ಪ್ರೋತ್ಸಾಹ ಪೂರ್ವಕವಾಗಿ ಈ ಕಾನೂನನ್ನು ತಂದು ಮಹಿಳೆಯರಿಗೆ ಸುಮಾರು ೧೫ರಷ್ಟು, ೨೫ರಷ್ಟು ಸ್ಥಾನಗಳನ್ನು ಮೀಸಲಾಗಿಟ್ಟು ಅವರೂ ಕೂಡ ಈ ವ್ಯವಸ್ಥೆಯಲ್ಲಿ ಪಾಲುದಾರರು, ಅವರೂ ರಾಜ್ಯ ಸರ್ಕಾರದ ಕಾರ್ಯಕಲಾಪಗಳಲ್ಲಿ ಭಾಗಿಗಳಾಗಬೇಕೆಂದು ಇದನ್ನು ನಮೂದಿಸಿದರು. ಇವು ನೂತನವಾದಂತಹ ಪದ್ಧತಿ ಮತ್ತು ಅಗತ್ಯವಾಗಿ ಅವರಿಗೆ ಕೊಡಬೇಕಾದ ಹಕ್ಕನ್ನು ಕೊಡಬಹುದಾದ ಪದ್ಧತಿ. ಅದರ ನಿರಾಕರಣೆ ಬಹಳ ವರ್ಷಗಳಿಂದ ಆಗಿತ್ತು. ಅದನ್ನು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್‌ನಲ್ಲಿ ನಿರೂಪಿಸಿಕೊಟ್ಟಿದ್ದಾರೆ. ಇವೊತ್ತು ಇಷ್ಟೇ ಅಲ್ಲದೆ ಈ ಜನಾಂಗಕ್ಕೆ ಯಾವ ರೀತಿಯಲ್ಲಿ ಈ ರಾಜ್ಯ ಸರ್ಕಾರ ಕೆಲಸ ಮಾಡಿದೆ ಎನ್ನುವುದನ್ನು ಯೋಚನೆ ಮಾಡಿದಾಗ ಮೊದಲು ಹೇಳತಕ್ಕಂಥ ವಿಚಾರ ಅಂದರೆ ಪರಿಶುದ್ಧವಾದ ನೀರನ್ನು ಪ್ರತಿಯೊಬ್ಬ ಪ್ರಜೆಗೂ ಒದಗಿಸಿಕೊಡುವಂತಹ ಕೆಲಸ ನಮ್ಮ ರಾಜ್ಯ ಸರ್ಕಾರದಿಂದ ನಡೆದಿದೆ. ಈ ರೀತಿಯ ನೀರನ್ನು ಒದಗಿಸುವ ಕಾರ್ಯ ಬೇರೆ ಯಾವ ರಾಜ್ಯದಲ್ಲೂ ಇಷ್ಟರವಟ್ಟಿಗೆ ಆಗಿಲ್ಲವೆಂದರೆ ಅದು ತಪ್ಪಾಗಲಾರದು ಎಂದು ಹೇಳಬಯಸುತ್ತೇನೆ ಗ್ರಾಮಾಂತರ ಜನರ ಆರೋಗ್ಯ ಹಾಗೂ ಬಹಳ ಕಾಲದಿಂದ ಅವರು ನೀರಿಗಾಗಿ ತೊಂದರೆ ಪಡುತ್ತಿದ್ದರು. ಆರೋಗ್ಯ ಮುಖ್ಯವಾಗಿ ಕೆಡುತ್ತಿದ್ದುದು ಈ ನೀರಿನ ಮಾಲಿನ್ಯತೆಯಿಂದ. ಕೆಟ್ಟು ಹೋದ ಅಥವಾ ಕುಡಿಯಲಿಕ್ಕೆ ಯೋಗ್ಯವಲ್ಲದ ನೀರನು ಅವರು ಉಪಯೋಗಿಸುತ್ತಿದ್ದರು, ಇದರಿಂದಾಗಿ ಅನೇಕ ಜನರು ಖಾಯಿಲೆಗೆ ತುತ್ತು ಆಗುತ್ತಿದ್ದರು. ಇದನ್ನು ಜನತಾ ಪಕ್ಷದ ಈ ಕಾರ್ಯಕರ್ತರು ಯೋಚಿಸಿ ಮೊದಲು ಆದ್ಯತೆ ಕೊಟ್ಟು ಕುಡಿಯುವ ನೀರನ್ನು ಮೊದಲು ಸರಬರಾಜು ಮಾಡತಕ್ಕದ್ದು. ನಮ್ಮ ಕರ್ತವ್ಯ ಎಂದು ಹೇಳಿ ಸುಮಾರು ೮೩ನೇ ಇಸವಿಯಿಂದ ೮೭ರವರೆಗೆ ಒಟ್ಟು ೯೨ ಸಾವಿರ ಕೊಳವೆ ಬಾವಿಗಳನ್ನು ಒದಗಿಸಿದ್ದಾರೆ. ಇಷ್ಟೆಲ್ಲವನ್ನೂ ಅವರು ೪ ವರ್ಷದ ಅವಧಿಯೊಳಗೆ ಒದಗಿಸಿಕೊಟ್ಟಿದ್ದಾರೆ. ಇದು ನಿಜವಾಗಿಯೂ ಸ್ತುತ್ಯಾರ್ಹವಾದ ಕೆಲಸ, ಅದನ್ನು ರಾಜ್ಯ ಸರ್ಕಾರ ಮಾಡಿದೆ. ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವುದಕಲ್ಲದೆ, ಅದು ಅದುನಗರಗಳನ್ನು ಕೂಡ ಲಕ್ಷದಲ್ಲಿಟ್ಟುಕೊಂಡು ಮಾಡಿದ್ದಾರೆ. ಒಂದು ನಿದರ್ಶನವಾಗಿ ಹೇಳುವುದಾದರೆ ಬೆಂಗಳೂರು ನಗರದಲ್ಲಿ ೧೯೮೩ನೇ ಇಸವಿಯಲ್ಲಿ ಸುಮಾರು ಎಂಟು ನೂರು ಕೊಳವೆ ಬಾವಿಗಳನ್ನು

ತೋಡಿಸಿ ನೀರಿನ ಬವಣೆ ಎಷ್ಟು ಇತ್ತೋ ಅದನ್ನು ಪರಿಹಾರ ಮಾಡಲಿಕ್ಕೆ ಅವರು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಅದರಿಂದ ನಿಜವಾಗಿ ಜನಕ್ಕೆ ಅನುಕೂಲ ದೊರಕಿದೆ.

ಕೃಷಿ, ಇದು ನಮ್ಮ ರಾಜ್ಯದಲ್ಲಿ ಪ್ರಧಾನವಾಗಿದೆ. ಈ ರಾಜ್ಯದಲ್ಲಿ ಕೃಷಿಕರಿಗೆ ಆದ್ಯತೆ ಕೊಡಬೇಕೆಂಬ ಒಂದು ದೃಷ್ಟಿಯಿಂದ ಈ ರಾಜ್ಯ ಸರ್ಕಾರ ಅನೇಕ ಯೋಜನೆಗಳನ್ನು ನಿರೂಪಿಸಿಕೊಂಡು ಈ ಯೋಜನೆಗಳಲ್ಲಿ ಮುಕ್ಕಾಲು ಭಾಗ ಅದನ್ನು ಕಾರ್ಯರೂಪಕ್ಕೆ ತಂದಿದೆ. ಕೃಷಿಕರಿಗೆ ತಾವು ಬೆಳೆಯತಕ್ಕಂತಹ ಬೆಳೆಗೆ ಎಷ್ಟು ಬೆಳೆ ದೊರೆಯಲಿಕ್ಕೆ ಅನೇಕ ಕಾರ್ಯಕ್ರಮಗಳನ್ನು ಜಾರಿ ಮಾಡಿದ್ದಾರೆ. ನಾನು ಒಂದೆರಡು ಉದಾಹರಣೆಗಳನ್ನು ಇಲ್ಲಿ ಹೇಳುವುದಾದರೆ ಅದು ತಪ್ಪಾಗಲಾರದೆಂದು ಭಾವಿಸುತ್ತೇನೆ. ಈಗ ರೆಗ್ಯುಲೇಟೆಡ್ ಮಾರ್ಕೆಟ್‌ಗಳ ಮೂಲಕ ಕೃಷಿಕರಿಗೆ ಸರಿಯಾದ ಬೆಲೆ ಸಿಗುತ್ತಿದೆ. ರೈತರಿಗೆ ಅನ್ಯಾಯ ವಾಗದಂತೆ ನೋಡಿಕೊಳ್ಳಲಾಗುತ್ತಿದೆ.

ಶ್ರೀ ರಮೇಶ್‌ಕುಮಾರ್.—ಮಾನ್ಯ ಚಿಕ್ಕಬೋರಯ್ಯನವರ ಭಾಷಣ ಕೇಳಿ ಮಾನ್ಯ ಬಂಗಾರಪ್ಪನವರು ಬಹಳ ಸಂತೋಷಪಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರ ನಂತರ ನೀವು ಮಾತನಾಡುವುದನ್ನು ನಾವೆಲ್ಲರೂ ಕೇಳಬೇಕೆಂದಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಚಿಕ್ಕಬೋರಯ್ಯನವರು ಸರ್ಕಾರದ ಸಾಧನೆಗಳ ಬಗ್ಗೆ ಬಹಳ ಚೆನ್ನಾಗಿ ಹೇಳುತ್ತಿದ್ದಾರೆ ಅದನ್ನು ಕೇಳಿ ನನ್ನ ಸಂತೋಷ ಉಕ್ಕಿ ಹರಿಯುತ್ತಿದೆ.

ಶ್ರೀ ರಮೇಶ್‌ಕುಮಾರ್.—ನಿಮಗೆ ಸಂತೋಷವಾದರೆ ನಮಗೂ ಸಂತೋಷ. ಆದರೆ ನಿಮಗೆ ಅತಿಯಾದ ಸಂತೋಷವಾದಾಗ ನಿಮ್ಮ ಆರೋಗ್ಯದ ಬಗ್ಗೆಯೂ ಎಚ್ಚರವಿರಲಿ.

ಶ್ರೀ ಪಿ.ಎಂ. ಚಿಕ್ಕಬೋರಯ್ಯ.—ನನ್ನ ಭಾಷಣ ಕೇಳಿ ಸಂತೋಷವಾಯಿತು ಎಂದು ಮಾನ್ಯ ಬಂಗಾರಪ್ಪನವರು ಹೇಳಿದರು. ಅದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು. ಈ ನಮ್ಮ ಕೃಷಿ ಪ್ರಧಾನವಾದಂಥ ರಾಷ್ಟ್ರದಲ್ಲಿ ಮತ್ತು ಈ ನಮ್ಮ ರಾಜ್ಯದಲ್ಲಿ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆಯನ್ನು ನಮ್ಮ ಸರ್ಕಾರ ಕೊಟ್ಟಿದೆ. ನಮ್ಮ ಕೃಷಿಕರಿಗೆ ಎಷ್ಟು ಸಹಾಯವನ್ನು ಒದಗಿಸಬೇಕೋ ಅಷ್ಟೆಲ್ಲವನ್ನೂ ಒದಗಿಸಿಕೊಡಲಾಗಿದೆ. ಇದಕ್ಕಾಗಿ ನಮ್ಮ ಸರ್ಕಾರ ಅನೇಕ ಯೋಜನೆಗಳನ್ನು ರೂಪಿಸಿಕೊಂಡು ಅದನ್ನು ಕಾರ್ಯಗತ ಮಾಡುತ್ತಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಮ್ಮ ರಾಜ್ಯದಲ್ಲಿ ಬಡತನದ ರೇಖೆಗಿಂತ ಕೆಳಗಡೆ ಶೇಕಡ ೬೦ರಷ್ಟು ಜನರಿದ್ದಾರೆ. ಅನಕ್ಷರತೆಯಿಂದ ನರಳುತ್ತಿರುವವರು ಶೇಕಡ ೬೦ರಷ್ಟು ಜನರಿದ್ದಾರೆ. ಈ ಎರಡು ನ್ಯೂನತೆಗಳ ಮಧ್ಯೆ ಕೂಡ ಶ್ರೀಸಾಮಾನ್ಯನಿಗೆ ಸಲ್ಲಬೇಕಾದ ಪಾಲು ಸಲ್ಲಲಿ ಎಂದು ಕೃಷಿಕರಿಗೆ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಲಾಗುತ್ತಿದೆ. ಕೃಷಿ ಕಸಬು ಮಾಡುವವರ ಜೀವನ ಸುಧಾರಣೆ ಆಗಬೇಕು, ಅವರು ಸಹ ತಮ್ಮ ಬಾಳಿನಲ್ಲಿ ಬೆಳಕನ್ನು ಕಾಣಬೇಕು ಮತ್ತು ತಮ್ಮ ಜೀವನದಲ್ಲಿ ಉತ್ತಮ ಅಂತಸ್ತನ್ನು ಪಡೆಯಬೇಕು ಎಂಬ ಉದ್ದೇಶದಿಂದ ಈ ಕೃಷಿಕರಿಗೆ ಅನುಕೂಲವಾಗುವಂತಹ ಕೆಲಸಗಳನ್ನೇ ನಮ್ಮ ಸರ್ಕಾರ ಮಾಡುತ್ತಿದೆ. ಈ ಕೃಷಿಕರಲ್ಲಿ ಎರಡು ಪಂಗಡಗಳ ಕೃಷಿಕರಿದ್ದಾರೆ, ನೀರಾವರಿ ಜಮೀನನ್ನು ಹೊಂದಿರುವವರು ಒಂದು ಪಂಗಡದವರು ಈ ನೀರಾವರಿಗೆ ಸಂಬಂಧಪಟ್ಟಂತೆ ಕೂಡ ಎರಡು ರೀತಿಯಲ್ಲಿ ವಿಂಗಡಣೆ ಮಾಡಬಹುದು ಒಂದು, ಖಾಯಂ ಆಗಿ ನೀರಾವರಿ ಸೌಲಭ್ಯ ಪಡೆಯುವುದು, ಮತ್ತೊಂದು ಅಂತರ ಜಲದಿಂದ ನೀರಾವರಿ ಸೌಲಭ್ಯವನ್ನು ಪಡೆದುಕೊಳ್ಳುವುದು. ಈ ಎರಡರಲ್ಲಿಯೂ ಕೂಡ ನಮ್ಮ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಅದರಲ್ಲಿ ಯಶಸ್ಸು ಹೊಂದಲು ಪ್ರಯತ್ನ ಮಾಡಿದೆ. ನನ್ನ ಒಂದು ಅನಿಸಿಕೆ ಪ್ರಕಾರ ಇಂತಹ ಅನೇಕ ಕಾರ್ಯಗಳಲ್ಲಿ ನಮ್ಮ ಸರ್ಕಾರದವರು ಉತ್ತೀರ್ಣರಾಗಿದ್ದಾರೆ. ಜನರಿಗೆ ಅನುಕೂಲವಾಗುವಂತಹ ಕೆಲಸಗಳನ್ನು ಮಾಡಿದ್ದಾರೆ. ಬಡತನದ ರೇಖೆಗಿಂತ ಕೆಳಗಿರುವ ರೈತರಿಗೆ ಮತ್ತು ಕೃಷಿ ಕೂಲಿಗಾರರಿಗೆ ಹಸಿರು ಕಾರ್ಡುಗಳನ್ನು ವಿತರಣೆ ಮಾಡುವುದರ ಮೂಲಕ ಆಹಾರಧಾನ್ಯಗಳನ್ನು ರಿಯಾಯಿತಿ ಬೆಲೆಗಳಲ್ಲಿ ಅಂದರೆ ಅರ್ಧ ಬೆಲೆಯಲ್ಲಿ ಒದಗಿಸಲಾಗುತ್ತಿದೆ. ಇದರ ಒಂದು ಫಲವನ್ನು ನಮ್ಮ ಸಮಾಜದಲ್ಲಿರುವ ಬಡಜನರು ಅನುಭವಿಸುತ್ತಿದ್ದಾರೆ. ಅದೇ ರೀತಿ ಮಧ್ಯಮ ವರ್ಗದ ಜನರಿಗೂ ಸಹ ಹಳದಿ ಕಾರ್ಡುಗಳನ್ನು ಹಂಚುವುದರ ಮೂಲಕ ರಿಯಾಯಿತಿ ದರದಲ್ಲಿ ೫ ಕೆ.ಜಿ. ಗೋಧಿ ಹಾಗೂ ಇತರೇ ಧಾನ್ಯಗಳನ್ನು ನೀಡಲಾಗುತ್ತಿದೆ. ಈ ಎಲ್ಲ ಅನುಕೂಲಗಳೂ ಸಹ ಬಡಜನರಿಗೆ ತಲುಪಿವೆ, ರೈತರಿಗೆ ಸಹಾಯವಾಗಿರುವಂತಹ ಮತ್ತೊಂದು

ವಿಷಯವೆಂದರೆ, ಈ ರಾಜ್ಯದಲ್ಲಿ ಈ ಸಾಲಿನಲ್ಲಿ ಸುಮಾರು ೪೦ ಸಾವಿರ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಸೌಲಭ್ಯ ಒದಗಿಸಿರುವುದು. ಇದರ ಒಂದು ಲಾಭ ರೈತರಿಗೆ ತನ್ಮೂಲಕ ನಮ್ಮ ಸಮಾಜಕ್ಕೆ ಸಿಗುವಂತಹ ವ್ಯವಸ್ಥೆಯನ್ನು ಮಾಡಲಾಗಿದೆ.

ಇದೆಲ್ಲವನ್ನೂ ನೋಡಿದಾಗ ರೈತನು ಬೇಸಾಯವನ್ನಲ್ಲದೆ ಬೇರೆ ಯಾವುದಾದರೂ ರೀತಿಯಲ್ಲಿ ರೈತ ಮುಂದುವರಿಯಬಹುದೇ ಅಥವಾ ಅವನ ಜೀವನ ಸುಧಾರಿಸಬಹುದೇ ಎಂದು ಯೋಚನೆ ಮಾಡಿ ತೋಟಗಾರಿಕೆ ಮತ್ತು ಪಶುಸಂಗೋಪನೆ ಇವೆರಡರ ಮೂಲಕ ಅನೇಕ ರೀತಿಯಾದ ಉತ್ತಮವಾದ ಕಾರ್ಯವನ್ನು ರೈತನ ಜೀವನ ಸುಧಾರಿಸಲಿಕ್ಕೆ ಏರ್ಪಾಟು ಮಾಡಿದ್ದಾರೆ. ಒಂದು ವಿಷಯವನ್ನು ಹೆಮ್ಮೆಯಿಂದ ಹೇಳಿಕೊಳ್ಳುವುದಾದರೆ, ಮುಖ್ಯವಾಗಿ ಈ ಪಶುಸಂಗೋಪನಾ ಇಲಾಖೆಯ ಕಾರ್ಯವ್ಯಾಪ್ತಿ ಬಹಳಷ್ಟು ವಿಸ್ತರಣೆಯಾಗಿ ಅದರಿಂದ ನಾವು ರಾಷ್ಟ್ರಮಟ್ಟದಲ್ಲಿ ಯೋಚನೆ ಮಾಡುವುದಿದ್ದರೆ, ಹಾಲಿನ ಉತ್ಪತ್ತಿಯಲ್ಲಿ ರಾಷ್ಟ್ರಮಟ್ಟದಲ್ಲಿ ನಾವು ೨ನೇ ಸ್ಥಾನವನ್ನು ಹೊಂದಿದ್ದೇವೆ. ಹಾಗೆಯೇ ಮೊಟ್ಟೆ ಉತ್ಪಾದನೆಯಲ್ಲಿ ೭ನೇ ಸ್ಥಾನವನ್ನು ಪಡೆದಿದ್ದೇವೆ. ಉಣ್ಣೆ ಉತ್ಪಾದನೆಯಲ್ಲಿ ೨ನೇ ಸ್ಥಾನವನ್ನು ಪಡೆದಿದ್ದೇವೆ ಎಂದು ಹೇಳಿದರೆ ತಪ್ಪಾಗಲಾರದು. ನಿಜವಾಗಿಯೂ ಕೂಡ ಉಪ ಕಸುಬುಗಳಾದ ಪಶು ಸಂಗೋಪನೆ ಮತ್ತು............

ಶ್ರೀ ಎಸ್. ಬಂಗಾರಪ್ಪ.—ಭ್ರಷ್ಟಾಚಾರದಲ್ಲಿ ಎಷ್ಟನೇ ಸ್ಥಾನವನ್ನು ಪಡೆದಿದ್ದೀರಿ ಎನ್ನುವುದನ್ನು ಹೇಳಿ ? ಹೈಕೋರ್ಟ್, ಸುಪ್ರೀಂ ಕೋರ್ಟ್‌ನ ಅರಾಕ್ ಬಾಟ್ಲಿಂಗ್ ಕೇಸ್‌ನಲ್ಲಿ ಭ್ರಷ್ಟಾಚಾರದಲ್ಲಿ ಎಷ್ಟನೇ ಸ್ಥಾನದಲ್ಲಿದ್ದೀರಿ ಎನ್ನುವುದನ್ನು ಹೇಳಿ, ದೇಶಕ್ಕೆ ಗೊತ್ತಾಗಲಿ.

ಶ್ರೀ ಬಿ. ಧರ್ಮಪ್ಪ.—ಬೊಫೋರ್ಸ್‌ದು ಇನ್ನೂ ಏನೂ ಆಗಿಲ್ಲ ಎಂದು ಅನ್ನಿಸುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಚಿಕ್ಕಬೋರಯ್ಯನವರೇ ಕ್ಷಮಿಸಬೇಕು. ಈ ಭ್ರಷ್ಟಾಚಾರ ರಾಷ್ಟ್ರಮಟ್ಟಕ್ಕೆ ಎಲ್ಲಿ ಹೋಗಿಬಿಡುತ್ತದೋ, ಅದನ್ನು ತಡೆದು ಇಲ್ಲೇ ನಿಲ್ಲಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ರಾಷ್ಟ್ರಮಟ್ಟದ್ದು ಸ್ವಿಟ್ಸರ್ಲೆಂಡ್, ಸ್ವೀಡನ್‌ಗೆ ಹೋಗಿದೆ.

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳಿದ್ದು ಜಡ್ಜ್‌ಮೆಂಟ್ ಆಗಿರುವ ವಿಚಾರ. ನೀವು ಹೇಳಿದ್ದು ಪತ್ರಿಕೆಯಲ್ಲಿ ಬಂದಿರುವ ವಿಚಾರ. ನಾನು ಹೇಳಿದ್ದಕ್ಕೂ, ನೀವು ಹೇಳಿದ್ದಕ್ಕೂ ಬಹಳ ವ್ಯತ್ಯಾಸವಿದೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಬಂಗಾರಪ್ಪನವರು ತಿಳಿಸಿದ ಹಾಗೆ ಭ್ರಷ್ಟಾಚಾರದಲ್ಲಿ ಎಷ್ಟನೇ ರ್‍ಯಾಂಕ್ ತೆಗೆದುಕೊಂಡಿದ್ದೇವೆ ಎಂದು ಅವರನ್ನೇ ಕೇಳಿ ತೀರ್ಮಾನ ಮಾಡೋಣ ಎಂದು ನನ್ನ ಅಭಿಲಾಷೆ. ಏಕೆಂದರೆ. ಈ ಭ್ರಷ್ಟಾಚಾರ ಎನ್ನುವುದು ಯಾರಿಂದ ಪ್ರಾರಂಭವಾಯಿತು ಎನ್ನುವುದು ಸರ್ವರಿಗೂ ವೇದ್ಯವಾಗಿರತಕ್ಕ ವಿಚಾರ. ಈ ಭ್ರಷ್ಟಾಚಾರ ಎಲ್ಲಿಂದ ಪ್ರಾರಂಭವಾಯಿತು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೂ ಕೂಡ ಭ್ರಷ್ಟಾಚಾರದಲ್ಲಿ ಎಷ್ಟನೇ ರ್‍ಯಾಂಕ್ ಎಂದು ಅವರು ಕೇಳುವ ಪಕ್ಷಕ್ಕೆ ಅವರೇ ನಮಗೆ ಹೇಳಿಕೊಡಬೇಕು ಎಂದು ನಾನಾದರೂ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಸೆಕೆಂಡ್ ರ್‍ಯಾಂಕ್, ಅವರು ಫಸ್ಟ್ ರ್‍ಯಾಂಕ್...

ಶ್ರೀ ಪಿ. ಎಂ ಚಿಕ್ಕಬೋರಯ್ಯ.—ನಾನು ಸೆಕೆಂಡ್ ರ್‍ಯಾಂಕ್ ಎಂದು ಹೇಳಲಿಲ್ಲ. ಅವರನ್ನು ಕೇಳಿ ತೀರ್ಮಾನ ಮಾಡಬೇಕು ಎಂದು ಹೇಳಿದೆ. ಭ್ರಷ್ಟಾಚಾರ ಇಲ್ಲ ಎಂದು ನಮ್ಮ ವಾದವನ್ನು ಮುಂದಿಡುವ ಪಕ್ಷಕ್ಕೆ, ಲೋಕಾಯುಕ್ತವನ್ನೇಕೆ ನಾವು ನೇಮಿಸುತ್ತಿದ್ದೇವು ?

ಶ್ರೀ ರಮೇಶ್ ಕುಮಾರ್.—ಮಾನ್ಯ ಕೃಷ್ಣನ್‌ರವರೆ, ನಿಮ್ಮದು ಫಸ್ಟ್ ರ್‍ಯಾಂಕ್, ಅವರದು ಸೆಕೆಂಡ್ ರ್‍ಯಾಂಕ್ ಎಂದು ಹೇಳುತ್ತಿದ್ದೀರಿ. ನಿಮಗೂ ಒಂದು ಕನ್ಸೊಲೇಷನ್ ಡಿಗ್ರಿ ಕೊಡುತ್ತೇವೆ ತೆಗೆದುಕೊಳ್ಳಿ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಭ್ರಷ್ಟಾಚಾರ ಇಲ್ಲ ಎನ್ನುವಂಥ ಪರಿಸ್ಥಿತಿ ಅಥವಾ ವಾತಾವರಣ ಉತ್ಪತ್ತಿ ಆಗದೇ ಇದ್ದ ಪಕ್ಷದಲ್ಲಿ ಲೋಕಾಯುಕ್ತವನ್ನು ನಿರ್ಮಿಸಬೇಕಾದ ಅಗತ್ಯ ನಮಗೆ ಕಂಡು ಬರುತ್ತಾ ಇರಲಿಲ್ಲ. ಅದು ಇದ್ದೆ, ಅದು ಯಾವ ಡಿಗ್ರಿಯಲ್ಲದೆ, ಯಾವ ಮಟ್ಟದಲ್ಲಿ ಎನ್ನುವುದು ಬಂದು

ವಿಷಯವೇ ಹೊರತು ಭ್ರಷ್ಟಾಚಾರ ಇಲ್ಲ ಎಂದು ನಾವೂ, ನೀವೂ ಹೇಳುವುದಕ್ಕಾಗುವುದಿಲ್ಲ. ಅದನ್ನು ಆದಷ್ಟು ತಡೆಯಬೇಕು, ಎನ್ನುವ ಪ್ರಜ್ಞೆ ಇರಬೇಕು, ಮನೋವೃತ್ತಿ ಇರಬೇಕು ಅಷ್ಟೇ ಹೊರತು ಭ್ರಷ್ಟಾಚಾರ ಇಲ್ಲ. ಎಂದು ಹೇಳಿದರೆ ಅಥವಾ ನಾನು ಹೇಳಿದರೂ ಒಪ್ಪಲಾರಿರಿ ಎಂದು ನಾನಾದರೂ ಭಾವಿಸುತ್ತೇನೆ

ಶ್ರೀ ಎಸ್. ಬಂಗಾರಪ್ಪ.— ಒಂದು ಸಾರಿ ಹೇಳಿ ನೋಡಿ. ಏನಾಗಬಹುದು ಎಂದು ನೋಡೋಣ

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಆ ರೀತಿ ಹೇಳುವ ಧೈರ್ಯ ನಮಗೆ ಬರಲಿಲ್ಲ, ಮುಂಕ್ಕಾಲು ಭಾಗ ಆ ಧೈರ್ಯ ಮಾನ್ಯ ಬಂಗಾರಪ್ಪನವರಿಗೆ ಇರಬಹುದು ಎಂದು ನನಗೆ ಅನಿಸುತ್ತದೆ. ನಾನಾದರೂ ಹೇಳಬಯಸುತ್ತೇನೆ. ನಮ್ಮಲ್ಲಿ ಪ್ರಾಮಾಣಿಕತೆ, ನಿಷ್ಠೆ ಎಲ್ಲಿಯವರೆಗೆ ಇರುವುದಿಲ್ಲವೋ, ಅಲ್ಲಿಯವರೆಗೆ ಭ್ರಷ್ಟಾಚಾರ ಎಲ್ಲಾ ರಂಗದಲ್ಲಿಯೂ ತಾಂಡವಾಡುತ್ತಿರುತ್ತದೆ. ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ಯಾವಾಗ ಅಳವಡಿಸಿ ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆಯೋ ಆಗ ಭ್ರಷ್ಟಾಚಾರ ಕಡಿಮೆಯಾಗುವುದಕ್ಕೆ ಸಾಧ್ಯವೇ ಹೊರತು, ಇಲ್ಲದಿದ್ದರೆ ಆಗುವುದಿಲ್ಲ. ರಾಜ್ಯಪಾಲರ ಭಾಷಣದಲ್ಲಿ ೩೧-೩-೮೮ ರಲ್ಲಿ ಎಲ್ಲರಿಗೂ ನಿವೇಶನ ಸಿಗುವಂತೆ ಮಾಡುತ್ತೇವೆಂದು ಹೇಳಿದ್ದಾರೆ ಇದು ತಪ್ಪಾಗಿ ಅಚ್ಚಾಗಿದೆ. ಇದನ್ನು ೮೯ ರಲ್ಲಿ ಎಂದು ಮಾಡಿಕೊಳ್ಳಬೇಕೆಂದು ಅಧ್ಯಕ್ಷರ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ರಾಜ್ಯಪಾಲರ ಭಾಷಣ ಓದುವಾಗ ಕೆಲವು ಸದಸ್ಯರುಗಳು ಹಾಸ್ಯ ಮಾಡುವ ರೀತಿಯಲ್ಲಿ ವರ್ತನೆ ಮಾಡಿದರು. ಒಂದು ವರ್ಷದ ಅವಧಿಯಲ್ಲಿ ಪ್ರತಿಯೊಬ್ಬರಿಗೂ ನಿವೇಶನ ಮತ್ತು ಮನೆ ಒದಗಿಸಲಿಕ್ಕೆ ಇವರ ಕೈಯಲ್ಲಿ ಸಾಧ್ಯವೆ ? ಏತಕ್ಕೆ ರಾಜ್ಯಪಾಲರ ಬಾಯಿಂದ ಹೇಳಿಸಿದ್ದಾರೆಂದು. ನಾನು ಈ ಸಂದರ್ಭದಲ್ಲಿ ಒಂದು ನಿದರ್ಶನ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೈಸೂರು ನಗರದಲ್ಲಿ, ನಗರಾಭಿವೃದ್ಧಿ ಸಮಿತಿ ಎಂದು ಇದೆ ಒಂದು ವರ್ಷ ೪ ತಿಂಗಳ ಹಿಂದೆ ಡಿ. ಮಾದೇಗೌಡರನ್ನು ಅಧ್ಯಕ್ಷರನ್ನಾಗಿ ಆ ಸಮಿತಿಗೆ ಮಾಡಿದರು. ಮಾಡಿದನಂತರ ಅವರು ಒಂದು ಯೋಜನೆಯನ್ನು ಸಿದ್ಧಪಡಿಸಿದರು. ಆ ಯೋಜನೆಗೆ ಆಶ್ರಯಮಂದಿರ ಎಂದು ನಾಮಾಂಕಿತವನ್ನು ಕೊಟ್ಟರು. ಯೋಜನೆ ಸಿದ್ಧಪಡಿಸಿದಾಗ ಅವರು ಕೂಡ ಇದೇರೀತಿ ಯಾರಿಗೆ ನಿವೇಶನ ಇಲ್ಲವೋ, ಯಾರಿಗೆ ಮನೆ ಇಲ್ಲವೋ ಎಲ್ಲರಿಗೂ ಒಂದು ವರ್ಷದಲ್ಲಿ ಕೊಡಬಲ್ಲೆ ಎನ್ನುವ ಘೋಷಣೆ ಹೊರಡಿಸಿದರು. ಆಗ ಎಲ್ಲರೂ ಇದೇ ರೀತಿಯ ಹಾಸ್ಯ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಅವರು ಸಿ ಐ ಟಿ. ಬಿ. ಲೈನಿಂದ ಒಳಗೆ ಬರತಕ್ಕ ಎಲ್ಲಾ ಜಮೀನನ್ನು ಕ್ರಯ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಭೂ ಸ್ವಾಧೀನ ಕಾಯಿದೆ ಪ್ರಕಾರ, ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ವರ್ಷಾನುಗಟ್ಟಲೆ ಆಗುತ್ತದೆಂದು ತಿಳಿದು ನೇರವಾಗಿ ರೈತರಲ್ಲಿಗೆ ಹೋಗಿ ಸುಮಾರು ೧೨೫೦ ಎಕರೆ ಜಮೀನನ್ನು ಕ್ರಯ ಮಾಡಿದರು. ಜಮೀನು ಪಡೆದ ನಂತರ ಒಟ್ಟು ೩೪,೦೫೦ ಸೈಟುಗಳನ್ನು ಮಾಡಿದರು ಆಶ್ರಯಮಂದಿರದ ಅಡಿಯಲ್ಲಿ ಮೂರು ಭಾಗ ಮಾಡಿ. ಒಂದು ಆರ್ಥಿಕವಾಗಿ ದುರ್ಬಲ ವರ್ಗದವರಿಗೆ. ಎರಡು ಮಧ್ಯಮ ವರ್ಗದವರಿಗೆ ಮೂರು ಮೇಲು ವರ್ಗದವರಿಗೆ ಹೀಗೆ ಮೂರು ಭಾಗಗಳಾಗಿ ನಿವೇಶನಗಳನ್ನು ಹಂಚಿಕೆ ಮಾಡಿದರು. ಈ ಯೋಜನೆಯಡಿಯಲ್ಲಿ ಪ್ರತಿಯೊಬ್ಬ ನಿವೇಶನ ಇಲ್ಲದವನಿಗೆ, ಮನೆ ಇಲ್ಲದವರಿಗೆ, ಮೈಸೂರು ನಗರದಲ್ಲಿ ವಾಸ ಮಾಡುವಂಥ ಪ್ರತಿಯೊಬ್ಬರಿಗೂ ಸಿಗಲೇಬೇಕೆನ್ನುವ ಯೋಜನೆಯನ್ನು ಅವರು ಹಾಕಿಕೊಂಡರು.

ಅದಕ್ಕೆ ಅಲ್ಲಿರತಕ್ಕಂಥ ಎಲ್ಲಾ ಕಾರ್ಯಕರ್ತರ ಸಲಹೆ, ಸಹಕಾರ ಪಡೆದು ಅರ್ಜಿಗಳನ್ನು ಕರೆದಾಗ ೪೪ ಸಾವಿರದ ೧೨ ಅರ್ಜಿಗಳು ಬಂದವು. ಆಗ ತಿಳಿದುಬಂದ ವಿಷಯ, ಅಂದರೆ ಉಳ್ಳವರೇ ಈ ಸೈಟುಗಳನ್ನು ಪಡೆಯಲಿಕ್ಕೆ ಪ್ರಯತ್ನ ಮಾಡಿರುವುದು ಯಾರಿಗೆ ಮನೆ ಇರುತ್ತದೆ, ಯಾರಿಗೆ ನಿವೇಶನ ಇರುತ್ತದೆ ಅವರೇ ಮತ್ತೊಂದನ್ನು, ಮೂರನೇ ಸೈಟನ್ನು ಪಡೆಯಲಿಕ್ಕೆ ಮಾಡಿದ್ದರು ಆ ರೀತಿಯ ಜನರೂ ಅಲ್ಲಿ ಇದ್ದರು. ಆಗ ಇದನ್ನು ಯಾವರೀತಿ ಪರಿಹಾರ ಮಾಡಬೇಕು ಇದಕ್ಕೆ ಒಂದು ಉಪಾಯ ಕಂಡುಹಿಡಿದು ಯೋಚನೆ ಮಾಡಿ ಒಂದು ನಿರ್ಧಾರಕ್ಕೆ ಬರಲಾಯಿತು. ಈ ಎಲ್ಲರೂ ಆಫೀಸಿಗೆ ಬಂದು ಪ್ರಮಾಣ ಪತ್ರ ಕೊಡಬೇಕೆಂದಾಯಿತು ಸರ್ವೇಸಾಮಾನ್ಯವಾಗಿ ಇದರ ಬಗ್ಗೆ ಎಲ್ಲರಿಗೂ ಗೊತ್ತಿದೆ. ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಲಿಕ್ಕೆ ಕೆಲವು ಜನರು ಹಿಂಜರಿಯುವುದಿಲ್ಲ ಹಾಗೆ ಮಾಡುವ ಅಭ್ಯಾಸ ಎಲ್ಲರಲ್ಲೂ ಬೆಳೆದು ಬಂದಿದೆ ಎಂದು ಬಂತು. ಮತ್ತೆ ಯಾರಿಗೆ ನಿವೇಶನ ಇಲ್ಲ ಮನೆ ಇಲ್ಲ ಎಂದು ಗುರುತಿಸುವುದು ಹೇಗೆ ಎನ್ನುವ ವಿಚಾರ ಬಂತು. ಆಗ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಬೇಕೆಂದು ಆಯಿತು, ಅವರು ಅನೇಕ ಸಾರಿ ಆಫೀಸಿಗೆ ಬಂದು ಹೋಗುವುದಕ್ಕೆ ಬದಲು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಬೇ

ಕೆಂದು ಯೋಚನೆ ಇಟ್ಟುಕೊಂಡು ಪ್ರತಿಯೊಂದು ವಾರದಲ್ಲಿಯೂ ಕೂಡ ಎರಡು ಮೂರು ದಿವಸ ಪರಿಶೀಲನೆ ಮಾಡಿ, ಆಯಾ ಸ್ಥಳಗಳಲ್ಲಿ ಯಾರಿಗೆ ನಿವೇಶನ ಇಲ್ಲ, ಮನೆಗಳು ಇಲ್ಲ ಎನ್ನುವುದನ್ನು ಪತ್ತೆ ಹಚ್ಚಿ, ನೋಡಿದಾಗ ೪೪ ಸಾವಿರ ಅರ್ಜಿ ಇದ್ದದ್ದು ಸುಮಾರು ೧೮ ಸಾವಿರಕ್ಕೆ ಇಳಿಯಿತು. ಈಗ ೧೫ ಸಾವಿರ ಜನರಿಗೆ ನಿವೇಶನ ಕೊಟ್ಟಿದ್ದಾರೆ. ಹಾಗೆಯೇ ಹುಡ್ಕೋ ಸಂಸ್ಥೆಯವರು ಸಹ ಆರ್ಥಿಕ ದುರ್ಬಲ ವರ್ಗದವರಿಗೆ ಆದಷ್ಟು ಬೇಗ ಮನೆ ಕಟ್ಟಿಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಈಗ ೬,೫೦೦ ಮನೆಗಳು ಎಲ್ಲವೂ ಮುಕ್ತಾಯ ಹಂತಕ್ಕೆ ಬಂದಿವೆ. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವಾಗ ಎರಡು ಮುಖ್ಯವಾದ ದೃಷ್ಟಿ ಇತ್ತು. ಒಂದು, ನಿವೇಶನ ಹಂಚಿಕೆಯಲ್ಲಿ ಮಧ್ಯಸ್ಥಗಾರ ಪಡೆಯುತ್ತಿದ್ದ ಲಾಭ ಅಥವಾ ಶುಲ್ಕ ಇದನ್ನು ತಪ್ಪಿಸಬೇಕು. ಮಧ್ಯಸ್ಥಗಾರ ಇಲ್ಲದಂತೆ ಮಾಡಬೇಕು. ಇನ್ನು ಎರಡನೆಯದು ಎಂದರೆ ಯಾರು ನಿವೇಶನ ಕೋರಿ ಆಫೀಸಿಗೆ ಬರುತ್ತಾರೆ, ಅವರು ಗುಮಾಸ್ತರನ್ನು ನೋಡುವಂಥದ್ದು, ಇಂಜಿನಿಯರ್ ನೋಡುವಂಥದ್ದು, ಮಾಡಬೇಕೆಂದರೆ ಆಗಲೂ ಕೂಡ ಅವನು ಭ್ರಷ್ಟಾಚಾರದಲ್ಲಿ ಸಿಕ್ಕಬೇಕಾಗುತ್ತದೆ ಎಂದು ತಿಳಿದುಕೊಂಡು ಅದನ್ನು ತಪ್ಪಿಸಲಿಕ್ಕೆ ಸ್ಥಳಕ್ಕೆ ಹೋಗಬೇಕೆಂದು ಮಾಡಿದೆವು. ಇನ್ನು ಮೂರನೆಯದು ಅಂದರೆ, ಆರ್ಥಿಕ ದುರ್ಬಲ ವರ್ಗದವರಿಗೆ ಕಡಿಮೆ ದರದಲ್ಲಿ ನಿವೇಶನ ಕೊಡಬೇಕೆನ್ನುವ ದೃಷ್ಟಿಯಿಂದ ಒಂದು ಚದರ ಮೀಟರ‍ಗೆ ೧೩೦ ರೂಪಾಯಿಗಳ ಬೆಲೆ ಬಿದ್ದಾಗ್ಯೂ ಕೂಡ ಆ ಯೋಜನೆ ಪ್ರಕಾರ ಆರ್ಥಿಕ ದುರ್ಬಲ ವರ್ಗದವರಿಗೆ ೩೦ ರೂಪಾಯಿಗಳ ಬೆಲೆಯಲ್ಲಿ ಒಂದು ಚದರ ಮೀಟರ್ ಜಾಗ ಕೊಡುವಂಥ ಯೋಜನೆ ಹಾಕಿಕೊಂಡು ಅದೇ ರೀತಿ ಕೊಡಲಾಯಿತು. ಹಾಗೆಯೇ ಮಧ್ಯಮ ವರ್ಗದವರಿಗೆ ಒಂದು ರೀತಿಯ ರಿಯಾಯಿತಿ ಕೊಡಬೇಕೆನ್ನುವ ದೃಷ್ಟಿಯಿಂದ ೧೩೦ ರೂಪಾಯಿಗಳ ದರದ ಬದಲು ೫೦ ರೂಪಾಯಿಗಳ ದರದಲ್ಲಿ ಕೊಡಬೇಕೆಂದು ತೀರ್ಮಾನ ಮಾಡಿ ಅದರಂತೆ ಕೊಟ್ಟರು. ಇದನ್ನು ಸರಿದೂಗಿಸುವುದಕ್ಕೆ ಮೂಲೆ ನಿವೇಶನಗಳು ಏನು ಇದ್ದವು ಅವುಗಳನ್ನು ಮಾಡಿದಾಗ ಸುಮಾರು ಒಂದು ಚದರ ಮೀಟರ್‌ಗೆ ೬೦೦ ರೂಪಾಯಿಗಳು ಬರುವಂತೆ ಆಯಿತು. ಅದನ್ನು ಇಲ್ಲಿ ಸರಿದೂಗಿಸಲಿಕ್ಕೆ ಏರ್ಪಾಡು ಮಾಡಿಕೊಂಡು ಒಂದು ವರ್ಷ ಎರಡು ತಿಂಗಳಲ್ಲಿ ಈ ಕೆಲಸ ಪೂರ್ತಿ ಆಯಿತು. ಇದನ್ನು ನೋಡಿದಾಗ ೩೧-೩-೧೯೮೮ರೊಳಗೆ ನಿವೇಶನರಹಿತರೆಲ್ಲರಿಗೂ ನಿವೇಶನಗಳನ್ನು ಕೊಡಲಾಗುತ್ತದೆ ಎಂದು ನನ್ನ ಅಭಿಪ್ರಾಯ. ನಂತರ ಮತ್ತೊಂದು ವಿಷಯವನ್ನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ನಮ್ಮ ವಿರೋಧಪಕ್ಷದವರೇ ಚಾಂಪಿಯನ್ ಎಂದು ತಿಳಿದುಕೊಂಡ ಹಾಗೆ ಕಾಣುತ್ತದೆ. ಆದರೆ ರಾಜ್ಯ ಸರ್ಕಾರ ಆ ಬಗ್ಗೆ ಇಷ್ಟರಮಟ್ಟಿಗೆ ಕೆಲಸ ಮಾಡಿದರೆ ಅವರೂ ಸಮಾನರೂ ನಾವು ಕೂಡ ಸಮಾಜದಲ್ಲಿ ಸಮಾನರು, ಸಮಾನತೆಯ ಹಕ್ಕನ್ನು ಪಡೆದುಕೊಳ್ಳುತ್ತಿದ್ದೇವೆ, ಸಮಾಜದಲ್ಲಿ ಯಾವ ರೀತಿಯಲ್ಲೇ ಆಗಲಿ ಅವರು ನಿರ್ಗತಿಕರು ಎಂಬ ಭಾವನೆ ಅವರಲ್ಲಿ ಬರಬಾರದು, ಅವರ ಬಗ್ಗೆ ಆ ಒಂದು ದೃಷ್ಟಿಯಿಂದ ಅನೇಕ ಕಾರ್ಯಕ್ರಮಗಳನ್ನು ಸರ್ಕಾರದವರು ಹಮ್ಮಿಕೊಂಡಿದ್ದಾರೆ. ೧೯೮೧ರ ಜನಗಣತಿ ಪ್ರಕಾರ ಪರಿಶಿಷ್ಟ ಜಾತಿಯವರ ಜನಸಂಖ್ಯೆ ೫೧.೯೫ ಲಕ್ಷ ಇದ್ದಾರೆ. ಅದೇ ರೀತಿ ಪರಿಶಿಷ್ಟ ವರ್ಗದವರ ಜನಸಂಖ್ಯೆ ೧೮.೫೫ ಲಕ್ಷ ಇದ್ದಾರೆಂಬುದರ ಮಾಹಿತಿ ನನಗೆ ಗೊತ್ತಿದೆ. ಇವರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಸರ್ಕಾರ ಒದಗಿಸಿಕೊಡುತ್ತಿದೆ. ನಮ್ಮ ಸರ್ಕಾರ ಅವರಿಗಾಗಿ ಅನೇಕ ಮನೆಗಳನ್ನು ಕಟ್ಟಿಸಿಕೊಟ್ಟಿದೆ.

ಶ್ರೀ **ಬಿ.** ಬಸವಲಿಂಗಪ್ಪ.—ಈ ವರ್ಷ ಎಷ್ಟು ಮನೆಗಳನ್ನು ಕಟ್ಟಿದ್ದೀರಿ ಎಂಬುದರ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟು ಮಾತನಾಡಬೇಕು.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಸಾಧ್ಯವಾದಷ್ಟು ಮಟ್ಟಿಗೆ ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಚಿಕ್ಕಬೋರಯ್ಯನವರ ಗೌರ್ನರ್ ಅಡ್ರೆಸ್ ಬಗ್ಗೆ ಮಾತನಾಡುತ್ತಿದ್ದಾರೆ. ಅವರು ಮಾತನಾಡುವಾಗ ಒಂದು ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಬರುವ ವರ್ಷದಲ್ಲಿ ಈ ಸರ್ಕಾರ ಆ ಬಗ್ಗೆ ಯಾವ ನೀತಿಯನ್ನು ಹಾಕಿಕೊಂಡಿದೆ ? ಯಾವ ತಳಹದಿಯ ಮೇಲೆ ಹೋಗುತ್ತಿದೆ ಎನ್ನುವ ಇದರಲ್ಲಿ ಒಂದೇ ಒಂದು ವಾಕ್ಯ ಕೂಡ ಕಂಡು ಬರಲಿಲ್ಲ. ಇದರ ಹಿನ್ನಲೆಯನ್ನು ಇಟ್ಟುಕೊಳ್ಳಿ. ಎರಡನೆಯದಾಗಿ ಈ ಸರ್ಕಾರ ಅದು ಮಾಡಿದೆ ಇದು ಮಾಡಿದೆ ಎನ್ನತಕ್ಕದ್ದನ್ನು ಹೇಳುತ್ತಿದ್ದೀರಿ. ಅದನ್ನು ಹೇಳುವಾಗ ಅಂಕಿ ಅಂಶಗಳನ್ನು ಕೊಡಲೇಬೇಕು. ನೀವು ಕಳೆದ ಮೂರು ವರ್ಷಗಳಿಂದ ಎಷ್ಟು ಸೈಟುಗಳನ್ನು ಕೊಟ್ಟಿದ್ದೀರಿ ? ಎಷ್ಟು ಮನೆಗಳನ್ನು ಕಟ್ಟಿಸಿಕೊಟ್ಟಿದ್ದೀರಿ ? ಎಂಬುದನ್ನು ಹೇಳಬೇಕಾಗುತ್ತದೆ. ನಮ್ಮ ತಾಲ್ಲೂಕಿನಲ್ಲಂತೂ ಒಂದು

ಮನೆಯನ್ನೂ ಕಟ್ಟಿಸಿಲ್ಲ. ಮುಂದೆ ಎಷ್ಟು ಕಟ್ಟಿಸಿಕೊಡುತ್ತೀರಿ ಎಂಬುದನ್ನು ಹೇಳಬೇಕು. ಏಕೆ ಈ ಸಾರಿ ಮಾಡುವುದಕ್ಕಾಗಲಿಲ್ಲ ? ಇದುವರೆವಿಗೂ ಏಕೆ ಮಾಡುವುದಕ್ಕಾಗಲಿಲ್ಲ ಎಂಬುದನ್ನು ಹೇಳಬೇಕು. ಆಮೇಲೆ ಯಾರಾರು ನಿಮ್ಮ ವರ್ಗದವರು ಇದ್ದಾರೆ, ಅವರಿಗೆ ಕ್ಲಾಸ್-೧ರ ನೌಕರಿಯನ್ನು ಕೊಡುತ್ತೇವೆಂದು ೫ ವರ್ಷದ ಹಿಂದೆಯೇ ಹೇಳಿದ್ದೀರಿ. ಇದುವರೆವಿಗೂ ಒಬ್ಬರಿಗೂ ಆ ನೌಕರಿಯನ್ನು ಕೊಟ್ಟಿಲ್ಲ, ಏಕೆ ಕೊಟ್ಟಿಲ್ಲ ?

ಶ್ರೀ ರಮೇಶ್ ಕುಮಾರ್.—ಯಾರನ್ನು ಕೇಳಬೇಕೋ ಅವರನ್ನು ಕೇಳಬೇಕು. ಸರ್ಕಾರವನ್ನು ಕೇಳಿದರೆ ಅವರು ಹೇಳುತ್ತಾರೆ. ಇವರನ್ನು ಕೇಳಿದರೆ ಏನು ಹೇಳುತ್ತಾರೆ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಹೊಸದಾಗಿ ಸದಸ್ಯರಾಗಿ ಬಂದಿದ್ದಾರೆ ನಮ್ಮ ಕರ್ತವ್ಯ ಏನು ಎಂದರೆ, ನಮ್ಮದೂ ಕೂಡ ಮಾರ್ಗದರ್ಶನ ಇರಬೇಕು. ಏಕೆಂದರೆ ನಾವು ಸೀನಿಯರ್ಸ್ ಯಾವ ರೀತಿ ಅವರನ್ನು ತಮ್ಮ ತರ್ಕವನ್ನು ಮುಂದಿಡಬೇಕೆಂಬುದನ್ನು ಹೇಳಬೇಕು ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ವಿವರವನ್ನು ಕೊಟ್ಟರೆ ನನಗಂತೂ ಆನಂದವಾಗುತ್ತದೆ.

ಉಪಾಧ್ಯಕ್ಷರು.—ಅದನ್ನು ಹೇಳುವವರಿಗೆ ಹೇಳಿದರೆ ಅವರು ಉತ್ತರ ಕೊಡುತ್ತಾರೆ. ಇವರಿಗೆ ಹೇಳಿದರೆ ಅವರು ಹೇಗೆ ಉತ್ತರವನ್ನು ಕೊಡುತ್ತಾರೆ ?

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಕೇಳಿದಕ್ಕೆ ನನ್ನ ಧನ್ಯವಾದಗಳು. ಸುಮಾರಾಗಿ ವಿವರಗಳನ್ನು ಹೇಳುವುದಾದರೆ, ೧೯೮೩-೮೪ರಲ್ಲಿ ೭೫ ಸಾವಿರ ಕುಟುಂಬಗಳನ್ನು ಬಡತನದ ರೇಖೆಯಿಂದ ಮೇಲಕ್ಕೆ ಎತ್ತುವಂತಹ ಕೆಲಸ ಆಗಿದೆ.

೩-೩೦ ಪಿ. ಎಂ.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಕ್ಷಮಿಸಬೇಕು, ಮಾನ್ಯ ಚಿಕ್ಕಬೋರಯ್ಯನವರಿಗೆ ತೊಂದರೆ ಕೊಡಬೇಕೆಂದು ಹೇಳುತ್ತಿಲ್ಲ. ಒಂದೇ ಒಂದು ವಿಷಯ, ಅವರು ಬಡವರ ಬಗ್ಗೆ ಈ ಸದನದಲ್ಲಿ ಹೇಳಬೇಕೆಂದು ಹೇಳುತ್ತಿದ್ದಾರೆ. ಆದರೆ ಮಾನ್ಯ ಮಂತ್ರಿ ಮಂಡಲದ ಸಚಿವರಾದ ಹೌಸಿಂಗ್ ಮಿನಿಸ್ಟರ್ ಮೋಹಿನುದ್ದೀನ್‌ರವರು ಒಂದು ಹೇಳಿಕೆಯನ್ನು ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಬಡವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿರುವ ಕಂತುಗಳನ್ನೇ ಅವರು ಕೊಟ್ಟಿಲ್ಲ, ಮತ್ತೆ ನಾವು ಎಲ್ಲಿಂದ ಹಣವನ್ನು ತಂದುಕೊಡಲು ಸಾಧ್ಯವಾಗುತ್ತದೆ. ಈ ವರ್ಷದಲ್ಲಿ ಕರ್ನಾಟಕದಲ್ಲಿ ಮನೆಗಳನ್ನು ಕಟ್ಟಲಿಕ್ಕೆ ಆಗಿಲ್ಲವೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರುವ ಹೇಳಿಕೆ ತಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಮಾನ್ಯ ಸದಸ್ಯರು ಮಾತನಾಡಲು ಅವಕಾಶ ಕೊಡಿ.

ಶ್ರೀ ರಮೇಶ್ ಕುಮಾರ್.—ಮಾನ್ಯ ಅಧ್ಯಕ್ಷರೇ ಅವರಿಗೆ ಏನು ಅನುಕೂಲವಾಗುತ್ತದೆಯೋ ಅಷ್ಟು ಮಾತ್ರ ಹೇಳಿದರು ಅದಕ್ಕೆ ಪರ್ಯಾಯ ಆಲೋಚನೆ ಮಾಡಿರುತ್ತೇವೆಂದು ಹೇಳಿರುವುದನ್ನು ಹೇಳಲಿಲ್ಲ, ಹೌಸಿಂಗ್ ಬೋರ್ಡನ್ನು ಪ್ರತ್ಯೇಕಮಾಡಿ ರೂರಲ್ ಹೌಸಿಂಗ್ ಕಾರ್ಪೋರೇಷನ್ ಮಾಡುವ ಪರ್ಯಾಯ ವ್ಯವಸ್ಥೆಯನ್ನು ಮಾಡಿ ಹಣವನ್ನು ತರುತ್ತೇವೆಂದು ಹೇಳಿರುತ್ತಾರೆ. ಅದನ್ನು ಮಾನ್ಯ ಬಂಗಾರಪ್ಪನವರು ಓದಲಿಲ್ಲವೆಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು ಕೊಟ್ಟಿರತಕ್ಕ ಸ್ಟೇಟ್‌ಮೆಂಟ್‌ನಲ್ಲಿ ಒಂದು ಅಂಶವನ್ನು ಮಾತ್ರ ಹೇಳಿದೆ. ಈ ವರ್ಷ ಒಂದು ಮನೆಯನ್ನೂ ಕಟ್ಟಲಿಕ್ಕೆ ಆಗಿಲ್ಲವೆಂದು ಹೇಳಿದ್ದಾರೆ, ಮಾನ್ಯ ರಮೇಶ್ ಕುಮಾರ್‌ರವರಿಗೆ ಪತ್ರಿಕೆಯಲ್ಲಿ ಬಂದಿರುವುದನ್ನು ಕಳುಹಿಸಿಕೊಡುತ್ತೇನೆ, ಅದನ್ನು ನೋಡಿದಮೇಲೆ ಅವರು ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಮನೆಗಳನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ, ಯಾರಿಗೆ ಮನೆಗಳನ್ನು ಕೊಟ್ಟಿದ್ದೀರಿ ? ಬಡವರ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ತಾವು ಇಲ್ಲ.

ಜನತಾ ಮನೆಗಳನ್ನು ಮತ್ತು ನಿವೇಶನಗಳನ್ನು ಕೊಡತಕ್ಕ ಕಾರ್ಯ ನಿಮ್ಮ ಸರ್ಕಾರದಿಂದ ಆಗುತ್ತಿಲ್ಲ. ೧೯೮೦ ರಲ್ಲಿ ಇನ್‌ಸ್ಪೆಕ್ಟ್ ಮಾಡಿ ನಾವು ಪರವಾನಿಗೆಯನ್ನು ಕೊಟ್ಟಿದ್ದೇವೆ. ನಮ್ಮ ಕಾಲದಲ್ಲಿ ೧೪ ಲಕ್ಷ ನಿವೇಶನಗಳನ್ನು ಹಂಚಿದ್ದೇವೆ. ೧೯೮೩ ಕ್ಕೆ ಮೊದಲು ಕೊಟ್ಟಿರುವುದು. ಅನಂತರ ಐದು ವರ್ಷಗಳ ಅವಧಿಯಲ್ಲಿ ನೀವು ಏನನ್ನೂ ಕೊಟ್ಟಿಲ್ಲ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಧರ್ಮಸಿಂಗ್‌ರವರು ಹೇಳಿದ್ದಕ್ಕೆ ಉತ್ತರ ಹೇಳುತ್ತೇನೆ. ಮೈಸೂರಿನಲ್ಲಿ ಯಾವರೀತಿ ನಡೆದಿದೆ ಎನ್ನುವುದನ್ನು ಹೇಳುತ್ತೇನೆ, ಸುಮಾರು ೧೮ ಸಾವಿರ ಸೈಟುಗಳಲ್ಲಿ ಮನೆಗಳನ್ನು ಕಟ್ಟಿದ್ದಾರೆ. ಈಗಾಗಲೇ ಒಂದು ವರ್ಷದಿಂದ ಅಲ್ಲಿ ಜನರು ವಾಸಮಾಡುತ್ತಿದ್ದಾರೆ ಇನ್ನೂ ಮನೆಗಳನ್ನು ಕಟ್ಟುತ್ತಿರುತ್ತಾರೆ. ಇದನ್ನು ಸ್ಥಳಕ್ಕೆ ಹೋಗಿ ನೋಡಿ ಬಂದರೆ ತಮಗೆ ವೇದ್ಯವಾಗುತ್ತದೆ. ಜನತಾ ಸರ್ಕಾರದವರು ಸೈಟುಗಳನ್ನು ಕೊಟ್ಟಿಲ್ಲ, ಮನೆಗಳನ್ನು ಕಟ್ಟಿಲ್ಲವೆಂದು ಹೇಳುವುದು ಸುಳ್ಳು. ಸ್ಥಳಕ್ಕೆ ಹೋಗಿ ನೋಡಿದರೆ ನಿಮಗೇ ವೇದ್ಯವಾಗುತ್ತದೆ. ಈ ಸದನದಲ್ಲಿ ಹೇಳುವುದಾದರೆ ಒಂದು ಲಕ್ಷ ಏಳು ಸಾವಿರ ನಿವೇಶನಗಳನ್ನು ಹರಿಜನರಿಗೆ ಕೊಡಲಾಗಿದೆ.

SRI B. BASAVALINGAPPA.—It is shame. I do not know what has happened to these people. Why do you call as Harijans? It is not correct. It pricks us. Suppose I call somebody as a Lingayath Minister or a Vokkaliga Minister or a Kumbara Minister, what does it mean? Please do not insult us.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಇಲ್ಲಿ ಯಾರಿಗೂ ಅವಮಾನ ಮಾಡಬೇಕೆಂಬ ದೃಷ್ಟಿಯಿಂದ ಹೇಳುತ್ತಿಲ್ಲ. ದಯವಿಟ್ಟು ಕ್ಷಮಿಸಬೇಕು. ಆ ಪದವನ್ನು ನಾನು ಹೊಸದಾಗಿ ಸೃಷ್ಟಿ ಮಾಡಿದ್ದಲ್ಲ. ಮಹಾತ್ಮ ಗಾಂಧೀಜಿಯವರು ಸೃಷ್ಟಿ ಮಾಡಿದುದ್ದು.

SRI B BASAVALINGAPPA.—Who asked that Gandhiji to give? What is that? Why are you saying it? None of the Members should mention and call us as Harijans.

MR. DEPUTY SPEAKER.—ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳಿ. ಹೀಗಾದರೆ ಅವರು ಬೇಗ ಮುಂದುವರಿಸಬೇಕು?

SRI B. BASAVALINGAPPA.—It does not affect you. Who is not affected will tell it. Mr. Krishnan is not affected. You are not affected. Please don't do that job.

SRI R. L. JALAPPA.—ಚಿಕ್ಕಬೋರಯ್ಯನವರು......

SRI M. S. KRISHNAN.—You are also not affected.

SRI B. BASAVALINGAPPA.—What is that you say? Why do you use that word?

SRI M. S. KRISHNAN.—You have no right to bring my name.

SRI B. BASAVALINGAPPA.—What did I say?

SRI M, S. KRISHNAN.—Whatever you said is wrong.

MR. DEPUTY SPEAKER.—Please be seated.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಎಂದು ಇದೆ. ಅದನ್ನಾದರೂ ಬಳಕೆ ಮಾಡಿ. Nowhere in the Constitution it is mentioned that Harijans or Girijans. It is mentioned only as Scheduled Castes and Scheduled Tribes.

SRI B. BASAVALINGAPPA.—I want to bring it to the notice of the House that Government has passed an order that the word Harijan should be deleted from the correspondence. I am bringing it and showing the Government Order. When the Government itself has passed the order 3 years ago, why do you use it again ? Even the Constitution does not mention this name. Why do you call us over and over again ? Mahatma Gandhi might have given this name. We do not care. It is he who called as Harijans. He belongs to Vaishnavas. He was never called as Harijans. It is very bad.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಚಿಕ್ಕಬೋರಯ್ಯನವರು ವಿದ್ಯಾವಂತರು ಜೊತೆಗೆ ಹಲವಾರು ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ. ಅವರು ಹರಿಜನರು ಎಂದು ಉಪಯೋಗಿಸಿದ್ದುದು ಯಾವುದೇ ವಿಧದಲ್ಲಿ ಇನ್‌ಸಲ್ಟ್ ಮಾಡಬೇಕೆಂದು ಅಲ್ಲ.

SRI B. BASAVALINGAPPA.—We take it as an insult. Please do not advise us.

ಶ್ರೀ ಆರ್. ಎಲ್. ಜಾಲಪ್ಪ.—ಗುಲಾಬಿ ಹೂವು ಯಾವ ವಿಧದಲ್ಲಿ ಕರೆದರೂ ಗುಲಾಬಿ ಹೂವೇ.

SRI B. BASAVALINGAPPA.—What are you talking ? Why are you advising ? To whom you are advising ?

ಶ್ರೀ ಆರ್. ಎಲ್. ಜಾಲಪ್ಪ.—ಇಲ್ಲಿ ತಾವು ಸುಮ್ಮನೆ ಕೂಗಾಡುವುದರಿಂದ ಪ್ರಯೋಜನವಿಲ್ಲ. ಹರಿಜನರು ಎಂದು ಕರೆದಾಕ್ಷಣ ಇಷ್ಟೊಂದು ಕೋಪ ಮಾಡಿಕೊಳ್ಳುವುದು ಅನಾವಶ್ಯಕ. ಅವರು ಆ ಪದವನ್ನು ಕೆಟ್ಟ ಭಾವನೆಯಿಂದ ಉಪಯೋಗಿಸಿಲ್ಲವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಉಪಾಧ್ಯಕ್ಷರು.—ಇಂಟರಪ್‌ಷನ್ ಮಾಡಿ ಅರ್ಧ ಗಂಟೆ ಹೋಯಿತು, ಮುಂದೆ ಹೋಗಿ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಬಸವಲಿಂಗಪ್ಪನವರೆ ಆ ಪದವನ್ನು ಉಪಯೋಗಿಸಿದ್ದರಿಂದ ಬಹಳ ನೋವಾಯಿತು ಎಂಬ ಭಾವನೆಯನ್ನು ವ್ಯಕ್ತಪಡಿಸಿದರು. ನಿಜವಾಗಿ ಅವರಿಗೆ ನೋವಾಗಿದ್ದ ಪಕ್ಷದಲ್ಲಿ ಅದಕ್ಕಾಗಿ ನಾನು ವಿಷಾದ ವ್ಯಕ್ತಪಡಿಸುತ್ತೇನೆ.

ಆದ್ದರಿಂದ ನನ್ನ ಅಭಿಪ್ರಾಯ ಇಷ್ಟೆ. ಎಷ್ಟು ನಿವೇಶನಗಳನ್ನು ಮತ್ತು ಮನೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ಅಂಕಿಅಂಶ ಕೊಡಿ ಎಂದು ಮಾನ್ಯ ಬಸವಲಿಂಗಪ್ಪನವರು ಕೇಳಿದರು. ಅದನ್ನು ಹೇಳಲಿಕ್ಕೆ ನಾನು ಪ್ರಯತ್ನ ಮಾಡಿದೆ. ಆ ಸಂದರ್ಭದಲ್ಲಿ ಈ ಕಹಿ ವಾತಾವರಣ ಪ್ರಾರಂಭವಾಯಿತು. ಈ ಎರಡು ವರ್ಗದ ಜನರಿಗೆ ನಿವೇಶನಗಳನ್ನು ಕೊಟ್ಟಿರುವುದು ೧ ಲಕ್ಷ ೭ ಸಾವಿರ ಹಾಗೆಯೇ ಜನತಾ ಮನೆಗಳನ್ನು ೬೦ ಸಾವಿರ ಕಟ್ಟಿಸಿ ಈ ವರ್ಗದ ಜನರಿಗೆ ಕೊಟ್ಟಿದ್ದಾರೆ. ಏನೂ ನಿವೇಶನ ಕೊಡಲಿಲ್ಲ, ಯಾವ ಮನೆಯನ್ನೂ ಇಲ್ಲಿಯವರೆಗೆ ಒದಗಿಸಿಕೊಟ್ಟಿಲ್ಲ. ಎಂದು ಹೇಳಿದರೆ ಅದು ಸತ್ಯಕ್ಕೆ ದೂರವಾದುದು ಎಂದು ನಾವಾದರೂ ಹೇಳಬಯಸುತ್ತೇನೆ ಅದೇರೀತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಇನ್ನೂ ಅನೇಕ ಸೌಲಭ್ಯಗಳನ್ನು ರಾಜ್ಯ ಸರ್ಕಾರ ಒದಗಿಸಿಕೊಟ್ಟಿದೆ. ಅದೂ ಗ್ರಾಮಾಂತರ ಜನರಿಗೆ ಮಾತ್ರವಲ್ಲದೆ ನಗರದಲ್ಲಿರುವ ಜನರಿಗೂ ಕೂಡ ಅದರ ಲಾಭ ದೊರೆತಿದೆ. ಯಾವ ರೂಪದಲ್ಲಿ ಎಂದರೆ ಬೆಂಗಳೂರು ನಗರದಲ್ಲಿ ಮತ್ತು ಇನ್ನೂ ಅನೇಕ ದೊಡ್ಡ ದೊಡ್ಡ ನಗರಗಳಲ್ಲಿ ಕೊಳಚೆ ಪ್ರದೇಶಗಳಿವೆ. ಇದನ್ನೆಲ್ಲಾ ತೆಗೆದು ಅವರಿಗೆ ಸೂರನ್ನು ಒದಗಿಸಿಕೊಡುವ ದೃಷ್ಟಿಯಿಂದ ಕೊಳಚೆ ನಿರ್ಮೂಲನಾ ಮಂಡಳಿ ಅನೇಕ ಮನೆಗಳನ್ನು ಕಟ್ಟಿಸಿಕೊಟ್ಟಿದೆ. ಉದಾಹರಣೆಗೆ ಹೇಳುವುದಾದರೆ ಮೈಸೂರು ನಗರ ಒಂದರಲ್ಲೇ ೬೦೦ ಮನೆಗಳನ್ನು ಈ ಮಂಡಳಿ ಒದಗಿಸಿದೆ. ಇದನ್ನು ನೋಡಿದಾಗ ನಿಜವಾಗಿಯೂ ರಾಜ್ಯ ಸರ್ಕಾರಕ್ಕೆ ಈ ವರ್ಗದ ಜನರ ಬಗ್ಗೆ ಕಳಕಳಿ ಇದೆ, ಇವರ ಜೀವನ ಉತ್ತಮಪಡಿಸಬೇಕು ಎಂಬ ಕಾತುರತೆ ಇದೆ, ಆ ಮನೋಪ್ರವೃತ್ತಿ ಬೆಳೆಸಿಕೊಂಡು ಬಂದಿದ್ದಾರೆ ಎಂದು ಅನ್ನಿಸುತ್ತದೆ. ಈ ಜನಾಂಗಕ್ಕೆ ಯಾವ ರೀತಿಯ ಸಹಾಯ ದೊರೆತಿಲ್ಲ ಎಂದು ಹೇಳುವುದು ಸುಳ್ಳು. ಇಷ್ಟೇ ಅಲ್ಲದೆ ಇವರು ವಿದ್ಯಾವಂತರಾಗ

ಬೇಕೆನ್ನುವ ದೃಷ್ಟಿಯಿಂದ ಅನೇಕ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಟ್ಟಿರುವುದಲ್ಲದೆ ಇವರು ಉಳಿಯುವುದಕ್ಕೆ ವಿದ್ಯಾರ್ಥಿನಿಲಯಗಳನ್ನೂ ಹೊಸದಾಗಿ ಕಟ್ಟಿಸಿ ಕೊಟ್ಟಿದ್ದಾರೆ. ೫ ವರ್ಷದ ಅವಧಿಯಲ್ಲಿ ಬಹಳಷ್ಟು ವಿದ್ಯಾರ್ಥಿನಿಲಯಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ವಿದ್ಯಾರ್ಥಿವೇತನವನ್ನು ಮೊದಲೆಷ್ಟಿತ್ತೋ ಅದರ ಒಂದೂವರೆಯಷ್ಟು ಈಗ ಜಾಸ್ತಿ ಮಾಡಿದ್ದಾರೆ. ಇದನ್ನೆಲ್ಲಾ ನೋಡಿದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಕ್ಕಳೂ ಕೂಡ ವಿದ್ಯಾವಂತರಾಗಿ ಅವರೂ ಸಮಾಜದಲ್ಲಿ ಬೇರೆಯವರಿಗೆ ಸಮಾನರಾಗಿ ಬೆಳೆಯಬೇಕೆಂಬ ದೃಷ್ಟಿಯಿಂದ ಕಾರ್ಯಕ್ರಮ ನಡೆಯುತ್ತಿದೆ ಎನ್ನುವ ಭಾವನೆ ಬರುತ್ತದೆ. ಈ ವರ್ಗದ ವಿದ್ಯಾರ್ಥಿಗಳ ಪೈಕಿ ಒಂದರಿಂದ ಮೂರನೇ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಅದರ ತರುಣದಲ್ಲಿಯೇ ಎ ಮತ್ತು ಬಿ ವರ್ಗದ ಹುದ್ದೆಗಳನ್ನು ಕೊಡಬೇಕು ಎಂದು ನಿರ್ಧಾರ ಮಾಡಿ ಅದನ್ನು ಪಾಲಿಸಿಕೊಂಡು ಬಂದಿದ್ದಾರೆ. ಈ ರೀತಿ ಒಂದರಿಂದ ಮೂರನೇ ರ್‍ಯಾಂಕ್ ಪಡೆದಿರುವವರಿಗೆ ಎಲ್ಲಿ ಕೆಲಸ ಕೊಡಲಿಲ್ಲ ಎಂಬ ಮಾಹಿತಿ ಕೊಟ್ಟ ಪಕ್ಷಕ್ಕೆ.....

ಶ್ರೀ ಬಿ. ಬಸವಲಿಂಗಪ್ಪ.— ಮೊದಲನೇ ಸಾರಿ ೫೮ ಜನರನ್ನು ಪ್ರಕಟಣೆ ಮಾಡಿದರು. ಆದರೆ ಕೆಲವರು ಹೈಕೋರ್ಟಿಗೆ ಹೋಗಿ ಸ್ಟೇ ತಂದರು. ಆ ಸ್ಟೇ ಹಾಗೇ ಇದೆ. ಇನ್ನೂ ಒಬ್ಬರನ್ನೂ ಅಪಾಯಿಂಟ್ ಮಾಡಿಲ್ಲ. ಅಪಾಯಿಂಟ್‌ಮೆಂಟ್ ಕೊಟ್ಟಿಲ್ಲ. ಕೊಡದೇ ಇದ್ದುದನ್ನು ಕೊಟ್ಟರು ಎಂದು ಹೇಳಬೇಡಿ.

ಶ್ರೀ ವಿ. ಎಂ. ಚಿಕ್ಕಬೋರಯ್ಯ.— ನಿರ್ವಂಚನೆಯಿಂದ ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡುವಾಗ ಹೈಕೋರ್ಟಿನಿಂದ ತಡೆಯಾಜ್ಞೆ ಬಂದರೆ ಅದಕ್ಕೆ ನಾವು ಜವಾಬ್ದಾರಿಯೆ? ಅಥವಾ ತಡೆಯಾಜ್ಞೆ ತಂದವರು ಜವಾಬ್ದಾರಿಯೇ ಎಂಬುದನ್ನು ತಾವೇ ಯೋಚನೆ ಮಾಡಬೇಕು. ಈ ರೀತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸೌಲಭ್ಯಗಳನ್ನು ಅನೇಕ ರೀತಿಯಲ್ಲಿ ಒದಗಿಸಿಕೊಟ್ಟು ಅವರ ಜೀವನ ಉತ್ತಮಪಡಿಸುವುದಕ್ಕೆ ಕಾರ್ಯಕ್ರಮ ನಡೆಯುತ್ತಿದೆ. ಇನ್ನೂ ನಡೆಯುವುದರಲ್ಲಿದೆ, ಮಹಿಳೆ ಮತ್ತು ಮಕ್ಕಳ ಜೀವನವನ್ನು ಉತ್ತಮಪಡಿಸುವುದಕ್ಕೆ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಈಗಾಗಲೇ ನಾನು ತಿಳಿದಹಾಗೆ ಇದುವರೆಗೂ ಆ ಮಹಿಳೆಯರನ್ನು ಯಾವ ಕೆಲಸಕ್ಕೂ ಬಾರದವರು ಎನ್ನುವಂತೆ ಇಟ್ಟಿದ್ದರು. ಆದರೆ ಅದು ತಪ್ಪು, ಅದನ್ನು ಸರಿಪಡಿಸಬೇಕು ಎಂಬ ದೃಷ್ಟಿಯಿಂದ ನಮ್ಮ ರಾಜ್ಯ ಸರ್ಕಾರದವರು ಮೊದಲನೆಯದಾಗಿ ಮಹಿಳೆಯರಿಗೆ ನಗರಸಭೆಗಳಲ್ಲಿ, ಜಿಲ್ಲಾ ಪರಿಷತ್ತುಗಳಲ್ಲಿ ಮತ್ತು ಮಂಡಲ ಪಂಚಾಯತ್‌ಗಳಲ್ಲಿ ಮೀಸಲಾತಿಯನ್ನು ಒದಗಿಸಿಕೊಟ್ಟು ಅವರೂ ಕೂಡ ರಾಜ್ಯ ಸರ್ಕಾರದ ಕೆಲಸಕಾರ್ಯಗಳಲ್ಲಿ ಸಕ್ರಿಯವಾಗಿ ಕೆಲಸ ಮಾಡಬೇಕೆಂಬ ದೃಷ್ಟಿಯಿಂದ ಅನೇಕ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೇವೆ. ಅದೇರೀತಿ ನೌಕರಿಯಲ್ಲಿರತಕ್ಕ ಮಹಿಳೆಯರಿಗೂ ಕೂಡ ಅನುಕೂಲಗಳನ್ನು ಒದಗಿಸಿಕೊಡಬೇಕೆಂಬ ದೃಷ್ಟಿಯಿಂದ ಅನೇಕ ಹಾಸ್ಟೆಲ್‌ಗಳನ್ನು ಕಟ್ಟಿಸಿ ಅವುಗಳಲ್ಲಿ ವಸತಿ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೇವೆ. ಇದನ್ನೆಲ್ಲಾ ನೋಡಿದರೆ ನಿಜವಾಗಿಯೂ ನಮ್ಮ ರಾಜ್ಯಸರ್ಕಾರ ಈ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣದ ಬಗ್ಗೆ ಎಷ್ಟು ಆಸಕ್ತಿ, ಕಳಕಳಿಯನ್ನು ಹೊಂದಿದೆ ಎಂಬುದು ಗೊತ್ತಾಗುತ್ತದೆ. ಇಷ್ಟೇ ಅಲ್ಲದೆ ನಮ್ಮ ರಾಜ್ಯಸರ್ಕಾರ ಪ್ರತಿಯೊಂದು ರಂಗದಲ್ಲಿಯೂ ಅತ್ಯುತ್ತಮ ಕೆಲಸಗಳನ್ನು ಮಾಡುತ್ತಿದೆ. ಇದರ ಪ್ರತಿಫಲ ರಾಜ್ಯದ ಜನತೆಗೆ ಅದರಲ್ಲೂ ಬಡ ಜನತೆಗೆ ಸಿಕ್ಕುತ್ತಿದೆ. ಮಾನ್ಯ ರಾಜ್ಯಪಾಲರ ಭಾಷಣ ನಿರಾಶೆಯಾದುದು, ನಿಸ್ಸಾರವಾದುದು ಎಂದು ಹಲವಾರು ಆಕ್ಷೇಪಗಳನ್ನು ಕೆಲವು ಸದಸ್ಯರು ಆಡಿದ್ದಾರೆ. ಆ ರೀತಿಯ ನಿರಾಶಾದಾಯಕವಾದುದು ಯಾವುದು? ನಿಸ್ಸಾರವಾದುದು ಯಾವುದು ಎಂಬುದನ್ನು ಮಾನ್ಯ ಸದಸ್ಯರು ಸ್ಪಷ್ಟವಾಗಿ ತಿಳಿಸಬೇಕು. ಸುಮ್ಮನೆ ಆ ರೀತಿ ಹೇಳುವುದು ಸರಿಯಲ್ಲ, ನಾನು ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುವುದಾದರೂ ಇಷ್ಟೆ ನಮ್ಮ ದೇಶಕ್ಕೆ ಸ್ವಾತಂತ್ರ ಬಂದು ೪೦ ವರ್ಷದ ನಂತರ ಎಂದರೆ ೩೫ ವರ್ಷಗಳ ಕಾಲ ಏನು ಆಡಳಿತವನ್ನು ನಡೆಸಿದರು ಆ ಅವಧಿಯಲ್ಲಿ ನಮ್ಮ ವಿರೋಧಪಕ್ಷದವರು ಮಹಿಳೆಯರ ಬಗ್ಗೆ, ಮಕ್ಕಳ ಬಗ್ಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಬಗ್ಗೆ ಏನು ಕೆಲಸ ಮಾಡಿದ್ದಾರೆ? ಅವರ ಜೀವನ ಮಟ್ಟವನ್ನು ಎಷ್ಟರಮಟ್ಟಿಗೆ ಉತ್ತಮಗೊಳಿಸಿದ್ದಾರೆ ಅದಕ್ಕಿಂತಲೂ ಹೆಚ್ಚಿನ ಉತ್ತಮ ಸ್ಥಿತಿಗೆ ನಮ್ಮ ಜನತಾ ಸರ್ಕಾರ ಕಳೆದ ಕೇವಲ ೫ ವರ್ಷಗಳ ಕಾಲದಲ್ಲಿ ಕೆಲಸ ಮಾಡಿದೆ ಎಂಬುದನ್ನು ಹೋಲಿಕೆ ಮಾಡಿ ನೋಡಿದಾಗ ನಮ್ಮ ಸರ್ಕಾರ ಪ್ರಾಮಾಣಿಕವಾಗಿ ಕೆಲಸವನ್ನು ಮಾಡುತ್ತಿದೆ ಎಂಬುದರಲ್ಲಿ ಯಾವುದೇ ಸಂದೇಹವೂ ಇಲ್ಲವೆಂದು ನಾನು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಇಷ್ಟು ಮಾತ್ರವಲ್ಲದೆ ಹಿಂದುಳಿದವರಿಗೆ, ಅಲ್ಪ ಸಂಖ್ಯಾತರಿಗೆ ಹೀಗೆ ಪ್ರತಿಯೊಬ್ಬರಿಗೂ ಹಲವಾರು ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡುತ್ತಿದ್ದೇವೆ. ಇದರಿಂದಾಗಿ ಆ ಅಲ್ಪ ಸಂಖ್ಯಾತರೂ ಕೂಡ ನಾವು ಈ ಸಮಾಜದಲ್ಲಿ ಯಾರಿಗಿಂತಲೂ ಹಿಂದುಳಿದವರಲ್ಲ, ನಾವು ಯಾರಿಗೂ ತಲೆತಗ್ಗಿಸಿ ಬಾಳಬೇಕಾಗಿಲ್ಲ, ಅಥವಾ ಯಾವುದರಲ್ಲೂ ನಾವು ದುರ್ಬಲರಲ್ಲ ಬೇರೆ ಯಾವರಂತೆ ನಾವು ಸಮಾಜದಲ್ಲಿ ಉತ್ತಮ ಜೀವನವನ್ನು ನಡೆಸಬಲ್ಲೆವು ಎಂಬ ಮನೋಭಾವನೆ ಅವರಲ್ಲಿ ಬಂದಿದೆ. ಸಮಾಜದಲ್ಲಿ ಎಲ್ಲರಂತೆ ನಾವೂ ಬಾಳುವುದಕ್ಕೆ ಅರ್ಹತೆಯನ್ನು ಪಡೆದಿದ್ದೇವೆಂದು ಹೇಳಿಕೊಳ್ಳತಕ್ಕ ರೀತಿಯಲ್ಲಿ ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದೇವೆ. ಇದೇರೀತಿಯ ಇನ್ನೂ ಅನೇಕ ಅಭಿವೃದ್ಧಿ ಕಾರ್ಯಗಳನ್ನು ನಮ್ಮ ರಾಜ್ಯ ಸರ್ಕಾರ ಹಾಕಿಕೊಂಡಿದೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ನಾನಾದರೂ ಕೇಳಿಕೊಳ್ಳುವುದು ಇಷ್ಟೇ. ನಮ್ಮ ರಾಜ್ಯ ಸರ್ಕಾರ ಬಡವರ ಹಿತದೃಷ್ಟಿಯಿಂದ ಯಾವುದೇ ಕೆಲಸಗಳನ್ನು ಮಾಡಿದರೂ ಕೂಡ ತಾವು ಬಣ್ಣದ ಕನ್ನಡಕದಿಂದ ನೋಡುವುದು ಬೇಡ, ನಮ್ಮ ಸರ್ಕಾರ ಮಾಡತಕ್ಕ ಕೆಲಸಗಳನ್ನು ನೈಜವಾದ ಸ್ಥಿತಿಯಲ್ಲಿ ನೋಡಿ. ಉತ್ತಮ ಕೆಲಸಗಳನ್ನು ಮಾಡಿದರೆ ಅದಕ್ಕೆ ತಪ್ಪು ಮೆಚ್ಚುಗೆಯನ್ನು ಸೂಚಿಸಿ ಆದರೆ ಕೇವಲ ಪ್ರಚಾರಕ್ಕೋಸ್ಕರ ವಾದ ಮಾಡುವುದು ಬೇಡ. ಇಲ್ಲಿ ಪ್ರಚಾರ ಮುಖ್ಯವಲ್ಲ. ಜನತೆಯ ಉದ್ಧಾರ, ಸಮಾಜದ ಉದ್ಧಾರ ಮುಖ್ಯವಾದುದು ನಮ್ಮ ಸರ್ಕಾರದ ಉತ್ತಮ ಕೆಲಸಗಳಿಗೆ ತಾವು ಪ್ರೋತ್ಸಾಹ, ಬೆಂಬಲಗಳನ್ನು ನೀಡಿ ರಾಜ್ಯ ಸರ್ಕಾರದ ಯೋಜನೆಗಳು, ಕೆಲಸ ಕಾರ್ಯಗಳು ಸುಲಲಿತವಾಗಿ ಆಗುವುದಕ್ಕೆ ಸಹಕರಿಸಬೇಕೆಂದು ಕೇಳಿಕೊಂಡು, ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,

† ಶ್ರೀ ಕೆ. ರಮೇಶ್‌ಕುಮಾರ್ (ಶ್ರೀನಿವಾಸಪುರ) — ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಚಿಕ್ಕಬೋರಯ್ಯನವರು ಈಗಾಗಲೇ ಈ ನಿರ್ಣಯದ ಮೇಲೆ ಸಾಕಷ್ಟು ಮಾತನಾಡಿದ್ದಾರೆ, ನಾವು ರಾಜ್ಯಪಾಲರ ಭಾಷಣಕ್ಕಷ್ಟೇ ಸೀಮಿತವಾಗದೇ ಸ್ವಲ್ಪ ದೇಶದ ರಾಜಕೀಯ ಇತಿಹಾಸ, ಕಳೆದ ೨೦ ವರ್ಷಗಳಲ್ಲಿ ಆಗಿಂದಾಗೆ ಯಾವ ರೀತಿ ತಿರುವನ್ನು ಪಡೆದುಕೊಳ್ಳುತ್ತಾ ಹೋಯಿತು ಎನ್ನುವ ಅವಲೋಕನ ಮಾಡುವುದು ಅವಶ್ಯಕ. ೧೯೬೭ನೇ ಇಸವಿಯಲ್ಲಿ ಮಹಾ ಚುನಾವಣೆ ನಡೆದಾಗ ಈ ದೇಶದಲ್ಲಿ ಬಹುತೇಕ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷ ಪರಾಭವಗೊಂಡಿತು. ಇನ್ನೇನು ಸ್ವಲ್ಪ ದಿವಸಗಳಲ್ಲಿ ಕಾಂಗ್ರೆಸ್ ಪಕ್ಷ ಸರ್ವನಾಶ ಆಗುತ್ತದೆ ಎನ್ನುವ ಪರಿಸ್ಥಿತಿ ದೇಶದಲ್ಲಿ ಪ್ರಾರಂಭವಾಯಿತು ಚುನಾವಣೆ ಕಳೆದ ಕೆಲವು ದಿವಸಗಳಲ್ಲಿ ರಾಷ್ಟ್ರಪತಿ ಚುನಾವಣೆ ಬಂದಿತು. ೧೯೬೯ ರಲ್ಲಿ ಕಾಂಗ್ರೆಸ್ ಇಬ್ಭಾಗವಾಯಿತು. ಇಬ್ಭಾಗ ಆದನಂತರ ಯಾವ ಕಾಂಗ್ರೆಸ್ ಸರ್ವನಾಶವಾಗತಕ್ಕ ಸ್ಥಿತಿಯಲ್ಲಿ ಇತ್ತು ಅದು ತಕ್ಷಣ ಪುನಃಶ್ಚೇತನಗೊಂಡಿತು. ಬ್ಯಾಂಕುಗಳ ರಾಷ್ಟ್ರೀಕರಣ ಆಗಿರಬಹುದು. ರಾಜಧನ ರದ್ದು ಮಾಡಿರುವುದು ಆಗಬಹುದು ಈ ಕೆಲವು ಸ್ಲೋಗನ್ ಏನು ಇದ್ದವು ಅವು ದೇಶದ ಮೂಲೆ ಮೂಲೆಯಲ್ಲಿರತಕ್ಕ ಸಾಮಾನ್ಯ ಜನರಲ್ಲಿ ಏನೋ ಹೊಸದು ನಡೆಯುತ್ತಿದೆ ಎನ್ನುವ ಭಾವನೆಯನ್ನು ಹುಟ್ಟಿಸಿದವು. ಸಾಮಾನ್ಯ ಜನರು ಯಾರಿದ್ದಾರೆ ಅವರ ಪರವಾಗಿರತಕ್ಕ ಸರ್ಕಾರ ಇದು ಎನ್ನುವ ಭಾವನೆ ಬಂತು. ತನ್ಮೂಲಕವಾಗಿ ಕಾಂಗ್ರೆಸ್ ಪಕ್ಷದಲ್ಲಿ ಹೊಸ ವಿಷಯ, ಈ ರೀತಿಯ ಹೊಸ ವಾತಾವರಣ ಮೂಡಿತು. ಇದರ ಫಲವನ್ನೇ ೧೯೭೧-೭೨ ರಲ್ಲಿ ಕಾಂಗ್ರೆಸ್ ಪಕ್ಷ ಪೂರ್ಣವಾಗಿ ಅನುಭವಿಸಿತು. ನಂತರ ೧೯೭೫ ರಲ್ಲಿ ಬೇರೆ ತಿರುವು ಪಡೆಯಿತು. ಆಗ ಜನ ಎಡಪಂಥೀಯವಾದಕ್ಕೆ ಪುರಸ್ಕಾರ ಕೊಟ್ಟರು. ಅವರ ನೋವಿಗೆ ಸ್ಪಂದಿಸತಕ್ಕ ಮಾತನ್ನು ಹೇಳಿದಾಗ ನಮ್ಮನ್ನು ಅವರು ನಂಬುತ್ತಾರೆ. ಆ ಒಂದು ಶಕ್ತಿಯನ್ನು ಬಳಸಿ, ಅಧಿಕಾರವನ್ನು ಕೇಂದ್ರೀಕರಣ ಮಾಡಿಕೊಂಡು ಅದರ ದುರ್ಬಲತೆಗಾಗಿ ಪ್ರಯತ್ನ ಮಾಡಿರತಕ್ಕದ್ದು ಇತಿಹಾಸದಲ್ಲಿ ದಾಖಲು ಆಗಿವೆ, ೧೯೭೭ ರಲ್ಲಿ ಕಾಂಗ್ರೆಸ್ ಪಕ್ಷ ಹೋಯಿತು. ಆಗ ನಾನೂ ಕೂಡಾ ಕಾಂಗ್ರೆಸ್ ಪಕ್ಷದಲ್ಲಿ ಇದ್ದೆ. ತದನಂತರ ೧೯೮೦ ರಲ್ಲಿ ಯಾರು ಪರ್ಯಾಯವಾಗಿ ಬಂದಿದ್ದರು ಅವರು ತಮ್ಮದೇ ಆದ ಆಂತರಿಕ ಕಲಹದಿಂದಾಗಿ ಈ ದೇಶವನ್ನು ನಡೆಸುವುದಕ್ಕೆ ಆಗದೇ ಇದ್ದುದರಿಂದ ಮತ್ತೆ ಇವರಿಗೇ ಜನ ಅವಕಾಶವನ್ನು ಕೊಟ್ಟರು. ಇದು ಈ ದೇಶದ ವಾತಾವರಣದಲ್ಲಿ ನಡೆದುಕೊಂಡು ಬಂದ ಒಂದು ಹಿನ್ನೆಲೆ ಅಧ್ಯಕ್ಷರೇ, ೧೯೮೪ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಮರಣಾನಂತರ ಚುನಾವಣೆ ನಡೆಯಿತು, ಜನರ ವರ್ತನೆ ಬಗ್ಗೆ ನಾನು ಇಲ್ಲಿ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಹಾಗೆ ಹೋದರೆ ಅದು ಉದ್ಧಟತನವಾಗುತ್ತದೆ. ಆದರೆ ೧೯೮೩ ರಲ್ಲಿ ಇಲ್ಲಿ ಏನು ಚುನಾವಣೆ ನಡೆಯಿತು ಆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ

ಅಧಿಕಾರವನ್ನು ಕಳೆದುಕೊಂಡಿತು. ಕಾಂಗ್ರೆಸ್‌ಗೆ ವಿರುದ್ಧವಾಗಿರತಕ್ಕ ಜನತಾ ಪಕ್ಷ ಕ್ರಾಂತಿರಂಗ ಪಕ್ಷೇತರರು, ಕಮ್ಯುನಿಸ್ಟ್, ಬಿ. ಜೆ. ಪಿ.ಯವರ ಸಹಕಾರದಿಂದ ಕಾಂಗ್ರೆಸ್ಸೇತರ ಸರ್ಕಾರ ಜನತಾ ಪಕ್ಷದ ಹೆಸರಿನಲ್ಲಿ ಈ ರಾಜ್ಯದಲ್ಲಿ ಬಂತು. ನಾವು ಇಲ್ಲಿ ಮಾತನಾಡಿದರೆ ಮಾನ್ಯ ಕೆ. ಎಚ್. ಶ್ರೀನಿವಾಸ್ ಅವರು, ಮಾನ್ಯ ಬಸವಲಿಂಗಪ್ಪ ಅವರು, ಮಾನ್ಯ ಖರ್ಗೆಯವರು ಮಾತನಾಡಿ ೧೯೭೨ ರಿಂದ ಯಾರು ಪಾಳೇಗಾರರು ಹತೋಟಿಯಲ್ಲಿದ್ದರು ಅವರು ಸ್ವಾತಂತ್ರ್ಯರಾಗಿದ್ದಾರೆ, ನೀವು ಆಡಳಿತಕ್ಕೆ ಬಂದ ಮೇಲೆ ದುರ್ಬಲ ವರ್ಗದವರ ಮೇಲೆ ಬಹಳ ದೌರ್ಜನ್ಯಗಳು ನಡೆಯುತ್ತಿವೆ ಎಂದು ಹೇಳುತ್ತಾರೆ ಅವರುಗಳ ಮುಲಾಜಿನಲ್ಲಿ ನೀವು ಇದ್ದೀರಿ ಎಂದು ಹೇಳುತ್ತಾರೆ. ನಾನು ಅವರಿಗೆ ಒಂದನ್ನು ನೆನಪಿಸುತ್ತೇನೆ. ೧೯೭೯ರ ಅಂತ್ಯ ಹಾಗೂ ೧೯೮೦ರ ಆದಿಭಾಗದಲ್ಲಿ ಏನು ರಾಜಕೀಯ ಘಟನೆಗಳು ಈ ರಾಜ್ಯದಲ್ಲಿ ನಡೆದವು, ಯಾವ ಒಂದು ಸಂದರ್ಭದಲ್ಲಿ ದಿವಂಗತ ದೇವರಾಜ ಅರಸು ಅವರು ಇಂದಿರಾಗಾಂಧಿಯವರಿಂದ ದೂರ ಸರಿದರು ಆಗ, ಕೆಲವಾರು ವರ್ಷಗಳಿಂದ ಕೆಲವರು ಏನು ಕಾಂಗ್ರೆಸ್‌ನಲ್ಲಿಯೇ ಇದ್ದು ೧೯೭೮ ರಲ್ಲಿ ಕಾಂಗ್ರೆಸ್ ಬಿಟ್ಟಿದ್ದು ಅಧಿಕಾರವನ್ನು ಕಳೆದುಕೊಂಡಿದ್ದರು ಅವರೆಲ್ಲರೂ ಹೊಸದಾಗಿ ನಿಮ್ಮ ಪಕ್ಷವನ್ನು ಸೇರಿಕೊಂಡರು. ಮಾನ್ಯ ಗುಂಡೂರಾಯರನ್ನು ಗಾದಿ ಮೇಲೆ ಕೂರಿಸಿ ಅವರೆಲ್ಲರೂ ವಿಜೃಂಭಿಸಿದರು. ಆಗ ಪ್ರಾರಂಭವಾಯಿತು.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಿಮ್ಮ ಕರ್ಮವನ್ನು ನೋಡಲಾರದೆ ಬಿಟ್ಟು ಬಂದ್ವೆವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ರಘುಪತಿಯವರು ರಾಯಚೂರು ಜಿಲ್ಲೆಯ ಇನ್‌ಚಾರ್ಜ್ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ನಿಮಗೆ ಹಳ್ಳಿಗಳಲ್ಲಿ ತಿರುಗಾಡಿ ಅನುಭವವಾಗಿದೆ, ನೀವು ಹೇಳಿ ಎಲ್ಲೂ ಅನ್ಯಾಯ ದಬ್ಬಾಳಿಕೆ ನಡೆದಿಲ್ಲವೆಂದು ? ಆ ರೀತಿ ಇದ್ದರೆ ನಾನು ಈಗಲೇ ನನ್ನ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ. ಮಾನ್ಯ ಕೃಷ್ಣಮೂರ್ತಿಯವರು ಕಲ್ಮಲದಲ್ಲಿ ಅಡ್ಡಾಡಿದ್ದಾರೆ ಅಲ್ಲಿಯ ಜನ ಬಡವರು ಏನು ಹೇಳುತ್ತಾರೆ ? ನಾನು ಹೇಳುವುದರಲ್ಲಿ ಏನಾದರೂ ಸತ್ಯಾಂಶವಿಲ್ಲ ಎಂದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆ. ವಾದಕ್ಕೋಸ್ಕರ ಇಲ್ಲಿ ವಾದ ಮಾಡುವುದು ಬೇಡ.

ಶ್ರೀ ರಮೇಶ್‌ಕುಮಾರ್.— ನನ್ನ ಭಾಷಣವನ್ನು ಪೂರ್ತಿ ಕೇಳಿದರೆ ತಮಗೆ ಅರ್ಥವಾಗುತ್ತದೆ. ಅವರು ಏನು ಮಾತನ್ನು ಹೇಳಿದ್ದಾರೆ ಆ ಮಾತನ್ನು ನಾನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಪಕ್ಷದ ಪತಿಯಿಂದ ಸಮರ್ಥನೆ ಮಾಡಬೇಕೆನ್ನುವಷ್ಟು ಬಲಹೀನ ಆಗಿಲ್ಲ. ನಾವು ರಕ್ಷಣೆ ಕೊಡಲಿಲ್ಲ ಮಲ್ಲಿಕಾರ್ಜುನ ಖರ್ಗೆಯವರು, ಬಸವಲಿಂಗಪ್ಪನವರು ೧೯೮೦ ರಲ್ಲಿ ರಕ್ಷಣೆ ಕೊಡಲಿಲ್ಲ. ನೀವು ನಿಮ್ಮ ಸ್ವಂತಿಯನ್ನು ಉಳಿಸಿಕೊಂಡು ಬಂದಿದ್ದೀರಿ. ನಾನು ವ್ಯವಸ್ಥೆಯನ್ನು ಕುರಿತು. ಮಾತನಾಡುತ್ತಿದ್ದೇನೆ. ರಾಯಚೂರಿನ ಬಗ್ಗೆ ರಘುಪತಿಯವರನ್ನು ಕುರಿತು ಹೇಳಿದಿರಿ ಕಲ್ಮಲದ ಬಗ್ಗೆ ಕೃಷ್ಣಮೂರ್ತಿಯವರನ್ನು ಕುರಿತು ಹೇಳಿದಿರಿ, ಗುಲ್ಬರ್ಗದಲ್ಲಿ ವೀರೇಂದ್ರಪಾಟೀಲರು ಕಾಂಗ್ರೆಸ್(ಐ) ಸೇರುವುದಕ್ಕೆ ಮುಂಚೆ ಜನರ ವಿಶ್ವಾಸ ಹೇಗಿತ್ತು ? ಅದನ್ನು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಮ್ಮಲ್ಲಿ ಯಾವುದೇ ಬದಲಾವಣೆಯಿಲ್ಲ. ನಾನು ಜನೇಬಾರಿ ಆರಿಸಿ ಬಂದಿದ್ದೇನೆ. ಆ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದೇವೆ.

ಶ್ರೀ ರಮೇಶ್‌ಕುಮಾರ್.— ಮಾನ್ಯ ಖರ್ಗೆಯವರು ಆರಿಸಿ ಬರತಕ್ಕದ್ದು ಬೇಡ. ನಾನು ಏನು ಹೇಳುತ್ತಿದ್ದೇನೆ ? ಜನರು ಸೆರಾಗಟು ಕಾಂಗ್ರೆಸ್ ಪಕ್ಷ ಅಂದರೆ ಬಡವರ ಪಕ್ಷ, ಹಿಂದುಳಿದವರ ಪಕ್ಷ, ಅಲ್ಪಸಂಖ್ಯಾತರ ಪಕ್ಷ, ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಜನರಿಗೆ ಇದು ರಕ್ಷಣೆ ಕೊಡತಕ್ಕ ಪಕ್ಷ ರಕ್ಷಣೆಯನ್ನು ಕೊಟ್ಟಿ ಕೊಡುತ್ತದೆ ಎನ್ನತಕ್ಕ ಭಾವನೆ ಏನಿತ್ತು ಅದು ಶಿಥಿಲಗೊಂಡಿತ್ತು, ೧೯೮೦ ರಲ್ಲಿ ಇರಲಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ಅದರ ಫಲವಾಗಿ ೧೯೮೩ರಲ್ಲಿ ಈ ಸರ್ಕಾರ ಬರುವುದಕ್ಕೆ ಅವಕಾಶವಾಯಿತು.

ನೀವು ಲ್ಯಾಂಡ್ ಟ್ರಿಬ್ಯೂನಲ್ ಜಡ್ಜ್‌ಮೆಂಟ್ ತೆಗೆದುಕೊಳ್ಳಿ, ಷೆಡ್ಯೂಲ್ಡ್ ಕ್ಯಾಸ್ಟ್ ಹಾಗೂ ಹಿಂದುಳಿದ ವರ್ಗಗಳವರ ಮೇಲೆ ನಡೆದಿರತಕ್ಕ ದಬ್ಬಾಳಿಕೆ ಅನ್ಯಾಯಗಳ ಪಟ್ಟಿಯನ್ನು ತೆಗೆದುಕೊಳ್ಳಿ, ಯಾವುದೇ ವಿಷಯಗಳನ್ನು ತೆಗೆದುಕೊಂಡಾಗ, ಇದು ೧೯೮೦ರಿಂದ ಪ್ರಾರಂಭವಾಯಿತು ತಾವು ಪ್ರಾರಂಭ

ಮಾಡಿದ್ದನ್ನು ಕಂಟ್ರೋಲ್ ಮಾಡುವುದಕ್ಕೆ ಈಗಲೂ ಆಗುತ್ತಿಲ್ಲ. ಆದರೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವರ ಪ್ರಕಾರ ೧೯೭೦ ರಿಂದ ಮೂರು ವರ್ಷಗಳ ಕಾಲ ನಡೆದಂತಹ ದಬ್ಬಾಳಿಕೆ ಮತ್ತು ಅನ್ಯಾಯಗಳನ್ನು ತಡೆಹಿಡಿಯಲಿಕ್ಕೆ ೫ ವರ್ಷ ಬೇಕಾಯಿತು. ಈಗ ಏನಾಗಿದೆ ? ೧೯೮೦ರಲ್ಲಿ ಯಾರೇ ಅಧಿಕಾರಕ್ಕೆಬಂದರೂ ಅಟ್‌ಲಿಸ್ಟ್ ಸರ್ಕಾರದ ಹೆದರಿಕೆಯಿಂದ ೫ ಪರ್ಸೆಂಟ್ ಕಡಿಮೆಯಿತ್ತು. ಎಲ್ಲಾ ಪಕ್ಷಗಳಲ್ಲೂ ಅವರು ಇದ್ದೇ ಇರುತ್ತಾರೆ. ನಾಳೆ ನಾವು ಅಧಿಕಾರಕ್ಕೆ ಬಂದರೆ ನಮ್ಮ ಹಿಂದೆ ಓಡಾಡುತ್ತಾರೆ. ನಮ್ಮಲ್ಲಿ ಆಗ ಅವರ ಆಟ ನಡೆಯಲಿಲ್ಲ. ನಿಮ್ಮಲ್ಲಿ ಅಧಿಕಾರವನ್ನು ಹಿಡಿದಿಟ್ಟುಕೊಳ್ಳುವುದಕ್ಕೆ ಅವರಿವರ ಒತ್ತಡದಲ್ಲಿ ಸಿಕ್ಕಿಕೊಂಡಿದ್ದೀರಿ. ಅವರನ್ನು ಪ್ರೊಟೆಸ್ಟ್ ಮಾಡುತ್ತೀರಿ, ಅವರನ್ನು ಬಿಟ್ಟು ನೀವು ರಾಜಕೀಯ ಮಾಡುವುದಕ್ಕೆ ಆಗುವುದಿಲ್ಲ, ಅವರು ಏನು ಹೇಳುತ್ತಾರೋ ಅದನ್ನು ಕೇಳಿಕೊಂಡು ಹೋಗುತ್ತೀರಿ, ಅದಕ್ಕೇ ಅನ್ಯಾಯ ದಬ್ಬಾಳಿಕೆ ಜಾಸ್ತಿಯಾಗಿದೆ. ದೂರು ಕೊಟ್ಟರೆ ದೂರು ತೆಗೆದು ಕೊಳ್ಳುವುದಿಲ್ಲ, ದೂರುಗಳನ್ನು ರಿಜಿಸ್ಟರ್ ಮಾಡಿಕೊಳ್ಳುವುದಿಲ್ಲ. ಪೋಲೀಸ್ ಸ್ಟೇಶನ್‌ಗಳಲ್ಲಿ ಕೇಸುಗಳನ್ನು ರಿಜಿಸ್ಟರ್ ಮಾಡುವುದೇ ಇಲ್ಲ. ಆ ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡು ಬಂದು ಇಲ್ಲಿ ಹೇಳುತ್ತೀರಿ. ನಿಮಗೆ ಬೇಕಾದ ಸಬ್ ಇನ್ಸ್‌ಪೆಕ್ಟರುಗಳನ್ನು ಹಾಕಿಸಿಕೊಳ್ಳುತ್ತೀರಿ. ಎಲ್ಲಾ ಪಾರ್ಟಿಯಲ್ಲೂ ಪಟ್ಟಭದ್ರಹಿತಸಾಕ್ತಿಗಳು ಇದ್ದಾರೆ, ಅವರು ಏನು ಹೇಳುತ್ತಾರೋ ಹಾಗೆ ಕೇಳಬೇಕು. ಅವರಿಗೆ ಬೇಕಾದ ಜನರನ್ನು ಹಾಕಿಸಿಕೊಡಬೇಕು, ಅವರು ದರ್ಬಾರು ನಡೆಸಿಕೊಂಡು ಹೋಗುವುದಕ್ಕೆ ಅವನು ಕೇಳಿದ ವ್ಯಕ್ತಿ ಅಲ್ಲಿರಬೇಕು. ಹಾಗೆ ಇರುವುದರಿಂದ ಅನ್ಯಾಯ ದಬ್ಬಾಳಿಕೆ ಜಾಸ್ತಿಯಾಯಿತು. ವಾದಕ್ಕೋಸ್ಕರ ವಾದ ಮಾಡುವುದು ಬೇಡ, ಪಾರ್ಟಿ ಮೀಟಿಂಗ್‌ನಲ್ಲಿ ಡಿಸೈಡ್ ಮಾಡಿರಬೇಕು ನೀವು ಸೆಕೆಂಡ್ಸ್ ಮಾಡಿಯೆಂದು ಅದಕ್ಕೆ ಹಾಗೆ ಮಾತನಾಡುತ್ತಿದ್ದೀರಿ. ನೀವು ನಿಮ್ಮ ಆತ್ಮಸಾಕ್ಷಿಯಾಗಿ ಹೇಳಿ, ೧೯೭೫ ಮತ್ತು ಈಗ ಹೋಲಿಸಿ ಎಷ್ಟರಮಟ್ಟಿಗೆ ಹಳ್ಳಿಗಳಲ್ಲಿ ಅನ್ಯಾಯ ಜಾಸ್ತಿಯಾಗಿದೆ ಎಂಬುದನ್ನು ಪಾರ್ಟಿ ದೃಷ್ಟಿಯಿಂದ ಹೇಳಬೇಡಿ.

ಶ್ರೀ ಎಂ. ರಘುಪತಿ.—ಇದು ೧೯೭೮ರಲ್ಲಿ ಪ್ರಾರಂಭವಾಯಿತು. ಬೀಜ ಬಿತ್ತಿದ್ದು ಆಗ, ನಾನು ಆಗ ಅದೇ ಕರ್ಮದಲ್ಲಿದ್ದೆ, ನಾನು ಮತ್ತು ಮಾನ್ಯ ಬಂಗಾರಪ್ಪನವರು ನಾವು ಬಿಟ್ಟು ಬಂದೆವು.

೪-೦೦ ಪಿ. ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೇಳಿಕೊಂಡು ಹೋಗಿ.

ಶ್ರೀ ರಮೇಶ್ ಕುಮಾರ್.—ತಾವು ಹಿಂದೆ ಮಂತ್ರಿಮಂಡಲದಲ್ಲಿ ಇದ್ದವರು. ಶ್ರೀ ಗುಂಡೂ ರಾಯರ ಜೊತೆಯಲ್ಲಿ ಕೆಲಸ ಮಾಡಿದ್ದೀರಿ. ಅವರು ಕೂಡ ಬಹಳ ಫ್ರ್ಯಾಂಕ್ ಆಗಿ ಮಾತನಾಡ ತಕ್ಕಂಥವರು ಮಾನ್ಯ ಶ್ರೀ ಬಸವಲಿಂಗಪ್ಪನವರು, ಈ ಮನೆಯ ಸನ್ಮಾನ್ಯ ಸದಸ್ಯರು ಮಾತನಾಡುವಾಗ ನಾನು ಹೇಳಿದ್ದೆ. ವೆಸ್ಟೆಡ್ ಇಂಟರೆಸ್ಟ್ ಪಟ್ಟಭದ್ರ ಹಿತಾಸಕ್ತಿಗಳೆಂದು ಏನು ಕರೆಯುತ್ತೇವೆ ಇವರದ್ದು ನಮ್ಮದಲ್ಲಾ ಮಿಡಲ್‌ಕ್ಲಾಸ್ ಪಾರ್ಟಿ ಮಧ್ಯಮ ವರ್ಗದ ಜನರನ್ನು ಹೆಚ್ಚಿಗೆ ಆಧಾರವಾಗಿಟ್ಟು ಕೊಂಡು ರಾಜಕೀಯ ನಡೆಸತಕ್ಕಂಥ ನಮ್ಮ ಪಕ್ಷ ನಿಮ್ಮ ಪಕ್ಷ ಅಲ್ಲ. ನಾವು ಬೋರ್ಡು ಹಾಕಿ ಒಳಗಡೆ ಬರಬೇಡಿ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಅವರ ಮೇಲೆ ಆಧಾರವಿಟ್ಟು ನಮ್ಮ ಆಸ್ತಿತ್ವವನ್ನು ಉಳಿಸಿಕೊಳ್ಳುತ್ತೇವೆ. ಅದರಲ್ಲೂ ಕೂಡ ವಿಶೇಷವಾಗಿ ತಮ್ಮ ವರ್ಚಸ್ಸನ್ನು ಬೆಳೆಸಿಕೊಳ್ಳುವುದಕ್ಕೆ ಸ್ವಂತ ಕೆಲಸವನ್ನು ಮಾಡಿಕೊಳ್ಳುವುದಕ್ಕೆ, ತಮ್ಮ ಅಭಿವೃದ್ಧಿಯನ್ನು ಸಾಧಿಸಿ ಕೊಳ್ಳುವುದಕ್ಕೆ ಯಾವ ಪಕ್ಷ ಅಧಿಕಾರದಲ್ಲಿದೆಯೋ ಆ ಪಕ್ಷಕ್ಕೆ ಬೇಗ ಸೇರಿಕೊಳ್ಳತಕ್ಕಂಥ ನೈಪುಣ್ಯತೆ ಅವರಲ್ಲಿದೆ. ಬೆಂಗಳೂರಿನಲ್ಲಿ ಅವರಿಗೆ ಸನ್ಮಾನ, ಇವರಿಗೆ ಸನ್ಮಾನ ಅಂತ ಅಚ್ಚು ಹಾಕಿಸುವ ಕಾರ್ಡಿನ ಹಿಂದುಗಡೆ ಕಮಿಟಿ ಆಫ್ ಹೋಸ್ಟ್ಸ್ ಎಂದು ಯಾವ ಸರ್ಕಾರ ಬಂದರೂ ಯಾರು ಮಂತ್ರಿಗಳು ಬಂದರೂ, ಯಾರು ಚೇರ್ಮನ್ ಇದ್ದರೂ ಕಾಮನ್ ಕಮಿಟಿ ಆಫ್ ಹೋಸ್ಟ್ಸ್‌ನಲ್ಲಿ ಇವರು ಇರುತ್ತಾರೆ. ಅವರು ಯಾರು ಎಂದರೆ ಪೋಲೀಸ್ ಇಲಾಖೆಗೆ ಬೇಕಾಗಿರತಕ್ಕಂಥವರು. Has anybody got the guts to decline such offers ? Has anybody done it ! I am not telling this keeping in my mind only this part or that part, Now we have fallen prey for it. ಸುಮಾರು ಸಂದರ್ಭಗಳಲ್ಲಿ ನಿರ್ಲಜ್ಜತರಾಗಿ

ನಾವು ಎಲ್ಲಿಂದ ಆರಿಸಿ ಬಂದಿದ್ದೇವೆ. ಯಾವ ವಾತಾವರಣದೊಳಗೆ ಬಂದಿದ್ದೇವೆ ಎಂಬುದನ್ನು ಮರೆತುಬಿಟ್ಟು ಇವರು ಶಾಶ್ವತವಾಗಿ ನಮ್ಮ ನೆಂಟರು ಎಂದು ಈ ಜನರನ್ನು ಮರೆತು ಕೆಲಸ ಮಾಡುತ್ತೇವೆ. ಇದು ಬಹಳ ಶೋಚನೀಯವಾದ ವಿಚಾರ. ನಾನು ಕಾಂಗ್ರೆಸ್, ಜನತಾ ಎಂದು ಮಾತನಾಡುತ್ತಿಲ್ಲ. ಪಟ್ಟಭದ್ರ ಹಿತಾಸಕ್ತರಾಗಿರತಕ್ಕಂಥವರು ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಲಗ್ಗೆ ಹಾಕಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಅವರ ಕೆಲಸ. ನಮ್ಮಲ್ಲಿ ಯಾವ ರೀತಿಯ ದೌರ್ಬಲ್ಯ ಇದೆಯೆಂದು ಕಂಡುಕೊಂಡು ನಮ್ಮನ್ನು ಆ ದೌರ್ಬಲ್ಯಗಳಿಗೆ ಒಳಗಾಗಿಸಿ ನಮ್ಮ ಮೇಲೆ ಹಿಡಿತ ಸಾಧಿಸತಕ್ಕಂಥ ಪ್ರಯತ್ನ ಮಾಡತಕ್ಕಂಥ ವಾಣಿಜ್ಯೋದ್ಯಮಿಗಳು, ಕೈಗಾರಿಕೋದ್ಯಮಿಗಳು, ದೊಡ್ಡ ದೊಡ್ಡ ವ್ಯಾಪಾರಸ್ಥರು ಬಂಡವಾಳ ಶಾಹಿಗಳು ಈ ದೇಶದಲ್ಲಿದ್ದಾರೆ. ಇದು ನಮಗೆ ಹೊಸ ವಿಷಯ ಅಲ್ಲ. ಲಾ ಅಂಡ್ ಆರ್ಡರ್ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ನನ್ನ ಮಾತನ್ನು ಸಮರ್ಥನೆ ಮಾಡುವುದಕ್ಕೆ ಕೆಲವು ಘಟನೆಗಳನ್ನು ನಾನು ಹೇಳುತ್ತೇನೆ ನಾನು ಕೂಡ ಈ ಸದನಕ್ಕೆ ಒಂದು ಕ್ಷೇತ್ರವನ್ನು ಪ್ರತಿನಿಧಿಸಿ ಬರುತ್ತಿದ್ದೇನೆ ನನ್ನ ಕ್ಷೇತ್ರದಲ್ಲಿ ಈ ಪಟ್ಟಭದ್ರ ಹಿತಾಸಕ್ತಿಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎನ್ನುವುದಕ್ಕೆ ನಾನು ಹೇಳುತ್ತೇನೆ. ಅವುಲಕೊಪ್ಪ ಎನ್ನುವುದು ಒಂದು ಗ್ರಾಮ. ಅಲ್ಲಿಯ ಪರಿಶಿಷ್ಟ ಜಾತಿಯ ಜನರಿಗೆ ನಿವೇಶನ ಇಲ್ಲ. ಊರ ಹಿಂಭಾಗದಲ್ಲಿ ಸರ್ಕಾರಕ್ಕೆ ಸೇರಿದಂಥ ಜಾಗ ಇದೆ. ಆ ಜಾಗದಲ್ಲಿ ಅವರಿಗೆ ನಿವೇಶನಗಳನ್ನು ಮಾಡಿಕೊಡಬೇಕೆಂದು ನಾನು ಸುಮಾರು ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿದ್ದೇನೆ. ಊರಿನಲ್ಲಿ ಇರತಕ್ಕಂಥ ಸವರ್ಣೀಯರು ಪ್ರಭಲರಾಗಿರುತ್ತಾರೆ. ಅವರು ಇವರಿಗೆ ಜಾಗ ಕೊಡಲಿಕ್ಕೆ ಬರುವುದಿಲ್ಲ, ನಮಗೆ ಹುಲ್ಲು ಬಣವೆಗಳನ್ನು ಹಾಕಿಕೊಳ್ಳಲಿಕ್ಕೆ ಆ ಜಾಗ ಬೇಕು. ಆದರೆ ಹೊರಗೆ ತಿಪ್ಪೆಗುಂಡಿ ಇದೆ, ಅಲ್ಲಿ ಬೇಕಾದರೆ ಅವರು ಹೋಗಿ ಇರಲಿ ಎಂದು ಹೇಳುತ್ತಾರೆ. ನಾನಾದರೂ ಹೇಳುತ್ತೇನೆ. ತಿಪ್ಪೆಗುಂಡಿಯಲ್ಲಿ ವಾಸ ಮಾಡತಕ್ಕಂಥ ಜನ ಇವರಲ್ಲ. ಇವರೂ ನಮ್ಮಂಥ ಜನರು. ಊರಲ್ಲೇ ಅವರಿಗೆ ಜಾಗ ಕೊಡಬೇಕೆಂದು ಕಷ್ಟಪಟ್ಟು ಹೋರಾಟ ಮಾಡಿ ಡೆಪ್ಯೂಟಿ ಕಮೀಷನರ್ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಇಬ್ಬರನ್ನೂ ಸ್ಥಳದಲ್ಲಿ ನಿಲ್ಲಿಸಿ ಇವರಿಗೆ ಸೈಟುಗಳನ್ನು ಮಾಡಿ ಕೊಟ್ಟೆವು. ಇವರಿಗೆ ಆರ್. ಎಲ್. ಇ. ಜಿ. ಪಿ. ಯಲ್ಲಿ ಮನೆಕಟ್ಟಿಸಿಕೊಡಬೇಕು ಎನ್ನುವಾಗ ಕೆಲವು ಮುಖಂಡರು ಬೆಂಗಳೂರಿಗೆ ಬಂದು ಕೋರ್ಟಿನಿಂದ ತಡೆಯಾಜ್ಞೆ ತಂದು ಈ ಕೆಲಸ ಮಾಡದಹಾಗೆ ಮಾಡಿದ್ದಾರೆ. ಅವರೆಲ್ಲರೂ ಕೂಡ ನಿಮ್ಮ ಪಕ್ಷದ ಮುಖಂಡರೇ. ನಾನು ಈಗ ಸದನದಲ್ಲಿ ನಿಂತುಕೊಂಡು ಬೇಜವಾಬ್ದಾರಿಯಿಂದ ಈ ಕಾಂಗ್ರೆಸ್ ಪಕ್ಷದವರು ಎಲ್ಲರೂ ಈ ಪರಿಶಿಷ್ಟ ಜಾತಿಯವರಿಗೆ ಮನೆ ಕಟ್ಟಿಸಿಕೊಡಲಿಕ್ಕೆ ಅಡ್ಡಿ ಮಾಡುತ್ತಿದ್ದಾರೆ ಎಂದು ಹೇಳಲೇ ? ನಾನು ಹಾಗೆ ಜನರಲೈಸ್ ಮಾಡುವುದಿಲ್ಲ. ನಮ್ಮ ಕ್ಷೇತ್ರದಲ್ಲಿ ಯಾರು ಈ ಜನರಿಗೆ ವಿರೋಧ ಮಾಡುತ್ತಿದ್ದಾರೆ ಅವರಿಗೆ ರಾಜಕೀಯವಾಗಿ ಒಂದು ನೆಲೆಬೇಕು. ಆಶ್ರಯಬೇಕು ಎಂದು ನಿಮ್ಮ ಪಕ್ಷದಲ್ಲಿ ಆಶ್ರಯ ಪಡೆದಿದ್ದಾರೆ. ಏಕೆಂದರೆ ನಾನು ಇಲ್ಲಿ ಇರುವುದರಿಂದ ಅವರು ಬರುವುದಕ್ಕೆ ಆಗುವುದಿಲ್ಲ.

ಈ ರೀತಿಯಾದ ಕೆಲಸ ಮಾಡಿದ್ದಾರೆ. ಆಮೇಲೆ ಹಾರಿಕಂಟೆ ಎಂಬ ಇನ್ನೊಂದು ಗ್ರಾಮ. ನಾನು ಇಲ್ಲಿ ಪಕ್ಷದ ವಿಚಾರ ಮಾತನಾಡುತ್ತಿಲ್ಲ. ವರ್ಗದ ವಿಚಾರ, ಸಮಾಜದ ವಿಚಾರ ಮಾತನಾಡುತ್ತಿದ್ದೇನೆ. ಪ್ರತಿಯೊಂದು ವಿವರಗಳಿಗೂ ಬರುತ್ತೇನೆ. ಹಾರಿಕಂಟೆ ಗ್ರಾಮದಲ್ಲಿ ಸರ್ಕಾರಿ ಜಮೀನು ೮೦ ಎಕರೆಯಲ್ಲಿ ಸುಮಾರು ವರ್ಷಗಳಿಂದಲೂ ನಿರ್ಗತಿಕರಾದಂಥವರು ಉಳುಮೆ ಮಾಡುತ್ತಿದ್ದರು. ಸಾಕಷ್ಟು ಪ್ರಯತ್ನ ಮಾಡಿದ್ದೇನೆ. ಮಾನ್ಯ ಬಸವಲಿಂಗಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ ಅವರು ಮರೆತಿರಬಹುದು ಅವನು ಯಾವನೋ ದೊಡ್ಡ ಮನುಷ್ಯ, ನೀವು ಬಂದಿದ್ದನ್ನು ತೆಗೆದು ಕೊಂಡು ರೈತರಿಗೆ ಕೊಡಿ ಎಂದು ಹೇಳಿದರು. I compliment him. But, that was not done. No regrets. I have continued to fight against them.

ಇವತ್ತು ಅವರಿಗೆ ಸಾಗುವಳಿ ಚೀಟಿ ಕೊಡುವ ಸ್ಥಿತಿ ಬಂದಿದೆ. ಇದರ ಬಗ್ಗೆ ಹಳೆಯ ರೆಕಾರ್ಡುಗಳನ್ನು ಸರಿಮಾಡಿಕೊಂಡು, ಮತ್ತೆ ಇವತ್ತಿನ ದಿವಸ ನನ್ನ ವಿರುದ್ಧ ಸ್ಪರ್ಧಿಸಿರತಕ್ಕಂಥವರು ನಿಮ್ಮ ಪಕ್ಷಕ್ಕೆ ಸೇರಿದಂಥವರು ಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದಿದ್ದಾರೆ. Should I describe this as an act of the Congress Party? I won't do it. I won't commit such mistake.

ಕಿರುವಾರ ಎನ್ನತಕ್ಕಂಥ ಊರಿನಲ್ಲಿ ಸಂಪೂರ್ಣವಾಗಿ ಎಷ್ಟು ಜನ ಪರಿಶಿಷ್ಟ ಜಾತಿಯವರು ಇದ್ದಾರೆ, ಅಷ್ಟೂ ಜನರಿಗೆ ಒಂದೇ ಒಂದು ಮನೆ ಒಂದು ಕುಟುಂಬಕ್ಕೆ, ಗೋಪಾಲರೆಡ್ಡಿ ಎಂದು ಹೇಳಿ ಅವರೇ ಸಹಾಯ ಮಾಡತಕ್ಕಂಥವರು, ಇವರ ಜೊತೆ ಹೊಂದಾಣಿಕೆ ಇಟ್ಟುಕೊಂಡಿದ್ದಾರೆ. ಊರಿನಲ್ಲಿರತಕ್ಕಂಥವರು ಉಳಿದ ಜನರು ಸವರ್ಣೀಯರು. ಈ ಪರಿಶಿಷ್ಟ ಜನರು ಹೇಳಿದಂತೆ ಕೇಳುವುದಿಲ್ಲ. ನಮ್ಮ ಬೆಂಬಲಿಗರಾಗಿದ್ದಾರೆ ಎಂಬ ಕಾರಣಕ್ಕೆ ಇಡೀ ಊರಿನ ಗುಡಿಸಲುಗಳನ್ನು ಕಂಪ್ಲೀಟಾಗಿ ಬೆಂಕಿ ಹಚ್ಚಿದ್ದಾರೆ. ಗೋಪಾಲರೆಡ್ಡಿಯವರ ಮನೆಯನ್ನೂ ಧ್ವಂಸ ಮಾಡಿ. ಅವರು ವ್ಯವಸಾಯಕ್ಕೆಂದು ಒಂದು ಬೋರ್‌ವೆಲ್ ಹಾಕಿಕೊಂಡಿದ್ದರು. ಅದಕ್ಕೆಲ್ಲಾ ಜಲ್ಲಿ ಹಾಕಿ ಪ್ಯಾಕ್ ಮಾಡಿದರು. ಡಿ.ಐ.ಜಿ.ಯವರು ಸ್ಥಳಕ್ಕೆ ಬಂದು ತನಿಖೆ ಮಾಡಿಕೊಂಡು ರಿಪೋರ್ಟ್ ಕೊಟ್ಟಿದ್ದಾರೆ. ಕೇಸ್ ನಡೆಯುತ್ತಾ ಇದೆ. ಇದನ್ನು ನಿಮ್ಮ ಪಕ್ಷದವರು ಮಾಡಿಸಿದರು ಎಂದು ಹೇಳಲೆ. ಅವರು ನಿಮ್ಮ ಪಕ್ಷದಲ್ಲಿ ಆಶ್ರಯ ಪಡೆದಿದ್ದಾರೆ.

ಶ್ರೀ ರಮಾನಾಥ ರೈ.—ಅದರಲ್ಲಿ ನಿಮ್ಮ ಪಕ್ಷದವರೂ ಕೆಲವು ಜನರು ಇರಬಹುದು ..

ಶ್ರೀ ರಮೇಶ್‌ಕುಮಾರ್.—ಜಿಲ್ಲೆಯ ರಾಜಕೀಯ, ಕ್ಷೇತ್ರದ ರಾಜಕೀಯ. ನಾನು ಅಂತಹ ಕ್ಷುಲ್ಲಕ ರಾಜಕೀಯ ಮಾಡುವುದಿಲ್ಲ. ನನ್ನ ವಿಚಾರ ಸ್ವಲ್ಪ ನಿಮ್ಮ ಪಕ್ಷದ ಹಿರಿಯ ಸದಸ್ಯರನ್ನು ಕೇಳಿ ಹೇಳುತ್ತಾರೆ. ನಾನು ಲೋನ್ ಅಪ್ಲಿಕೇಷನ್ ಫಾರಂಗಳನ್ನು ಮನೆಯಲ್ಲಿಟ್ಟುಕೊಂಡು ಡಿಸ್ಟ್ರಿಬ್ಯೂಟ್ ಮಾಡುವುದಿಲ್ಲ. Please be careful when you speak. You will get into problems. I know your history better than yourselves Please wait. Have patience for a while. I will come to it.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಏನು ಹೇಳಬೇಕೋ ಅದನ್ನು ಹೇಳಿ. ಥ್ರೆಟನ್ ಮಾಡಬೇಡಿ. ನನಗೆ ಗೊತ್ತಿದೆ, ನಾನು ವಿಚಾರಿಸಿಕೊಳ್ಳುತ್ತೇನೆ ಎಂದು. ನಿಮ್ಮ ಕೈಯಲ್ಲಿ ಸರ್ಕಾರ ಇದೆಯೆಂದು ಹೇಳಬೇಡಿ. ನಾವು ಬಹಳ ಅಟೆಂಟೀವ್ ಆಗಿ ನಿಮ್ಮ ಮಾತನ್ನು ಕೇಳುತ್ತಿದ್ದೇವೆ.

ಶ್ರೀ ರಮೇಶ್‌ಕುಮಾರ್.—ಹೊಸಹಳ್ಳಿ ಎನ್ನತಕ್ಕಂಥ ಊರಿನಲ್ಲಿ ನಾರಾಯಣಪ್ಪ ಎನ್ನುವ ಪರಿಶಿಷ್ಟ ಜಾತಿಗೆ ಸೇರಿದವರು ಬಾವಿಯನ್ನು ಕಲ್ಲಿನಲ್ಲಿ ಕಟ್ಟಿಸಿದ್ದು, ಆ ಬಾವಿಯ ಮೆಟ್ಟಿಲುಗಳನ್ನು ಹೊಡೆದು ಹಾಕಿದ್ದಾರೆ. ಸ್ಪೆಷಲ್ ಕಾಂಪೊನೆಂಟ್ ಸ್ಕೀಮ್‌ನಲ್ಲಿ ಕೊಟ್ಟ 28 ತೆಂಗಿನ ಗಿಡಗಳನ್ನು ಬುಡಸಮೇತ ಕತ್ತರಿಸಿದರು. ಅವನ ಕಾಲನ್ನು ಮುರಿದರು. ಆತ ಇಲ್ಲಿಯ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೂರು ತಿಂಗಳ ಕಾಲ ಚಿಕಿತ್ಸೆ ಪಡೆದು ಇವತ್ತಿಗೂ ಕೋಲು ಊರಿಕೊಂಡು ನಡೆಯುತ್ತಿದ್ದಾನೆ. ದೌರ್ಜನ್ಯಕ್ಕೆ ಒಳಗಾಗಿದ್ದಾನೆಂದು ಸರ್ಕಾರ ಏನೂ ಹಣ ಕೊಟ್ಟಿಲ್ಲ. ಇನ್ನೊಂದು ಎರವಾರಪಲ್ಲಿ ಎಂಬ ಗ್ರಾಮದಲ್ಲಿ ಮಂಡಲ್ ಪಂಚಾಯಿತಿ ಚುನಾವಣೆ ಮಾರನೆಯ ದಿವಸ ನಡೆಯಬೇಕು. ಚುನಾವಣೆ ಹಿಂದಿನ ದಿವಸ ಬೆಳಿಗ್ಗೆ ಯಥಾ ಪ್ರಕಾರ ಪರಿಶಿಷ್ಟ ಜಾತಿಯವರ ಕಾಲೋನಿಗೆ ಹೋದರು. ದಾಂಧಲೆ ಮಾಡಿದರು. ಬೆಂಗಳೂರು ಕದ್ರಪ್ಪ ಎಂಬುವರಿಗೆ ಕಲ್ಲು ತೆಗೆದುಕೊಂಡು ತಲೆಗೆ ಹಾಕಿದರು. ಅವನು ಬದುಕುವುದೇ ಕಷ್ಟವಾಯಿತು. ನಾಲ್ಕು ದಿವಸಗಳ ಕಾಲ ಅವನು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದು ನಂತರ ಬದುಕಿದ. ಸಲಕಂಕಿ ಗ್ರಾಮದ ಗಂಗಪ್ಪ ಎಂಬ ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಯನ್ನು ನಾನು ಮಂಡಲ್ ಎಲೆಕ್ಷನ್‌ನಲ್ಲಿ ಜನತಾ ಪಕ್ಷದ ಕ್ಯಾಂಡಿಡೇಟ್ ಮಾಡಿದೆ. ನಮ್ಮ ಅಥವಾ ಅವನ ಗ್ರಹಚಾರವೋ ಏನೋ ಆತ ಪಕ್ಕದ ಗ್ರಾಮದಲ್ಲಿ ನಾರಾಯಣರೆಡ್ಡಿ ಎನ್ನುವವರ ಮನೆಯಲ್ಲಿ ಜೀತಕ್ಕಿದ್ದ. ಕಾಂಟ್ರ್ಯಾಕ್ಟ್ ಬೇಸಿಸ್‌ನಲ್ಲಿ ಕೆಲಸಕ್ಕೆ ಇದ್ದ. ಅವನನ್ನು ಕೆಲಸಕ್ಕೆ ಬಾ ಎಂದು ಅವರು ಹೇಳಿದರು. ಅವನು ಅವರ ಮನೆಯಲ್ಲಿ ಜೀತಕ್ಕಿದ್ದರೂ ಕೂಡಾ ನಮ್ಮ ಪಕ್ಷಕ್ಕೆ ಬೆಂಬಲಿಗನಾಗಿದ್ದ. ನನ್ನ ರಾಜಕೀಯ ಅಭಿಪ್ರಾಯಕ್ಕೆ ಸ್ವಾತಂತ್ರ್ಯ ಹೊಂದಿದ್ದೇನೆ ಎಂಬ ತಿಳುವಳಿಕೆ ಉಳ್ಳಂಥವನು. ಆತನನ್ನು ಅವರು ಅಪಹರಿಸಿಕೊಂಡು ಹೋದರು. ಆಮೇಲೆ ನಾವು ಕಂಪ್ಲೇಂಟ್ ಕೊಟ್ಟು, ಸೂಪರಿಂಟೆಂಡೆಂಟ್‌ರವರನ್ನು ಕರೆಯಿಸಿ, ಆ ಮನುಷ್ಯನನ್ನು ಕರೆಸಬೇಕಾಯಿತು. ಆತ ಎಲೆಕ್ಷನ್‌ಗೆ ನಿಂತು ಆಯಿತು, ಎಲೆಕ್ಷನ್‌ನಲ್ಲಿ ನಾವು ಸೋತು ಬಿಟ್ಟೆವು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಶ್ರೀಮಾನ್ ಖರ್ಗೆಯವರು, ಶ್ರೀಮಾನ್ ಬಸವಲಿಂಗಪ್ಪನವರು ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದರು. ಇಂತಹ ಕೆಲಸಕ್ಕೆ ನಮ್ಮಲ್ಲಿ ಹತ್ತು ಜನ ಇದ್ದರೆ ನಿಮ್ಮಲ್ಲಿ ನೂರು ಜನ ಇರುತ್ತಾರೆ ಎಂದು ಹೇಳಿದರು. ಇರಬಹುದು. ನಾನು ಅಸೆಸ್ ಮಾಡಿಲ್ಲ, ಇಲ್ಲ ಎಂದು ಹೇಳತಕ್ಕಂಥ ಧೈರ್ಯ ಇಲ್ಲ. ಅಂತಹವರೆಲ್ಲರೂ ನಿಮ್ಮ ಕಾಂಗ್ರೆಸ್ ಪಕ್ಷದಲ್ಲಿದ್ದಾರೆ ಎಂದು ಹೇಳುವುದಿಲ್ಲ. ಮಧ್ಯಮ

ವರ್ಗದವರ ಪಕ್ಷಗಳು ಇವು ಎಂದು ನಾನು ಹೇಳಿದ್ದೇನೆ. ಯಾರು ಇಂತಹವರು ಇರುತ್ತಾರೆ, ಇಂತಹ ಕೆಲಸಕ್ಕೆ ತೊಡಗುತ್ತಾರೆ, ಅವರಿಗೆ ಇಂತಹದೇ ವೃತ್ತಿ, ಚಟ, ಹವ್ಯಾಸ. ನಮಗೆ ನಾಯಕತ್ವ ವಹಿಸಿಕೊಳ್ಳಬೇಕೆಂದು ಇದ್ದರೆ, ಜನತೆಯ ಪ್ರತಿನಿಧಿಗಳಾಗಿ ಕೆಲಸ ಮಾಡತಕ್ಕಂಥ ನಾವು, ಇಂತಹ ಜನರ ಬಗ್ಗೆ ನಿರಂತರವಾಗಿ ನಿಗಾ ಇಡಬೇಕು. ರಾಜಕೀಯವಾಗಿ ನಮ್ಮ ಅಸ್ತಿತ್ವ ಇವರ ಮೇಲೆ ಆಧಾರ ಪಡೆದುಕೊಳ್ಳತಕ್ಕಂಥ ಅಸಹಾಯಕ ಸ್ಥಿತಿಗೆ ನಾವು ತಲುಪಬಾರದು. ಹಾಗೆ ಆದಾಗ ಮಾತ್ರ ಸಮಾಜ ಸಾಧಾರಣೆಯಾಗುತ್ತದೆ. ಇಂತಹವರಿಗೆ ಶಿಕ್ಷೆ ಆಗುತ್ತದೆ. ನಮ್ಮ ಉಳಿವಿಗೆ ಇವರ ಮೇಲೆ ಆಧಾರ ಪಡೆದುಕೊಳ್ಳತಕ್ಕಂಥ ಸ್ಥಿತಿ ಏರ್ಪಟ್ಟರೆ ನಾವು ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ರಾಜಕೀಯ ಉಳಿವಿಗಾಗಿ ನಾವು ಈ ರೀತಿ ಮಾಡುತ್ತಿದ್ದೇವೆ, ಬಹುಶಃ ಇದು ತಪ್ಪು ಎಂದು ನನಗನ್ನಿಸುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲಿಯವರೆಗೆ ಸರಿಯಾಗಿ ಮಾತನಾಡಿದರು. ಈಗ ಚೆನ್ನಾಗಿಲ್ಲ, ಈಗ ಏತಕ್ಕೋ ಸ್ವಲ್ಪ ಡೀವಿಯೇಟ್ ಆಗುತ್ತಿದ್ದೀರಿ.

ಶ್ರೀ ರಮೇಶ್‌ಕುಮಾರ್.— ಎಲ್ಲಾ ಇವರಿಗೆ ಅನುಕೂಲವಾಗಿಯೇ ಮಾತನಾಡುವುದಕ್ಕೆ ಆಗುತ್ತದೆಯೇ. ಅದಕ್ಕೇ ನಾನು ಇಲ್ಲಿ ನಿಂತುಕೊಂಡಿರುವುದು.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.— ನನ್ನ ಅನುಕೂಲಕ್ಕೋಸ್ಕರ ಮಾತನಾಡಿ ಎಂದು ಹೇಳುವುದಿಲ್ಲ. ನಿಮ್ಮ ಸಮಾಧಾನಕ್ಕೋಸ್ಕರ ಮಾತನಾಡುತ್ತಿದ್ದೀರಿ. ನಿಮ್ಮ ಕನ್‌ಸೈನ್ ಹೇಳುತ್ತಿದೆ. ಈ ರೀತಿ ಮಾತನಾಡಬೇಕೆಂದು, ಮಾತನಾಡುತ್ತಿದ್ದೀರಿ.

ಶ್ರೀ ರಮೇಶ್‌ಕುಮಾರ್.— ಮತ್ತೆ ಮತೀಯ ಸೌಹಾರ್ದತೆ ಬಗ್ಗೆ ಮಾತನಾಡಿದರು. ಮತೀಯ ಸೌಹಾರ್ದತೆ ಬಹಳ ಪ್ರಮುಖವಾದಂಥ ವಿಷಯ. ಮತೀಯ ಗಲಭೆಗಳನ್ನು ಮಾಡತಕ್ಕಂಥವರೂ ಕೂಡಾ ಬಹಳ ಕೆಟ್ಟ ಕ್ರಿಮಿಗಳು. ನನ್ನ ಕ್ಷೇತ್ರದಲ್ಲಿ ಗೌನಪಲ್ಲಿ ಎಂಬ ಗ್ರಾಮ ಇದೆ. ಅಲ್ಲಿ ಅಸೂರ್ ಖಾನಾ ಎಂಬ ವಿಚಾರದಲ್ಲಿ ವಿವಾದ ಬಂತು, ಆ ಗ್ರಾಮದಲ್ಲಿ ಜನರು ಹಿಂದೂ ಸಂರಕ್ಷಣಾ ಸಮಿತಿ ಎಂದು ಮಾಡಿಕೊಂಡು, ಮುಸಲ್ಮಾನ್ ಬಾಂಧವರಿಗೆ, ಅಲ್ಪಸಂಖ್ಯಾತರಿಗೆ ತೊಂದರೆಯನ್ನು ಕೊಟ್ಟು, ಇಡೀ ಗ್ರಾಮದಲ್ಲಿ ಉದ್ವಿಗ್ನ ವಾತಾವರಣವನ್ನು ಸೃಷ್ಟಿ ಮಾಡಿದರು. ಮೂರು ದಿವಸಗಳ ಕಾಲ ನಾವು ಅಲ್ಲಿ ಕುಳಿತು, ಪೋಲೀಸ್ ರೆವಿನ್ಯೂ ಇಲಾಖೆ ಅಧಿಕಾರಿಗಳು ಹಾಗೂ ನಾವು ಎಲ್ಲರೂ ಕುಳಿತು ಏನೋ ಒಂದು ಪರಿಹಾರ ಕಂಡುಹಿಡಿದು, ಯಾವುದೇ ರೀತಿಯ ಗಲಭೆಗಳು ಆಗದಂತೆ ಮಾಡಿದೆವು. ನನಗೆ ಬಹಳ ನೋವಾಗುತ್ತದೆ. ಮಾನ್ಯ ಮಲ್ಲಿಕಾರ್ಜುನಖರ್ಗೆಯವರೇ ತಾವು ವಿರೋಧ ಪಕ್ಷದ ಉಪನಾಯಕರಾಗಿದ್ದೀರಿ, ತಮಗೆ ತಿಳಿಸಲು ನೋವಾಗುತ್ತದೆ. ಯಾವ ಮನುಷ್ಯ ಈ ಹಿಂದೂ ಸಂರಕ್ಷಣಾ ಸಮಿತಿಯ ಅಧ್ಯಕ್ಷನಾಗಿದ್ದ, ಯಾವ ಮನುಷ್ಯ ಕೈಯಲ್ಲಿ ಕೋಲು ಹಿಡಿದುಕೊಂಡು ಮುಸಲ್ಮಾನ್ ಜನರನ್ನು ಹೊಡೆಯುವುದಕ್ಕೆ ಹೋದ ಆತನನ್ನು ನಿಮ್ಮ ಪಕ್ಷದ ವತಿಯಿಂದ ಜಿಲ್ಲಾ ಪರಿಷತ್ ಎಲೆಕ್ಷನ್‌ಗೆ ಕ್ಯಾಂಡಿಡೇಟ್ ಆಗಿ ಮಾಡಿದರು. ಅದಕ್ಕಿಂತ ನಾಚಿಕೆಗೇಡು ಬೇಕೇ. I request you or Mr. Basavalingappa to come to my Constituency and I will keep away. You hold an enquiry. I don't want any Governmental Enquiry or any Officer. ನ್ಯಾಯಾಂಗ ತನಿಖೆ ಬೇಕಾಗಿಲ್ಲ, ಯಾವುದೂ ಬೇಡ ನೀವೇ ಬಂದು ನೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೀವು ಬಿ.ಜೆ.ಪಿ. ಸಪೋರ್ಟ್ ತೆಗೆದುಕೊಂಡು ಹುಟ್ಟಿದವರು, ನಮಗೆ ಹೇಳುತ್ತಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಹಿಂದೂ ಸಮಾಜ ಎಂದು ಹೇಳಿಕೊಂಡು ಗಲಾಟೆ ಮಾಡಿದವರು ನಿಮ್ಮ ಪಕ್ಷದವರು ಅವರಿಗೆ ಟಿಕೆಟ್ ಕೊಟ್ಟಿದ್ದೀರಿ ಎಂದು ಅವರು ಹೇಳಿದರೆ ನಮ್ಮ ಕಡೆ ಏತಕ್ಕೆ ಕೈತೋರಿಸುತ್ತೀರಿ. ನಾವು ಹಿಂದೂ ದೇಶ ಆಗಬೇಕೆಂದು ಹೇಳುವುದು ನಿಜ. ಅದೇ ರೀತಿ ಬೇರೆ ಜನಾಂಗಗಳೂ ಕೂಡಾ ಬಾಳಬೇಕು, ಬದುಕಬೇಕು, ಎಲ್ಲರಿಗೂ ಸರಿಸಮಾನವಾದ ಗೌರವ ಸಿಗಬೇಕು ಎಂದು ನಾವು ಹೇಳುತ್ತೇವೆ. ಅದನ್ನು ಹತ್ತು ಬಾರಿ ಹೇಳುತ್ತೇವೆ ಮತೀಯ ಸೌಹಾರ್ದತೆ ಸಾಧಿಸುತ್ತೇವೆ ಎಂದು ಹೇಳಿಕೊಂಡು ನಿಮ್ಮ ಪಕ್ಷದವರು ಈ ರೀತಿ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಅದನ್ನು ನೀವು ಹೋಗಿ ಪರಿಶೀಲನೆ ಮಾಡುವಂತಹ ಪ್ರಯತ್ನ ಮಾಡಿ.

ಮಾನ್ಯ ಅಧ್ಯಕ್ಷರೇ ನಾನೇನು ಹೇಳುತ್ತಿದ್ದೇನೋ ಅದನ್ನು ಪೂರ್ತಿ ಮಾಡುವುದಕ್ಕೆ ಬಿಡುತ್ತಿಲ್ಲ. ಅವರಿಬ್ಬರಲ್ಲಿ ಯಾರಾದರೂ ಬರಲಿ, ವಿಚಾರಣೆ ಮಾಡಲಿ, ಈ ಎಲ್ಲಾ ಘಟನೆಗಳ ಬಗ್ಗೆ, ನಾನು ಹೇಳ ತಕ್ಕಂಥ ಮಾತಿನಲ್ಲಿ ಏನಾದರೂ ಒಂದೇ ಒಂದು ಪದ ಸತ್ಯಕ್ಕೆ ದೂರವಾಗಿದ್ದರೆ ನಾನು ಮತ್ತೆ ಈ ಸದನಕ್ಕೆ ಬರುವುದಿಲ್ಲ, ಬಹಿರಂಗವಾಗಿ ಅಧ್ಯಕ್ಷರನ್ನು ಕ್ಷಮಾಪಣೆ ಕೇಳುತ್ತೇನೆ. ಅವರು ಹೇಳಿದ ಕೆಲಸ ಮಾಡಿಕೊಂಡಿರುತ್ತೇನೆ, ನಾನು ಒಂದು ಕನ್‌ವಿಕ್‌ಷನ್ ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ನಾನು ಹೌಸ್ ಕಮಿಟಿ ಕಳುಹಿಸಿ ಎಂದು ಕೇಳುತ್ತಿಲ್ಲ ಅಲ್ಲಿ ಯಾವ ತರಹ ನಡೆಯುತ್ತಿದೆ ಎನ್ನುವುದನ್ನು ಗೊತ್ತಾಗುತ್ತದೆ, ಬನ್ನಿ. Either of you can come. I know your sentiments. One of them can come.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.— ಯಾವ ಪಕ್ಷದವರೇ ಆಗಲಿ ಅನ್ಯಾಯ ಮಾಡಿದ್ದರೆ ನಿಮ್ಮಲ್ಲಿ ಗೂಂಡಾ ಆಕ್ಟ್ ಇದೆ, ಬೇರೆ ಬೇರೆ ಕಾನೂನುಗಳು ಇವೆ. ಅದನ್ನು ಹಾಕಿ. ಆಗ ಯಾರು ಬಿಡಿಸುವುದಕ್ಕೆ ಬರುತ್ತಾರೆ ? ಆ ಕೆಲಸ ನೀವು ಮಾಡುವುದಿಲ್ಲ. ಈಗ ಬೂದಪ್ಪನವರ ಮೇಲೆ ಏನಾಯಿತು ಎಂದು ತಮಗೆ ಗೊತ್ತಿದೆ ಸಿರಸಿ ತಾಲ್ಲೂಕಿನ ಮಂಡಲ ಪಂಚಾಯಿತಿ ಸದಸ್ಯರೊಬ್ಬರು ಸುಮಾರು 2 ವರ್ಷಗಳ ಕಾಲ ಜೈಲಿನಲ್ಲಿದ್ದರು. ಅವರಿಗೆ ತಾವು ಮತ್ತೆ ಸೀಟು ಕೊಟ್ಟಿರಿ. ಅವರು ಗೆದ್ದು ಗಲಾಟೆ ಮಾಡಿದರು. ಅವರಿಗೆ ಆಗ ಯಾರು ಪ್ರೊಟೆಕ್ಷನ್ ಕೊಟ್ಟವರು ಡಾಕ್ಟರ್ ತಿಪ್ಪೇಸ್ವಾಮಿಯವರ ವರದಿ ಇಲ್ಲಿದೆ. ತಾವು ಓದಿ,

ಶ್ರೀ ವಿನಯಕುಮಾರ್ ಸೊರಕೆ.— ಸೌತ್ ಕೆನರಾದಲ್ಲಿ ಏನಾಯಿತು ಗೊತ್ತೇ.

ಅಧ್ಯಕ್ಷರು.— ನಾಲ್ಕೈದು ಜನ ಎದ್ದು ನಿಂತು ಮಾತನಾಡಿದರೆ ಹೇಗೆ ಕೇಳಿಸುತ್ತದೆ.

ಶ್ರೀ ಡಿ. ಎ. ಚಿನ್ನಪ್ಪ.— ಕಳೆದ ವರ್ಷ ವೀರಾಜಪೇಟೆಯಲ್ಲಿನ ಮುಸ್ಲಿಮ್‌ರನ್ನು ಓಡಿಸಲು ಪ್ರಯತ್ನ ಮಾಡಿದವರು ಯಾರು ಗೊತ್ತಿಲ್ಲವೇ ? Have anybody come and protected them ? ಆಮೇಲೆ ನನ್ನನ್ನು ಮರ್ಡರ್ ಮಾಡುವುದಕ್ಕೆ ಬಂದರು. ಆ ಬಗ್ಗೆ ಕೇಸ್ ನಡೆಯುತ್ತಿದೆ. ಆಗ ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿರಿ ? ದೂರು ಕೊಟ್ಟು ಒಂದು ತಿಂಗಳಾದ ಮೇಲೆ ಕೇಸ್ ರಿಜಿಸ್ಟರ್ ಮಾಡಿಸಿದರು. Have they taken any action ? when the complaint was given, it was registered after one month. What the Police were doing ?

ಶ್ರೀ ರಮೇಶ್‌ಕುಮಾರ್.— ಮಾನ್ಯ ಸದಸ್ಯರು ವಕೀಲರೆಂದು ಕಾಣುತ್ತದೆ.

ಶ್ರೀ ಡಿ.ಎ. ಚಿನ್ನಪ್ಪ.— ತಾವು ವಕೀಲರಿರಬಹುದು,

ಶ್ರೀ ರಮೇಶ್‌ಕುಮಾರ್ — ನಾನು ವಕೀಲನಲ್ಲ. ನಾನೊಬ್ಬ ಸದಸ್ಯ. ನಾನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೆಲವು ಘಟನೆಗಳನ್ನು ವಿವರವಾಗಿ ಹೇಳುತ್ತಿದ್ದೆ. ಸೌತ್ ಕೆನರಾದಲ್ಲಿ ಏನಾಯಿತು ನಿಮಗೆ ಗೊತ್ತೆ? ಮಡಕೇರಿಯಲ್ಲಿ ಏನಾಯಿತು ನಿಮಗೆ ಗೊತ್ತೆ? ಎಂದು ಕೇಳಿದರೆ ಹೇಗೆ? ಈ ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ಮಾಹಿತಿ ಕೊಡತಕ್ಕಂಥ ಜವಾಬ್ದಾರಿ ಹೊತ್ತಿರುವವರು ಇದ್ದಾರೆ, ಅವರು ಈ ಎಲ್ಲಾ ಮಾಹಿತಿಗಳನ್ನು ಕೊಡುತ್ತಾರೆ, ಆ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ,

ಶ್ರೀ ಡಿ.ಎ. ಚಿನ್ನಪ್ಪ.— ಈ ವಿಷಯದ ಬಗ್ಗೆ ಈ ಸದನದಲ್ಲಿ ನಾನು ಎರಡು ಸಲ ಮಾತನಾಡಿದ್ದೇನೆ. ಇದುವರೆವಿಗೂ ಏನೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ರಮೇಶ್‌ಕುಮಾರ್.— ಇದರಿಂದಲೇ ನಿಮ್ಮ ಪ್ರಾಕ್ಟೀಸ್ ಕಡಿಮೆಯಾಗುವುದು, ಕೇಸ್ ಏನೆಂದೇ ಅರ್ಥ ಮಾಡಿಕೊಳ್ಳುವುದಿಲ್ಲ. You have a got case. Please argue it before the concerned person. I am not a man to hear your case I am making out my case. Kindly have your patience. You are all practising Advocates. Why don't you have this much of sagacity Please bear with me. I am appealing to you. ನಡೆದಿರತಕ್ಕಂಥಾದ್ದು ಸತ್ಯಕ್ಕೆ ದೂರವಾದುದು ಎಂದು ಹೇಳುವುದಿಲ್ಲ. ಸತ್ಯವೆಂದು ಹೇಳುವ ಧೈರ್ಯ ಸಹ ನನಗಿಲ್ಲ. ನಾನು ನನ್ನ

ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹೇಳುತ್ತಿದ್ದೆ. ಸೌತ್ ಕೆನರಾದಲ್ಲಿ ಏನಾಯಿತು ಗೊತ್ತೇ? ನನಗೆಲ್ಲಿ ಗೊತ್ತಾಗುತ್ತದೆ? ಯಾರಾದರೂ ಬಂದು ಹೇಳಿದರೆ ಗೊತ್ತಾಗುತ್ತದೆ, ಇಲ್ಲದಿದ್ದರೆ ಹೇಗೆ ಗೊತ್ತಾಗುತ್ತದೆ. ನಾನು ಪ್ರಾರಂಭದಲ್ಲಿಯೇ ವಿವರಣೆ ಕೊಟ್ಟಿದ್ದೇನೆ. Though I identified with Janata Party as a party man ನಾನಿದ್ದು ನಿಂತು ನನ್ನ ಮೂಲಭೂತ ಸಮಸ್ಯೆ ಬಂದಾಗ ಪಕ್ಷದ ಇತಿಮಿತಿಯನ್ನು ಬಿಟ್ಟು ದೂರ ಹೋಗಿ ಮಾತನಾಡತಕ್ಕಂಥ, ಚರ್ಚೆ ಮಾಡತಕ್ಕಂಥ ಶಕ್ತಿ ಇದೆ. ಆ ವಿಚಾರವನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇನ್ನು ಅಮ್ಮಗಾರಪೇಟೆ ಎನ್ನುವ ಗ್ರಾಮ ನನ್ನ ಕ್ಷೇತ್ರದಲ್ಲಿದೆ. ಜನವರಿ ೧೧ನೇ ತಾರೀಖು ನಮ್ಮ ಪಕ್ಷದ ವತಿಯಿಂದ ಜನತಾ ವಿಜಯೋತ್ಸವ ಕಾರ್ಯಕ್ರಮವನ್ನಿಟ್ಟುಕೊಂಡಿದ್ದೆವು. ಆ ಜನರೆಲ್ಲಾ ಬರಬೇಕೆಂದು ಹೊರಟರು ಆ ಗ್ರಾಮದಲ್ಲಿ ಬೇರೆ ಜಾತಿಯವರದು ಒಂದೇ ಒಂದು ಮನೆ ಸಹ ಇಲ್ಲ. ಎಲ್ಲಾ ಪರಿಶಿಷ್ಟ ಜಾತಿ, ಮತ್ತು ಪಂಗಡಕ್ಕೆ ಸೇರಿದವರೇ. ಆ ದಿನ ಸುಮಾರು ೧೧ ಗಂಟೆ ಸಮಯದಲ್ಲಿ ಕೆಲವರು ಗುಂಪು ಕಟ್ಟಿಕೊಂಡು ಅಂದರೆ ಯೂತ್ ಕಾಂಗ್ರೆಸ್‌ನವರು, ಅವರು ಆ ಮನೆಗಳನ್ನೆಲ್ಲಾ ಧ್ವಂಸ ಮಾಡಿ ೬-೭ ಜನರ ಗುಡಿಸಲುಗಳಿಗೆ ಬೆಂಕಿ ಸಹ ಹಚ್ಚಿದ್ದಾರೆ. ಆ ಹಳ್ಳಿಗೆ ಹೋಗಿ ಮನೆಗಳನ್ನೆಲ್ಲಾ ಕಂಪ್ಲೀಟ್ ಆಗಿ ಧ್ವಂಸ ಮಾಡಿ ಆರೇಳು ಗುಡಿಸಲುಗಳಿಗೆ ಬೆಂಕಿ ಹಚ್ಚುವ ಪ್ರಯತ್ನ ಮಾಡಿದ್ದರು. ಸುಮಾರು ೩೫ ಜನರನ್ನು ಪೋಲೀಸಿನವರು ಬಂಧಿಸಿ ಜೈಲಿನಲ್ಲಿ ಇಟ್ಟಿದ್ದಾರೆ. ನಂತರದ ವಿಷಯಗಳನ್ನು ವರ್ಣನೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಅದೇ ನಾನು ಯೂತ್ ಕಾಂಗ್ರೆಸ್‌ನಲ್ಲಿ ಇದ್ದಿದ್ದಾಗ ಅಂದರೆ, ೧೯೭೩ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ಯೂತ್ ಕಾಂಗ್ರೆಸ್ ವತಿಯಿಂದ ಒಂದು ದೊಡ್ಡ ಮೆರವಣಿಗೆ ಮಾಡಿ ಸಮ್ಮೇಳನ ಮಾಡಿದ್ದೆವು. ಈ ಸಮ್ಮೇಳನಕ್ಕೆ ಆಗ ಕೇಂದ್ರದಲ್ಲಿ ಕಾರ್ಮಿಕ ಸಚಿವರಾಗಿದ್ದ ಶ್ರೀ ರಘುನಾಥ್ ರೆಡ್ಡಿ ಮುಖ್ಯ ಅತಿಥಿಯಾಗಿ ಬಂದಿದ್ದರು. ಶ್ರೀ ಕೆ.ಹೆಚ್. ರಂಗನಾಥ್‌ರವರ ಅಧ್ಯಕ್ಷತೆಯಲ್ಲಿ ಈ ಸಮ್ಮೇಳನವನ್ನು ಮಾಡಲಾಗಿತ್ತು. ಆ ಸಭೆಯಲ್ಲಿ ನಾನು ಒಂದು ನಿರ್ಣಯವನ್ನು ಮಂಡಿಸಿದ್ದೆ. ಈ ದೇಶದಲ್ಲಿ ನಕ್ಸಲೈಟ್ ಎಂದು ಯಾರನ್ನು ಕರೆಯುತ್ತೇವೆಯೋ ಅವರೇ ಈ ದೇಶದ ಸಂಪತ್ತು. ಅವರು ವಿಭಿನ್ನವಾದ ವಿಚಾರಧಾರೆಗಳನ್ನು ಹೊಂದಿದ್ದಾರೆ, ಅವರು ದೇಶದ್ರೋಹಿಗಳಲ್ಲ. ಗಾಂಧಿಯವರ ಮರಣಾ ನಂತರ ಗಾಂಧಿ ಟೋಪಿಯನ್ನು ಧರಿಸಿ ದೇಶವನ್ನು ಹಾಳು ಮಾಡುತ್ತಾ ಯಾರು ವಿಜೃಂಭಿಸುತ್ತಿದ್ದಾರೋ ಆ ಜನರನ್ನು ಹೊರಗಡೆ ಬಿಟ್ಟು ನಕ್ಸಲೈಟುಗಳನ್ನು ತೆಗೆದುಕೊಂಡು ಹೋಗಿ ಜೈಲಿನಲ್ಲಿ ಭರ್ತಿ ಮಾಡುತ್ತಿದ್ದೀರಿ ಎಂದು ಹೇಳಿದ್ದೆ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ನಾವು ಯಾವುದೇ ಪಕ್ಷದಲ್ಲಿದ್ದರೂ ಕೂಡ ಕೆಲವು ಮೂಲಭೂತ ವಿಚಾರಗಳಲ್ಲಿ ನಮ್ಮ ಆಲೋಚನೆ, ನಮ್ಮ ನಡೆ ನುಡಿಗಳು ಯಾವಾಗಲೂ ಭಿನ್ನವಾಗಿರುತ್ತವೆ.

ಲ್ಯಾಂಡ್ ರಿಫಾರ್ಮ್ಸ್ ವಿಚಾರದಲ್ಲಿ ಹೇಳಬೇಕಾದರೆ, ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಇವರು ಅಧಿಕಾರದಲ್ಲಿದ್ದ ಅವಧಿಯಲ್ಲಿ ಎಂದರೆ ೧೯೮೦ ರಿಂದ ೧೯೮೩ ರವರೆಗೆ ಎಷ್ಟು ಕೇಸ್‌ಗಳು ಗೇಣಿದಾರರ ವಿರುದ್ಧವಾಗಿ ನಡೆದಿವೆ ಎಂಬುದನ್ನು ತಂದು ನೋಡಿದರೆ ಗೊತ್ತಾಗುತ್ತದೆ.

ಶ್ರೀ ವಿನಯ್‌ಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ,

(ಗೊಂದಲ)

ಅಧ್ಯಕ್ಷರು.—ಮಾನ್ಯ ಸೋರ್ಕೇಯವರೇ ಈ ರೀತಿ ಮಾತನಾಡುವ ರೂಢಿಯನ್ನು ಬಿಡಬೇಕು.

(ಗೊಂದಲ)

ಶ್ರೀ ಎಂ. ರಘುಪತಿ.—ಮಾತನಾಡುವಾಗ ಅವರು ಮಧ್ಯದಲ್ಲಿ ಇಂಟರಪ್ಟ್ ಮಾಡುವುದು ಏಕೆ?

ಅಧ್ಯಕ್ಷರು.—ನಿಮಗೆ ಮಾತನಾಡಬಾರದೆಂದು ನಾನು ಹೇಳುವುದಿಲ್ಲ. ಸೋರ್ಕೇಯವರೇ ಮಾತನಾಡುವ ಪದ್ಧತಿಯನ್ನು ಕಲಿಯಿರಿ. ಐದಾರು ಜನ ಒಂದೇ ಸಾರಿ ಮಾತನಾಡಿದರೆ ಹೇಗೆ?

ಶ್ರೀ ರಮೇಶ್ ಕುಮಾರ್.—ದಯಮಾಡಿ ನನ್ನ ಮಾತನ್ನು ಪೂರ್ಣ ಕೇಳಿ.

ಶ್ರೀ ಬಿ ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯ ಮಿತ್ರರು ಒಂದು ಮಾತನ್ನು ಹೇಳಿದ್ದಾರೆ ೧೯೮೦ ರಿಂದ ೧೯೮೩ ರವರೆಗೆ ಯಾವ ಭೂ ತೀರ್ಮಾನಗಳ ಆದವೋ ಅವುಗಳು ಭೂ ಮಾಲೀಕರ ಕಡೆಗೆ ಹೋಯಿತೆಂದು ಹೇಳಿದ್ದಾರೆ ಭೂ ಮಾಲೀಕರ ಕಡೆ ಅಧಿಕ ಸಂಖ್ಯೆಯಲ್ಲಿ ನ್ಯಾಯ ತೀರ್ಮಾನವಾಗಿದೆಯೆಂದು ಯಾವ ಆಧಾರದ ಮೇಲೆ ಇವರು ಹೇಳುತ್ತಿದ್ದಾರೆ? ಏಕೆಂದರೆ, ಅವರ

ಕ್ಷೇತ್ರದಲ್ಲಿ ಏನಾಗಿದೆಯೋ ನನಗೆ ಗೊತ್ತಿಲ್ಲ. ಆದರೆ ನನ್ನ ಕ್ಷೇತ್ರದಲ್ಲಿ ಹಾಗೂ ನನ್ನ ಸುತ್ತಮುತ್ತಲಿನ ಕ್ಷೇತ್ರಗಳಲ್ಲಿ ಬಹಳಷ್ಟು ಗೇಣಿದಾರರ ಕಡೆಗೆ ನ್ಯಾಯ ದೊರಕಿದೆ. ಕೆಲವು ಕಡೆ ಅಕಸ್ಮಾತ್ ಭೂ ಮಾಲೀಕರಿಗೆ ಕಡೆಗೆ ಆಗಿರಬಹುದು; ಅತ್ಯಧಿಕ ಸಂಖ್ಯೆಯಲ್ಲಿ ಯಾರು ನಿಜವಾದ ಗೇಣಿದಾರರಿದ್ದಾರೋ ಅವರ ಕಡೆಗೇ ನ್ಯಾಯ ತೀರ್ಮಾನಗಿದೆಯೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಜನತಾ ಸರ್ಕಾರ ಅಧಿಕಾರಕೆ ಬಂದ ಮೇಲೆ ಭೂ ನ್ಯಾಯ ಮಂಡಳಿಗಳ ಮುಂದೆ ಇರುವ ಕೇಸ್‌ಗಳು ತೀರ್ಮಾನ ವಾಗುವುದಕ್ಕೆ ಬಹಳ ನಿಧಾನವಾಗಿದೆಯೆಂದು ತಿಳಿದು ಬಂದಿದೆ. ಅದರ ಬಗ್ಗೆಯೂ ಮಾನ್ಯ ಸದಸ್ಯರು ಮಾತನಾಡಬೇಕು.

ಶ್ರೀ ವಿನಯ್‌ಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ಮತ್ತೊಮ್ಮೆ ನಿಮಗೆ ಮಾತನಾಡುವುದಕ್ಕೆ ಚಾನ್ಸ್ ಕೊಡುತ್ತೇನೆ. ಮಾನ್ಯ ರಮೇಶ್‌ಕುಮಾರ್‌ರವರೇ ತಾವು ಮಾತನಾಡಿ.

ಶ್ರೀ ರಮೇಶ್ ಕುಮಾರ್.—ನಮ್ಮ ಮಾನ್ಯ ಮಿತ್ರರಾದಂತಹ ಉಮರಬ್ಬನವರು ಹೇಳಿದರು. ನಾನೂ ಅವರು ಎಲ್ಲರೂ ಕೂಡ ಒಂದು ಸರಕಾರವನ್ನು, ಒಂದು ಕಾಯಿದೆಯನ್ನು, ಒಂದು ಕ್ರಮ ವನ್ನು ವಿವರಣೆ ಮಾಡತಕ್ಕಂಥಾದ್ದು ನಮ್ಮ ಅನುಭವದ ಹಿನ್ನಲೆಯಿಂದ. ಕಂಪ್ಯೂಟರ್‌ನ ಅಂಕಿಅಂಶ ಗಳು ನನ್ನಲ್ಲಿ ಇಲ್ಲ. ಮಾನ್ಯರು ಬೇಕು ಎನ್ನುವುದಾದರೆ ತರಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.
ನಮ್ಮ ಪ್ರಾಂತ್ಯದಲ್ಲಿ ನಮ್ಮ ಪ್ರದೇಶದಲ್ಲಿ, ಎಲ್ಲವೂ ಸರಿಯಾಗಿದೆ ಎಂದು ಜನರಲೈಸ್ಡ್ ಅಭಿ ಪ್ರಾಯವನ್ನು ನೀವು ಹೇಗೆ ಕೊಡುತ್ತೀರೋ ಅದೇ ರೀತಿಯಲ್ಲಿ ನಾನು ಕೆಲಸ ಮಾಡತಕ್ಕಂಥ ಪ್ರದೇಶ ದಲ್ಲಿ, ಅಲ್ಲಿಯ ಒಂದು ವಾತಾವರಣದಲ್ಲಿ, ಅಲ್ಲಿರತಕ್ಕಂಥ ವಿಚಾರವನ್ನು ನಾನು ತಮಗೆ ತಿಳಿಸುತ್ತಾ ಇದ್ದೇನೆ. ಮತ್ತೆ ಅದಕ್ಕೆ ಹೊರತಾಗಿ ಏನೂ ಇಲ್ಲ...

ಶ್ರೀ ವಿನಯಕುಮಾರ್ ಸೊರಕೆ.—ನೀವೂ ನ್ಯಾಯಮಂಡಲಿಯಲ್ಲಿ ಮೆಂಬರ್ ಆಗಿದ್ದೀರಿ...

ಅಧ್ಯಕ್ಷರು.—ಮಾನ್ಯ ಸೊರಕೆಯವರೇ, ನಾನು ನಿಮಗೆ ಹೇಳುತ್ತಿರುವುದು ತಿಳಿಯುವುದಿಲ್ಲ ಎಂದು ಕಾಣುತ್ತದೆ.

ಶ್ರೀ ರಮೇಶ್ ಕುಮಾರ್.—ಹೌದು ನಾನೂ ಮೆಂಬರ್ ಆಗಿದ್ದೇನೆ, ಅದು ನಿಜ. ನನ್ನ ಕೋರಿಕೆಯ ಮೇರೆಗೆ ತಾವು ಲ್ಯಾಂಡ್‌ಟ್ರಿಬ್ಯುನಲ್ ಮೆಂಬರ್ಸನ್ನು ಮಾಡಿಕೊಡಲಿಲ್ಲ. ಅದರ ಬಗ್ಗೆ ನನಗೆ ಚಿಂತೆ ಇಲ್ಲ. ನಮ್ಮ ಜನರಿಗೆ ತೊಂದರೆಯಾದರೂ ಕೂಡ, ನನ್ನಲ್ಲಿಯ ಜನರು ಸಾಮಾನ್ಯ ಜನರು ಯಾರಿದ್ದಾರೆ, ಅವರು ಸಾಕಷ್ಟು ಶಕ್ತಿಯನ್ನು ನನಗೆ ಕೊಟ್ಟಿದ್ದಾರೆ. ಜಮೀನ್ದಾರರು ಯಾರಿದ್ದಾರೆ ಅಂತಹತವರಿಗೆ ಬರಲಿಕ್ಕೆ ಬಿಡಲಿಲ್ಲ. ಅಪಿಲೇಟ್ ಟ್ರಿಬ್ಯುನಲ್‌ನ ವಿಚಾರಕ್ಕೆ ಹೋಗುವುದಕ್ಕೆ ಮೊದಲು ನಾನು ಕೆಲವು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಲೇ ಬೇಕಾಗಿದೆ. ಲ್ಯಾಂಡ್‌ಟ್ರಿಬ್ಯುನಲ್ ರಿಫೋರ್ಮ್ಸ್ ವಿಚಾರ ಬಂದಾಗ ಕರ್ನಾಟಕದಲ್ಲಿ, ಆಗ ತಾವುಗಳು ೧೯೭೪ ರಲ್ಲಿಯೂ ಕೂಡ ಈ ಸದನದ ಸದಸ್ಯರಾಗಿ ದ್ದೀರಿ. ದಿವಂಗತ ದೇವರಾಜ್ ಅರಸ್‌ರವರು ಇದನ್ನು ಅನುಷ್ಠಾನಕ್ಕೆ ತರಬೇಕೆಂದು ಪ್ರಯತ್ನ ಪಟ್ಟಾಗ ಕಾಂಗ್ರೆಸ್ ಪಕ್ಷದ ಒಳಗೇ ಇದನ್ನು ವಿರೋಧ ಮಾಡತಕ್ಕಂಥ ಜನರಿದ್ದರು. ಆಗ ಕಾಂಗ್ರೆಸ್ ಪಕ್ಷದಲ್ಲಿ Congress forum for Socialist Action ಎನ್ನತಕ್ಕಂಥ ಒಂದು ಗುಂಪು ಪ್ರಗತಿ ಪರವಾಗಿ ಆಲೋಚನೆ ಮಾಡತಕ್ಕಂಥ ಒಂದು ಗುಂಪಿನ ಜನರು ಇದ್ದರು. ಅವರೆಲ್ಲರೂ ಕೂಡಿ, ಸೇರಿ, ಒಂದು ಸಿಗ್ನೇಚರ್ ಕ್ಯಾಂಪೇನ್ ಮಾಡಿಕೊಂಡರು. ಪ್ರಗತಿಪರರಾದ ಮಾನ್ಯ ಕೃಷ್ಣನ್‌ರವರು ಮತ್ತಿ ತರ ಸ್ನೇಹಿತರು ಯಾರುಯಾರು ಇದ್ದರು, ಅವರಲ್ಲಿ ಮಾನ್ಯ ತಿಮ್ಮಪ್ಪನವರು ಕೋಣಂದೂರು ಲಿಂಗಪ್ಪನವರು, ಬಂಗಾರಪ್ಪನವರು, ಇವರೆಲ್ಲರೂ ಕೂಡ ಈ ಕಾರ್ಯಕ್ರಮದಲ್ಲಿ ತೊಡಗಿಸಿ ಪರೋಕ್ಷ ವಾಗಿ ಈ ಶಾಸನ ಬರುವುದಕ್ಕೆ ಪಕ್ಷದೊಳಗಿನಿಂದ ತಮ್ಮ ತಮ್ಮಲ್ಲಿ ತಾವೇ ಒತ್ತಡ ತರಿಸಿಕೊಂಡು ದಿವಂಗತ ದೇವರಾಜ್ ಅರಸ್‌ರವರು ಇದನ್ನು, ಈ ಕಾಯಿದೆಯನ್ನು ತಂದರು. ಆದರೆ ಇವರಿಗೆ ಅವರೇ ಹೆಸರೇ ಇವೊತ್ತು ಗೊತ್ತಿಲ್ಲ. ಮಾತು ಮಾತಿಗೆ ಕೂಗಾಡುತ್ತಿದ್ದಾರೆ It was at the cost of his office or even I say, at the cost of his life, he ventured to bring Land Reforms in this State. It was not an ordinary thing. His belief that only people should do it and not the officials. It is an event in the history. How many people could do it ? ಆಗ ನಾವು

ಯುವ ಕಾಂಗ್ರೆಸ್ಸಿಗರಾಗಿದ್ದು, ಆಗ ರೆವಿನ್ಯೂ ಮಂತ್ರಿಗಳಾಗಿದ್ದ ಮಾನ್ಯ ಹುಚ್ಚಮಾಸ್ತಿಗೌಡರ ಮನೆಯ ಮುಂದೆ ಸತ್ಯಾಗ್ರಹವನ್ನು ಮಾಡಬೇಕಾಗಿ ಬಂತು, ಕಾರಣ ಅವರು ದೇವಸ್ಥಾನಗಳಿಗೆ, ಮಠಗಳಿಗೆ ವಿನಾಯತಿಯನ್ನು ಕೊಡುತ್ತಾರೆ ಎನ್ನುವ ಸುದ್ದಿಯು ಹಬ್ಬಿಸಿದಾಗ ನಾವು ಹೋಗಿ ಅಲ್ಲಿ ಅಜಿಟೇಶನ್ ಮಾಡಬೇಕಾಗಿ ಬಂತು. ಕಾರಣ ಹುಚ್ಚಮಾಸ್ತಿಗೌಡರಿಗೆ ದೇವರ ಮೇಲೆ ಸ್ವಲ್ಪ ನಂಬಿಕೆ ಜಾಸ್ತಿ, ಆದ ಕಾರಣ ಎಲ್ಲಿಯಾದರೂ ಅವರಿಗೆ ವಿನಾಯತಿಯನ್ನು ಕೊಟ್ಟುಬಿಟ್ಟಾರು, ದೇವರ ಹೆಸರಿನಲ್ಲಿ ಬಡಜನರಿಗೆ ತೊಂದರೆಯಾದೀತು ಎಂದು ನಮ್ಮ ಭಾವನೆಯಾದುದರಿಂದ ನಾವು ಆಗ ಸತ್ಯಾಗ್ರಹವನ್ನು ಮಾಡಬೇಕಾಯಿತು. ನಾನು ಇವೊತ್ತು ಪಕ್ಷದ ಹಿತದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಗೇಣಿದಾರರಿಗೆ ತೊಂದರೆಯಾಗುತ್ತಾ ಇದ್ದರೆ, ಅಷ್ಟು ಸಂಕುಚಿತ ಮನೋಭಾವನೆಯಿಂದ ಮಾತನಾಡತಕ್ಕಂಥ ಮನುಷ್ಯನು ನಾನಲ್ಲ. ಅಪಿಲೇಟ್ ಟ್ರಿಬ್ಯುನಲ್ ಮಾಡಿದಾಗ, ನನ್ನ ಪಕ್ಷದ ಶಿಸ್ತನ್ನು ಉಲ್ಲಂಘಿಸಿ, ಮಾತನಾಡಿದ್ದೇನೆ. ಅದರಲ್ಲಿನ ತಪ್ಪುಗಳನ್ನು ಎತ್ತಿ ಹೇಳಿದ್ದೇನೆ. ಪಕ್ಷದ ಅಧ್ಯಕ್ಷರು ನನ್ನನ್ನು ಕರೆದು ಆಗ ಬುದ್ಧಿ ಮಾತನ್ನು ಹೇಳಿದರು. ನೀವು ಸ್ವಲ್ಪ ಇಂಪಲ್ಸೀವ್ ಆಗಿದ್ದೀರಿ ಎಂದು ಕಾಣುತ್ತದೆ, ಎಲ್ಲವನ್ನೂ ಆಲೋಚನೆ ಮಾಡಿದ್ದಾರೆ ಡೋಂಟ್ ಗೆಟ್ ಹರ್ಟ್ ಆರೀತಿಯಾಗಿ ಏನೂ ಆಗುವುದಿಲ್ಲ ಎಂದು ಹೇಳಿದರು. ಈ ಬಗ್ಗೆ ನಾನು ಒಂದು ಪ್ರಶ್ನೆಯನ್ನೂ ಕೂಡ ಕಳುಹಿಸಿಕೊಟ್ಟಿದ್ದೇನೆ. ಅದರಲ್ಲಿ ಲ್ಯಾಂಡ್ ಟ್ರಿಬ್ಯುನಲ್ ಆದಮೇಲೆ ಎಷ್ಟು ತೀರ್ಮಾನಗಳು ಆಗಿವೆ. ಎಷ್ಟು ತೀರ್ಮಾನಗಳು ಕೆಳಗಿನ ಹಂತದಲ್ಲಿ ಭೂನ್ಯಾಯ ಮಂಡಳಿ ಒಳಗೆ ಗೇಣಿದಾರರ ಪರವಾಗಿ ಆಗಿರತಕ್ಕಂಥವು ಇವೆ, ಮತ್ತು ಗೇಣಿದಾರರ ವಿರುದ್ಧವಾಗಿರುವವು ಎಷ್ಟು ಎಂದು ಕೇಳಿದ್ದೇನೆ. ಇದು ಚಪ್ಪಾಳೆ ತಟ್ಟುವ ವಿಷಯವಲ್ಲ. I may be in this House or I may not be in this House. We may get into different political parties suiting our individual conveniences. However, we have basic conviction and ideology, that is we will never cheat the people. That is the blood I have. How many of you have done this my dear friends I want to know ? ಮಾನ್ಯ ಮೊಯಿಲಿಯವರಿಗೆ ಅರ್ಥವಾಗುತ್ತದೆ ಲ್ಯಾಂಡ್ ರಿಫಾರ್ಮ್ಸ್ ತರಬೇಕಾದರೆ ಆಗಿರ ತಕ್ಕಂತಹ ಕಷ್ಟ ಏನು ಎಂದು ಮಾನ್ಯ ಖರ್ಗೆಯವರಿಗೆ ಗೊತ್ತಿರುತ್ತದೆ, ಮಾನ್ಯ ಬಸವ ಲಿಂಗಪ್ಪನವರಿಗೆ ಗೊತ್ತಿರುತ್ತದೆ ಹಾಗೂ ಶ್ರೀಮತಿ ಮನೋರಮಾ ಮಧ್ವರಾಜ್‌ರವರಿಗೆ ಗೊತ್ತಿದೆ ಏಕೆಂದರೆ ಅವೊತ್ತಿನ ದಿವಸ ಅವರು ಸದಸ್ಯರಾಗಿದ್ದು ಪಕ್ಷದ ಒಳಗೆ ಇದ್ದಂತಹ ವಿರೋಧವನ್ನು ಭೇದಿಸಿಕೊಂಡು ಲ್ಯಾಂಡ್ ರಿಫಾರ್ಮ್ ಅನ್ನು ತರಬೇಕಾಯಿತು. ಇವೊತ್ತು ಕೂಡ ಪಟ್ಟಭದ್ರ ಹಿತಾಸಕ್ತಿಗಳು ಭೂಮಾಲೀಕರ ಪರವಾಗಿ ಇರತಕ್ಕತಹವರು ಇದನ್ನು ಅನುಷ್ಠಾನಕ್ಕೆ ತರದೇ ಇರುವ ರೀತಿಯಲ್ಲಿ ಎಲ್ಲಾ ರೀತಿಯ ಪ್ರಯತ್ನವನ್ನು ಮಾಡಿದರು ನಂತರ ಅವರು ಫೇಲ್ ಆದರು. ಅದನ್ನು ಅವರು ಮರೆತರೆ ನಾವು ಏನೂ ಮಾಡುವುದಕ್ಕಾಗುವುಲ್ಲ. ಆ ಸಂದರ್ಭದಲ್ಲೂ ಕೂಡ ಭೂ-ಮಿತಿ ಬಗ್ಗೆ ಸರಕಾರ ಏನು ಆಜ್ಞೆ ಹೊರಡಿಸಿದೆ ಮತ್ತು ಅದರ ಪ್ರಕಾರ ಎಲ್ಲರೂ ಕೂಡ ಇಂತಿಷ್ಟೇ ಜಮೀನನ್ನು ಹೊಂದಿದ್ದೇವೆಂದು ಘೋಷಣೆಯನ್ನು ಏನು ಕೊಟ್ಟಿದ್ದಾರೆ ಅವರಲ್ಲಿ ಬಹುತೇಕ ಜನ ಅಂದರೆ ಇದರಲ್ಲಿರತಕ್ಕಂತಹವರು ಎಲ್ಲರೂ ಕೂಡ ತಪ್ಪು ಮಾಹಿತಿಯನ್ನು ಸರಕಾರಕ್ಕೆ ಒದಗಿಸಿಕೊಟ್ಟಿದ್ದಾರೆ. ದಯಮಾಡಿ ಸರಕಾರದವರು ಈ ಕೂಡಲೇ ಅವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಯಾರು ಇಂತಹ ತಪ್ಪು ಮಾಹಿತಿ ಕೊಟ್ಟಿದ್ದಾರೆ ಹಾಗೂ ಕಾನೂನಿಗೆ ವಿರೋಧವಾಗಿ ಹೆಚ್ಚು ಭೂಮಿಯನ್ನು ಏನು ತಮ್ಮ ಒಡೆತನದಲ್ಲಿ ಇಟ್ಟುಕೊಂಡಿದ್ದಾರೆ ಆ ಎಲ್ಲಾ ಭೂಮಿಯನ್ನು ಸರಕಾರ ಸ್ವಾಧೀನಕ್ಕೆ ತೆಗೆದುಕೊಂಡು ಅರ್ಹರಾದ ಬಡವರಿಗೆ ಹಂಚತಕ್ಕಂತಹ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಸರಕಾರದವರಲ್ಲಿ ಈ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಡೆಮಾಕ್ರಸಿಯ ಬಗ್ಗೆ ಹೇಳುವುದಾದರೆ ಮಂಡಲ್ ಪಂಚಾಯಿತಿ ಅಂದರೆ ತಮಾಷೆ ಮಾಡುತ್ತಾರೆ. ಮಾನ್ಯ ರಾಜ್ಯಪಾಲರು ಓದಂತ್ತಿರಬೇಕಾದರೆ ಅವರು ಇಲ್ಲಿ ಗೇಲಿ ಮಾಡುತ್ತಾರೆ.

ಎಲ್ಲವನ್ನೂ ಅಲ್ಲಿಂದ ನಿಗದಿತಗೊಳಿಸಿಕೊಂಡಿರತಕ್ಕಂತಹವರಿಗೆ ಡೀ-ಸೆಂಟ್ರಲೈಸೇಷನ್ ಎಂದರೆ ಸ್ವಲ್ಪ ಮನಸ್ಸಿಗೆ ನೋವೇ. ನಿಜ ಒಪ್ಪುತ್ತೇನೆ. ರೆವಿನ್ಯೂ ಇಲಾಖೆಯಲ್ಲಿ ನಾಡ ಕಚೇರಿಗಳನ್ನು ಮಾಡಿದ್ದೇವೆ. ಯಾವುದೇ ಒಬ್ಬ ರೈತ ಒಂದು ಸಣ್ಣ ಕೆಲಸವಾಗಬೇಕಾದರೆ ತಾಲ್ಲೂಕು ಕಚೇರಿಗೆ ಹೋಗಬೇಕಾಗಿತ್ತು, ಈಗ ಆ ಕೆಲಸವನ್ನು ಹೋಬಳಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ಅಂದರೆ ನಾಡ-ಕಚೇರಿಗಳಲ್ಲಿ ಮಾಡಿಕೊಡುತ್ತೇವೆ. ಇದೇನು ರೈತರಿಗೆ ವಿರೋಧವಾದಂತಹ ಕೆಲಸವೇ ?

ಶ್ರೀ ಟಿ. ಎ. ಚಿನ್ನಪ್ಪ.—ಮಾನ್ಯ ಗುಂಡೂರಾವ್‌ರವರ ಕಾಲದಲ್ಲಿಯೂ ಮಾಡಿದ್ದಾರೆ.

ಶ್ರೀ ರಮೇಶ್ ಕುಮಾರ್.—ಮಾನ್ಯ ಚಿನ್ನಪ್ಪನವರ ಬಾಯಲ್ಲಿ ಮಾನ್ಯ ಗುಂಡೂರಾಯರ ಬಗ್ಗೆ ಒಳ್ಳೆಯ ಮಾತು ಬಂತು. ಅವರೂ ಹೇಗಿದ್ದರೂ ತಮ್ಮ ಪಕ್ಷಕ್ಕೆ ವಾಪಸ್ ಬರುತ್ತಿದ್ದಾರೆ. He is on his way.

SRI RAMANATH RAI.—What about you ?

SRI K. RAMESH KUMAR.—I am a small man. I do not have big ambition. ನಾನು ಎಲ್ಲೋ ಒಂದು ಕಡೆಗೆ ಇರುತ್ತೇನೆ ನಿಮಗೇಕೆ ? ಮಂಡಲ ಪಂಚಾಯಿತಿಗಳು ಜಿಲ್ಲಾ ಪರಿಷತ್ತುಗಳು ಏನಿವೆ ಇದರ ಏಕೈಕ ಉದ್ದೇಶ ಏನೆಂದರೆ ನಮ್ಮ ವ್ಯವಸ್ಥೆ ಒಳಗೆ ಆಡಳಿತ ಮತ್ತು ಅಧಿಕಾರ ಕೇಂದ್ರೀಕರಣವಾಗಿದೆ ಇದನ್ನು ಸರಳಗೊಳಿಸಬೇಕು ಎಂದು ನಮ್ಮ ಉದ್ದೇಶವಾಗಿದೆ ನಮಗೆ ಏನು ಬರಬೇಕು ಹಾಗೂ ಬಂದದ್ದನ್ನು ಹೇಗೆ ವಿನಿಯೋಗ ಮಾಡಿಕೊಳ್ಳಬೇಕು ಮತ್ತು ನಮ್ಮ ಸ್ವಾತಂತ್ರ್ಯ ನಮಗೆ ಇರಬೇಕೆಂಬ ಉದ್ದೇಶದಿಂದ ಈ ಒಂದು ಶಾಸನವನ್ನು ಜಾರಿಗೆ ತಂದಿದೆ ಇದನ್ನು ತರತಕ್ಕಂತಹ ಸಂದರ್ಭದಲ್ಲಿ ಮತ್ತೆ ಹಲವು ಸಂದರ್ಭಗಳಲ್ಲಿ ಉಪ-ನಾಯಕರು ಹಾಗೂ ಇನ್ನು ಕೆಲವು ಸಂದರ್ಭಗಳಲ್ಲಿ ಮಾನ್ಯ ಬಂಗಾರಪ್ಪನವರು ಪ್ರಸ್ತಾಪ ಮಾಡಿದ್ದಾರೆ ಹಳ್ಳಿಗಳಲ್ಲಿ ಪಾಳೆಗಾರಿಕೆ ಪ್ರಾರಂಭವಾಗಿದೆ ಎಂದು ಪಾಳೆಗಾರಿಕೆ ಮನೋಭಾವ ಹೊಂದಿರತಕ್ಕಂತಹವರು ನಮ್ಮ ಪಕ್ಷದಲ್ಲೂ ಇದ್ದಾರೆ ನಿಮ್ಮ ಪಕ್ಷದಲ್ಲೂ ಇದ್ದಾರೆ. ನಮ್ಮ ಕ್ಷೇತ್ರದಲ್ಲಿನ ನಂಬಿಹಳ್ಳಿಯಲ್ಲಿ ಪ್ರಧಾನರಾಗಿರ ತಕ್ಕಂತಹವರು ನಿಮ್ಮ ಪಕ್ಷದವರು. ಸ್ಪೆಷಲ್ ಕಾಂಪೊನೆಂಟ್‌ನಲ್ಲಿ ತೆಂಗಿನ ಗಿಡವನ್ನು ಅರ್ಹ ಬಡವರಿಗೆ ಹಂಚಬೇಕೆಂದು ಕೊಟ್ಟರೆ, ಒಂದು ಪಟ್ಟಿ ಇದೆ ಅದನ್ನು ತರಲಿಲ್ಲ ನಾಳೆ ತಂದು ಕೊಡುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ನಮ್ಮ ಪಾರ್ಟಿಯಲ್ಲೂ ಇರುತ್ತಾರೆ ನಿಮ್ಮ ಪಾರ್ಟಿಯಲ್ಲೂ ಜಾಸ್ತಿ ಇರುತ್ತಾರೆ ಅದಕ್ಕೇ ಮಾಡುವುದು ಬೇಡ ಈ ಒಂದು ಎಕ್ಸ್‌ಪರಿಮೆಂಟ್ ಮಾಡಿ ಜನರಿಗೆ ತೊಂದರೆ ಕೊಡಬೇಡಿ ಎಂದು ಹೇಳಿದ್ದುದು, ಅವರು ತೆಂಗಿನ ಗಿಡಗಳನ್ನು ಕೊಟ್ಟರತಕ್ಕಂಥ ಪಟ್ಟಿಯನ್ನು ನೋಡಿದರೆ ಅವರ ತಂದೆ ಹೆಸರಿಗೆ ಒಂದು, ಅವರ ಜೊತೆಯಲ್ಲಿ ಜಿಲ್ಲಾ ಪರಿಷತ್ತಿನಲ್ಲಿ ಹೆಣ್ಣು ಮಗಳೊಬ್ಬಳು ಗೆದ್ದಿದ್ದಾರೆ, ಅವರ ಗಂಡನಿಗೆ ಒಂದು, ಅವರ ಚಿಕ್ಕಪ್ಪನಿಗೆ ಒಂದು. ಇನ್ನೊಂದು ಮಂಡಲ್ ಮೆಂಬರ್‌ಗೆ ಒಂದು. ಇದು ಮನುಷ್ಯನ ಸ್ವಭಾವ. ನಾನು ಪ್ರಾರಂಭದಲ್ಲಿ ಹೇಳಿದ ಹಾಗೆ ನಮ್ಮ ಪಕ್ಷಗಳಿಗೆ ಬರತಕ್ಕಂಥವರು ಯಾರು ಇದ್ದಾರೆ, ಅದು ನಿಮ್ಮ ಪಕ್ಷಗಳಾಗಲೀ, ನಮ್ಮ ಪಕ್ಷಗಳಾಗಲೀ, ಬಹುತೇಕ ಜನರಿಗೆ ಸೈದ್ಧಾಂತಿಕವಾದ ತಳಹದಿಯೇ ಇರುವುದಿಲ್ಲ. ಇನ್ನು ಕೆಲವಾರು ಕಾರಣಗಳಿಗಾಗಿ ಅಲ್ಲಿಂದ ಇಲ್ಲಿಂದ ಪ್ರಯಾಣವನ್ನು ಮಾಡಿರುತ್ತಾರೆ, ತಮ್ಮ ಮನಸ್ಸಿಗೆ ಏನು ಪ್ರಿಯಕರವಾಗಿರುತ್ತದೆಯೋ ಅದನ್ನು ಅವರು ಎಲ್ಲಿದ್ದರೂ ಮಾಡುತ್ತಾರೆ, ಅದು ಅಪ್ರಿಯವಾಗಿದ್ದರೆ ಅವರು ಎಲ್ಲಿದ್ದರೂ ಅದನ್ನು ಮಾಡುವುದಿಲ್ಲ. ನಮ್ಮ ಖರ್ಗೆಯವರು ಹೇಳುತ್ತಾರೆ, ನೀವು ಇದನ್ನು ಪ್ರಯೋಗ ಮಾಡುವುದಕ್ಕೆ ಹೋಗಬೇಡಿ ಎಂದು. ಇದು experiment, not on the ldes of the people ಆ ಜನರಿಗೆ ಇಂದಲ್ಲ ನಾಳೆ ತಿಳುವಳಿಕೆ ಬರುತ್ತದೆ. One day or the othe , the feudal fo ces will resist this. ನಾವು ಎಲ್ಲವನ್ನು ರೆಡಿಮೇಡ್ ಮಾಡಿ ಅಲ್ಲಿ ಇಡಬೇಕು ಎಂದು ಹೇಳಿದರೆ ಅದು ಆಗುವುದಿಲ್ಲ. ಮೊನ್ನೆ ಬೆಂಡಿಗೇರಿ ವಿಷಯ ಬಂದಾಗ ಬಸವಲಿಂಗಪ್ಪನವರು ಹೇಳಿದರು, ನೀವು ಏನು ಮಾಡುತ್ತೀರೋ ಮಾಡಿ ರೊಚ್ಚಿಗೇಳುತ್ತೇವೆ ಮಾಡಿ ಎಂದು. ಅಂದರೆ ಅವರು ಎಲ್ಲವನ್ನು ಮಾಡಿ ಎಂದು ಸೂಚನೆ ಕೊಟ್ಟರು ಎಂದು ಅಲ್ಲ. ಜನರನ್ನು ಪ್ರವೋಕ್ ಮಾಡುತ್ತಿದ್ದಾರೆ, ಮಾಡಿ, there will be participation, suffering and torture. However a suppression and oppression shall always be met with counter-suppression and oppression. You shall never forget this basic principle. The feudal forces might have got better advantage of the situation. But, it will not continue for all the time. ತಾವು ಸ್ವಲ್ಪ ಡೆಮಾಕ್ರಟಿಕ್ ಆಗಿ ಇದನ್ನು ಒಪ್ಪಿಕೊಳ್ಳಬೇಕು ಇದರಲ್ಲಿ ನಿಮ್ಮಲ್ಲಿ ಪ್ರಯತ್ನ ಮಾಡಬೇಕು ನಾವು ಪ್ರಯತ್ನ ಮಾಡುತ್ತೇವೆ. ಯಾರು ಇಂಥ ಶಕ್ತಿಗಳು ಇರುತ್ತಾರೋ ಅವರನ್ನು ನಾವು ರಾಜಕೀಯ ಪಕ್ಷಗಳಲ್ಲಿ ಹತೋಟಿಯಲ್ಲಿಟ್ಟು ಅವರು ಈ ಆಡಳಿತವನ್ನು ಕೈಗೆ ತೆಗೆದು ಕೊಳ್ಳದ ರೀತಿಯಲ್ಲಿ ಅವರನ್ನು ನಿಭಾಯಿಸತಕ್ಕಂಥ ರೀತಿಯಲ್ಲಿ ನಾವು ಚಾಣಾಕ್ಷತನವನ್ನು ತೋರಿಸ

ಬೇಕು. ತಮಗೆ ಇದು ಡೆಮಾಕ್ರಟಿಕ್ ಎಂದರೆ ಬಹಳ ಬೇಸರ ಬರುತ್ತದೆ. ನಾನು ಇಷ್ಟು ಮಾತನಾಡುತ್ತಿರುವುದು ಕೂಡಾ ನಿಮ್ಮ ಪಕ್ಷದಲ್ಲಿ ಸದಸ್ಯನಾಗಿದ್ದಾಗ ಮಾತನಾಡುತ್ತಾ ಇರಲಿಲ್ಲ. ಏಕೆಂದರೆ ನಮ್ಮ ಜನರಲ್ಲಿ there was inner Party Democracy.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಚಂದ್ರಶೇಖರ್ ಅವರು ಪ್ರೆಸಿಡೆಂಟ್ ಆಗಿ ಎಷ್ಟು ವರ್ಷವಾಯಿತು.

SRI RAMESH KUMAR.—But, he is elected continuously.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹತ್ತು ವರ್ಷ, ೧೪ ವರ್ಷ...

ಒಬ್ಬ ಮಾನ್ಯ ಸದಸ್ಯರು.—ನಿಮ್ಮಲ್ಲಿ ಎಲೆಕ್ಷನ್ ಕೂಡ ಮಾಡುತ್ತಿಲ್ಲ. ನಾಚಿಕೆಗೇಡು.

(ಗೊಂದಲ)

ಶ್ರೀ ರಮೇಶ್‌ಕುಮಾರ್.—ಈಗ ಮೊಯಿಲಿಯವರು, ಖರ್ಗೆಯವರು ಕಾಂಗ್ರೆಸ್ ಪಾರ್ಟಿಯಲ್ಲಿ ಬಹಳ ಸೀನಿಯರ್ಸ್. ತಾವು ಹೇಳಿ ಸಾರ್. ೧೯೭೩ನೇ ಇಸವಿಯಲ್ಲಿ ಕಲ್ಕತ್ತಾ, ಬಿದಾನ್ ನಗರದಲ್ಲಿ ಆನೇ ಅಸೆಂಬ್ಲಿ ಸೆಷನ್ ಆದಮೇಲೆ ಮೆಂಬರ್‌ಶಿಪ್ ಎನ್‌ರೋಲ್‌ಮೆಂಟ್ ಆಗಿ ಎಲೆಕ್ಷನ್ ನಡೆದಿದೆಯೇ? ಎಲೆಕ್ಷನ್ ಆರ್ಗನೈಜೆಷನ್ ಇವತ್ತಿಗೂ ಅಲ್ಲಿ ನಡೆದಿದೆಯೇ? ಸೇರಬೇಕು ಎಂದು ಬಂದವರು ಜಾಯಿಂಟ್ ಕಾಂಗ್ರೆಸ್ ಪಾರ್ಟಿ ಎಂದು ಒಂದು ಹೇಳಿಕೆಯನ್ನು ಮಾಡುತ್ತಾರೆ, ಬಿಟ್ಟು ಹೋದವರು ಲೆಫ್ಟ್ ಕಾಂಗ್ರೆಸ್ ಪಾರ್ಟಿ ಎಂದು ಒಂದು ಹೇಳಿಕೆಯನ್ನು ಕೊಡುತ್ತಾರೆ. There is no account of any one who joins your party. You have no account of membership. ಈ ತರಹ ಡೆಮಾಕ್ರಟಿಕ್ ಸೆಟಪ್‌ನಲ್ಲಿ ತಾವು ಇದ್ದುಕೊಂಡೂ ಈ ರೀತಿ ನಡೆಯುತ್ತಿದೆ. I am not casting any aspersions on you.

ಒಬ್ಬ ಮಾನ್ಯ ಸದಸ್ಯರು.—ನಾವು ಏನು ಅವರಿಗೆ ತೊಂದರೆ ಮಾಡುತಿಲ್ಲವಲ್ಲ.

ಶ್ರೀ ರಮೇಶ್‌ಕುಮಾರ್.—ನಾನು ಮಾತನಾಡುತ್ತಿರತಕ್ಕಂಥ ಕಾನ್‌ಟೆಕ್ಸ್ಟ್ ಅವರಿಗೆ ಅರ್ಥವಾಗುತ್ತದೆ. ಇಂಥವರನ್ನೆಲ್ಲಾ ಅಡ್‌ಜಸ್ಟ್ ಮಾಡಿಕೊಂಡು ಹೋಗಬೇಕಾಗುತ್ತದೆ.

ಇನ್ನು ಎಜುಕೇಶನ್ ವಿಚಾರ. ನಾನು ಈ ಎಜುಕೇಶನ್ ವಿಚಾರಕ್ಕೆ ಬಂದಾಗ ನನ್ನ ಸಂತೋಷ ಹಾಗೂ ದುಃಖ ಎರಡನ್ನೂ ವ್ಯಕ್ತ ಮಾಡುತ್ತಿದ್ದೇನೆ. ಹೆಚ್ಚಿನ ಸಂಖ್ಯೆಯಲ್ಲಿ ಖಾಸಗೀ ವಿದ್ಯಾ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡತಕ್ಕದ್ದನ್ನು ಯಾರೂ ಒಪ್ಪತಕ್ಕ ವಿಚಾರ ಅಲ್ಲ.

ಅಧ್ಯಕ್ಷರು.—ಎದ್ದು ಹೇಳಿ ಅವಕಾಶ ಕೊಡುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಅಡ್ಡಗೋಡೆ ಮೇಲೆ ದೀಪವನ್ನು ಇಟ್ಟ ಹಾಗೆ ದುಃಖವಾಗುತ್ತದೆ, ಸಂತೋಷವೂ ಆಗುತ್ತದೆಂದರೆ ನಾವು ಯಾವುದನ್ನು ನಂಬಲಿಕ್ಕೆ ಆಗುತ್ತದೆ?

ಶ್ರೀ ರಮೇಶ್ ಕುಮಾರ್.—ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ನಾನು ಏನು ಹೇಳಿದ್ದೇನೆ ನಾನು ಶ್ರೀಮಾನ್ ರಾಚಯ್ಯನವರು ಇದ್ದಾರೆ ಅವರನ್ನು ಬೇಕಾದರೆ ಕೇಳಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಿವೇದಿಸಿಕೊಳ್ಳುತ್ತೇನೆ ನಮ್ಮ ದೃಢ ನಿರ್ಧಾರ ಏನಿದೆ, ಮಂತ್ರಿಕೆಯನ್ನು ತೆಗೆದುಕೊಳ್ಳಬಾರದು ಎನ್ನುವ ವಿಚಾರದಲ್ಲಿ ಸರ್ಕಾರದವರು ತಮ್ಮ ನಿರ್ಧಾರವನ್ನು ಶೀಘ್ರವಾಗಿ ಪ್ರಕಟ ಮಾಡಬೇಕು. ವಂತಿಗೆಯನ್ನು ತೆಗೆದುಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧ ಮಾಡಬೇಕು. ಎಲ್ಲಾ ಸರ್ಕಾರಿ ಕಾಲೇಜುಗಳನ್ನು ಸರ್ಕಾರವು ಟೇಕ್ ಓವರ್ ಮಾಡಬೇಕು, ನಾವು ಹೆಚ್ಚು ಹೆಚ್ಚು ಕಾಲೇಜುಗಳನ್ನು ಪ್ರಾರಂಭ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ, ಮಾಡಿರಿ.

ಶ್ರೀ ಎಂ. ಎಸ್. ಕೃಷ್ಣನ್.—ಇದು ತಮ್ಮ ಅಭಿಪ್ರಾಯವೋ ಅಥವಾ ಪಕ್ಷದ ಅಭಿಪ್ರಾಯವೋ ತಮ್ಮ ಅಭಿಪ್ರಾಯ ಆದರೆ ನಮ್ಮದೇನೂ ತೊಂದರೆ ಇಲ್ಲ.

ಶ್ರೀ ರಮೇಶ್‌ಕುಮಾರ್.—ಮಾನ್ಯ ಕೃಷ್ಣನ್‌ರವರ ಮಾತು ಅರ್ಥ ಆಯಿತು. ನಾನು ಜನತಾ ಪಕ್ಷದಲ್ಲಿ ಸ್ಥಿರವಾಗಿದ್ದೇನೆ. ನನ್ನ ಮಾನಸಿಕ ಪರಿಸ್ಥಿತಿಯ ಸಮತೋಲನವನ್ನು ಕಳೆದುಕೊಂಡಿಲ್ಲ, ನನ್ನ ಪ್ರಿಯವಾಗಿರತಕ್ಕ ವಿಚಾರವನ್ನು ನಮ್ಮ ಪಕ್ಷದ ಮತಿಯಿಂದ ನಮ್ಮ ಸರ್ಕಾರದ ಮೇಲೆ ಒತ್ತಡ ತಂದಿದ್ದೇನೆ, Such voice of dissent is encouraged, tolerated here. But

it is not the case there, ಸನ್ಮಾನ್ಯ ಕೃಷ್ಣನ್‌ರವರಿಗೆ ಒಂದು ವಿಚಾರವನ್ನು ಹೇಳುತ್ತೇನೆ. ನಾವು ಪಬ್ಲಿಕ್ ಅಕೌಂಟ್ಸ್ ಕಮಿಟಿ ಸದಸ್ಯರಾಗಿದ್ದಾಗ, ಶ್ರೀಮಾನ್ ಬೊಮ್ಮಾಯಿಯವರು ಚೇರ್ಮನ್ ಆಗಿದ್ದರು. ಮಾನ್ಯ ಮೊಯಿಲಿಯವರಿಗೂ ಎಲ್ಲಾ ವಿಷಯ ಗೊತ್ತಿದೆ ಮೆಂಬರ್ಸ್‌ಗಳು ಸಹಿ ಹಾಕಿದ್ದವರು ತಾವು ಪ್ರೊಸೀಡಿಂಗ್ಸ್ ನೋಡಲೇ ಇಲ್ಲ ಎಂದು ಹೇಳಿದರು, ಮಾನ್ಯ ಬಸವಲಿಂಗಪ್ಪನವರೂ ಸುಮ್ಮ ನಾದರು. ನಾನು ಏನು ಹೇಳಿದೆ ಎಂದು ನೋಡಬೇಕಾದರೆ ತಾವು ಕಮಿಟಿಯ ಪ್ರೊಸೀಡಿಂಗ್ಸ್ ತರಿಸಿ ನೋಡಬಹುದು. ಸರ್ಕಾರದವರು ಸರ್ಕಾರಿ ಕಾಲೇಜುಗಳಲ್ಲಿ ಕೆಲಸ ಮಾಡತಕ್ಕಂಥ ಅಧ್ಯಾಪಕರು, ಪ್ರಾಧ್ಯಾಪಕರು ಯಾವ ರೀತಿಯಾಗಿ ಅವರು ಖಾಸಗಿಯಾಗಿ ಟ್ಯೂಶನ್‌ಗಳನ್ನು ಕೊಡಿಸತಕ್ಕದ್ದನ್ನು ಶಾಸನದ ಮುಖಾಂತರ ನಿಶೇಧ ಮಾಡಬೇಕು ಇಲ್ಲದೇ ಹೋದರೆ ಸರ್ಕಾರೀ ಕಾಲೇಜುಗಳನ್ನು ಉತ್ತಮಪಡಿಸತಕ್ಕ ಮಾರ್ಗ ಇಲ್ಲ. ಪ್ರಾಥಮಿಕ ಶಿಕ್ಷಣವಂತೂ ಸಂಪೂರ್ಣವಾಗಿ ಹಾಳಾಗಿದೆ. ನಾವು ಈಗ ವೈಜ್ಞಾನಿಕ ತಳಹದಿ ಮೇಲೆ, ದೇಶದ ಮುಂದಿನ ಜನಾಂಗವನ್ನು ಕೊಂಡೊಯ್ಯಬೇಕು, ಈ ಕಾಲದಲ್ಲಿ ನಮ್ಮ ಮಕ್ಕಳಿಗೆ ಆ ರೀತಿಯಾಗಿ ಪ್ರಾಥಮಿಕ ಶಿಕ್ಷಣವು ಮುಂದುವರಿಯುತ್ತಿಲ್ಲ. ನಾವು ಇಲ್ಲಿ ಸ್ವರ್ಗ ಸೃಷ್ಟಿ ಮಾಡುತ್ತೇವೆ, ಯಾವುದೇ ತಪ್ಪು ಇಲ್ಲ, ನನಗೆ ಶಹಭಾಸ್‌ಗಿರಿ ದೊರೆಯಬೇಕು ಎಂದು ಹೇಳುತ್ತಿಲ್ಲ. ಈ ವಿಷಯದಲ್ಲಿ ಇಲ್ಲಿರತಕ್ಕ ಸಮಸ್ಯೆ ನಮ್ಮೆಲ್ಲರ ಸಮಸ್ಯೆ. ಜನತಾ ಪ್ರತಿನಿಧಿಯಾಗಿ ಎಲ್ಲರ ಗಮನದಲ್ಲಿ ಈ ವಿಚಾರ ಇರಬೇಕು. ಈ ಅಭಿಪ್ರಾಯವನ್ನು ಎಲ್ಲರೂ ತಿಳಿಯಬೇಕು. ಸರಿಯಾದಂತಹ ಶಿಕ್ಷಣವನ್ನು ಕೊಡುವಂತಹ ಹೊಣೆಗಾರಿಕೆ ನಮ್ಮದು. ಶಾಲೆಯಲ್ಲಿ ಪುಸ್ತಕವನ್ನು ಮಕ್ಕಳಿಗೆ ಕೊಡತಕ್ಕಂಥ ಮಕ್ಕಳಿಗೆ ಬಟ್ಟೆ ಕೊಡತಕ್ಕಂಥ ವಿಚಾರದಲ್ಲಿ ಸುಮಾರು ಜನ ಸದಸ್ಯರು ವ್ಯಂಗ್ಯ ಮಾಡಿ ಮಾತನಾಡಿದರು.

ಶ್ರೀ ಡಿ. ಎ. ಚಿನ್ನಪ್ಪ.—ಹಾಗಿದ್ದರೆ ಇಬ್ಬರು ವಿದ್ಯಾಮಂತ್ರಿಗಳು ತಮ್ಮ ಸ್ಥಾನಗಳಿಗೆ ರಾಜಿನಾಮೆ ಕೊಡಬೇಕು.

ಶ್ರೀ ರಮೇಶ್‌ಕುಮಾರ್.—ನಿಮ್ಮ ಪಕ್ಷದ ಶ್ರೀ ವಿ. ಪಿ. ಸಿಂಗ್ ಅವರು ನಿಜ ಹೇಳಿದ ಕೂಡಲೇ ಅವರನ್ನು ಪಕ್ಷದ ಹೊರಗಡೆ ಹಾಕಿದಿರಿ. ಆದರೆ ನಮ್ಮ ಪಕ್ಷದಲ್ಲಿ ಆ ರೀತಿ ಆಗುವುದಿಲ್ಲ. ತಮ್ಮ ಮಕ್ಕಳಿಗೆ ಬಟ್ಟೆ ಕೊಡಿಸುವುದಕ್ಕೆ ಮತ್ತು ಪಠ್ಯಪುಸ್ತಕಗಳನ್ನು ಕೊಡಿಸುವುದಕ್ಕೆ ತಂದೆತಾಯಿಗಳಾದ ವರಿಗೆ ಶಕ್ತಿ ಇರುವುದಿಲ್ಲವೇ ಎಂದು ಈ ಯೋಜನೆಯ ಬಗ್ಗೆ ಕೆಲವರು ವ್ಯಂಗ್ಯವಾದ ಮಾತುಗಳನು ಆಡಿದರು. ಒಂದು ದೌರ್ಭಾಗ್ಯದ ಸಂಗತಿ ಎಂದರೆ, ಈ ಬಡತನ ಎಂಬುದು ಅತಿ ಕೆಟ್ಟದ್ದು. ಬಡತನದ ಆಧಾರದ ಮೇಲೆಯೇ ಒಬ್ಬ ಮನುಷ್ಯನನ್ನು ಮುಂದುವರೆದ ಜನರು ಹೀಯಾಳಿಸುವುದು. ಹಳ್ಳಿಯಲ್ಲಿ ಅನುಕೂಲ ಇರುವವರ ಮಕ್ಕಳು ನಾಜೂಕಿನ ಬಟ್ಟೆಗಳನ್ನು ಹಾಕಿಕೊಂಡು ಶಾಲೆಗೆ ಬಂದರೆ ದನ ಕಾಯುವವರ ಮಕ್ಕಳು ಹರಕಲು ಬಟ್ಟೆಯನ್ನು ಹಾಕಿಕೊಂಡು ಬಂದರೆ, ಹರಕಲು ಬಟ್ಟೆ ತೊಟ್ಟ ಮಕ್ಕಳ ಮುಗ್ಧ ಮನಸ್ಸಿನಲ್ಲಿ ಎಂತಹ ಭಾವನೆ ಹುಟ್ಟುತ್ತದೆ ಎಂಬುದು ಎಲ್ಲರಿಗೂ ಗೊತ್ತು. ಈ ಒಂದು ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್ ಇಲ್ಲಿಂದಲೇ ಪ್ರಾರಂಭವಾಗುತ್ತದೆ. ಇಂಥಾದ್ದನ್ನು ಹೋಗ ಲಾಡಿಸಬೇಕು, ಬಡತನದ ಪಾಲನ್ನು ಬೇರೆಯವರೂ ತೆಗೆದುಕೊಳ್ಳಬೇಕು ಮತ್ತು ಆ ನೋವನ್ನು ಬೇರೆಯವರೂ ಹಂಚಿಕೊಳ್ಳಬೇಕು ಎಂಬ ಕಾರಣದಿಂದಲೇ ಈ ಒಂದು ಯೋಜನೆಯನ್ನು ನಮ್ಮ ಸರ್ಕಾರ ಹಾಕಿಕೊಂಡಿದ್ದು ಈ ಪಠ್ಯಪುಸ್ತಕಗಳನ್ನು ಹಂಚಿಕೆ ಮಾಡುವುದರಲ್ಲಿ ಸ್ವಲ್ಪ ಮಟ್ಟಿಗೆ ಅಸ್ತವ್ಯಸ್ತ ಆಗಿರಬಹುದು. ಕೆಲವು ಕಡೆ ಸಾಕಷ್ಟು ಸಂಖ್ಯೆಯಲ್ಲಿ ಪಠ್ಯಪುಸ್ತಕಗಳು ಸಿಕ್ಕದಿರಬಹುದು. ಈ ಬಗ್ಗೆ ನಾವು ಎಲ್ಲಾ ಕಡೆ ಸರಿಯಾಗಿ ಮಾಡಿದ್ದೇವೆಂದು ನಾನು ಹೇಳುವುದಿಲ್ಲ. ಆದರೆ ಇದರ ಹಿಂದಿರುವ ಸಾರಾಂಶವನ್ನು ಆ ಕಡೆಯವರು ಏತಕ್ಕೆ ಅರ್ಥ ಮಾಡಿಕೊಳ್ಳುತ್ತಿಲ್ಲ?

ಶ್ರೀ ಬಿ. ಎ. ಉಮರಬ್ಬ.—ನಮ್ಮ ರಾಜ್ಯದ ಬಡ ಮಕ್ಕಳಿಗೆ ಸರ್ಕಾರದವರು ಬಟ್ಟೆ ಕೊಡುವ ವಿಚಾರದಲ್ಲಿ ವಿರೋಧಪಕ್ಷದವರು ಸೌಜನ್ಯ ತೋರಿಸಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಪ್ರೈಮರಿ ಶಾಲೆಗಳಲ್ಲಿ ಕಲಿಯುತ್ತಿರುವ ಬಡ ಮಕ್ಕಳಿಗೆ ಯೂನಿಫಾರಂ ಬಟ್ಟೆಗಳನ್ನು ಏನು ಕೊಡ ಲಾಗುತ್ತಿದೆ, ಇದಕ್ಕೆ ಆಗುವಂತಹ ಖರ್ಚಿನಲ್ಲಿ ಶೇಕಡಾ ೮೫ರಷ್ಟು ಹಣವನ್ನು ಕೇಂದ್ರದಲ್ಲಿರುವಂತಹ ಕಾಂಗ್ರೆಸ್ ಸರ್ಕಾರದವರು ಕೊಡುತ್ತಿದ್ದಾರೆ. ಆದ್ದರಿಂದ ನೀವು ಕೇಂದ್ರ ಸರ್ಕಾರದ ಬಗ್ಗೆ ಸೌಜನ್ಯ ತೋರಿಸಬೇಕು. ಇದಕ್ಕೆ ನೀವು ಖರ್ಚು ಮಾಡುತ್ತಿರುವುದು ಕೇವಲ ಶೇಕಡಾ ೧೫ರಷ್ಟು ಮಾತ್ರ. ಈ ಬಗ್ಗೆ ಮಾನ್ಯ ಕೈಗಾರಿಕಾ ಸಚಿವರೇ ಈ ಸದನದಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ರಘುಪತಿ.—ವಿದ್ಯಾ ಮಂತ್ರಿಯಾಗಿದ್ದಾಗ ಕೇಂದ್ರಕ್ಕೆ ಹೋಗಿ ಈ ಕಾರ್ಯಕ್ರಮಕ್ಕೆ ಹಣ ಕೊಡಬೇಕೆಂದು ಕೇಳಿದ್ದುದೇ ನಾನು. ಈ ಬಾಬಿಗೆ ಕೇಂದ್ರದಿಂದ ಶೇಕಡ ೮೫ರಷ್ಟು ಹಣ ಬರುವುದಿಲ್ಲ. ಇದಕ್ಕೆ ನಮ್ಮ ಅಪ್ರೂವ್ಡ್ ಪ್ಲಾನ್ ಸ್ಕೀಮಿನಿಂದ ಹಣ ಖರ್ಚು ಮಾಡಲಾಗುತ್ತಿದೆ. ಕೇಂದ್ರದಿಂದ ಇದಕ್ಕೆ ಹಣ ನಮಗೆ ಬರುತ್ತಿಲ್ಲ. ಒಂದುವೇಳೆ ಕೇಂದ್ರದವರು ಆ ರೀತಿ ಹಣ ಕೊಡುವುದಿದ್ದರೆ ಕಾಂಗ್ರೆಸ್ ಪಕ್ಷದ ಸರ್ಕಾರಗಳು ಇರುವಂತಹ ಯು.ಪಿ.ನಲ್ಲಿ, ಬಿಹಾರ್‌ನಲ್ಲಿ, ಮಧ್ಯಪ್ರದೇಶದಲ್ಲಿ ಏತಕ್ಕೆ ಈ ಯೋಜನೆಯನ್ನು ಜಾರಿಗೆ ತಂದಿಲ್ಲ?

ಅಧ್ಯಕ್ಷರು.—ಈಗ ಮಾನ್ಯ ಉಪಮರಬ್ಬ ಅವರ ಪ್ರಶ್ನೆಗೆ ಉತ್ತರ ಸಿಕ್ಕಿದೆ. ಆದ್ದರಿಂದ ಮಾನ್ಯ ರಮೇಶ್‌ಕುಮಾರ್ ಅವರು ಚರ್ಚೆಯನ್ನು ಮುಂದುವರೆಸಬಹುದು.

ಶ್ರೀ ರಮೇಶ್‌ಕುಮಾರ್.—ಪರ್ಸೆಂಟೇಜ್ ಮತ್ತು ಕಮಿಷನ್ ಈ ಎರಡನ್ನು ಬಿಟ್ಟರೆ ಬೇರೆ ವಿಚಾರಗಳೇ ಆ ಕಡೆಯವರ ಮನಸ್ಸಿನಲ್ಲಿ ಬರುವುದಿಲ್ಲ.

ಶ್ರೀ ಬಿ. ಎ. ಉಪಮರಬ್ಬ.—ಬಹಳ ಚೆನ್ನಾಗಿ ಹೇಳಿದರು. ಅವರು ನನ್ನನ್ನು ಅರ್ಥ ಮಾಡಿಕೊಂಡು ಪರ್ಸೆಂಟೇಜ್, ಕಮಿಷನ್ ಎನ್ನುವುದಕ್ಕೆ ಒಂದು ಕಾರಣ ಇರಬಹುದು. ತಾವೂ ಜೊತೆಗೆ ಪಾರ್ಟನರ್‌ಶಿಪ್ ಮಾಡಿದ್ದು ಕಾಣುತ್ತದಲ್ಲ. ಜೊತೆಗೆ ಬಿಸಿನೆಸ್ ಮಾಡಿರತಕ್ಕಂಥಾದ್ದು ಬಿಟ್ಟು ಬೇರೆ ಕಾರಣ ಇರಲಿಕ್ಕಿಲ್ಲ ಏಕೆಂದರೆ ನಾವು ಮುಖ್ಯಮಾಗಿ ......

ಶ್ರೀ ರಾಮೇಶಕುಮಾರ್.—ನಾನು ಅವರ ಮೇಲೆ ಆರೋಪಣೆ ಮಾಡಲಿಲ್ಲ.

ಶ್ರೀ ಬಿ. ಎ. ಉಮರಬ್ಬ —ಎಲ್ಲದರಲ್ಲೂ ಇರಬಹುದು. ಬಾಟ್ಲಿಂಗ್, ಸ್ಪಿರಿಟ್. ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಾಕಿ ಜನ ಇದ್ದಾರೆ, ಪಾರ್ಲಿಮೆಂಟ್‌ನಲ್ಲಿ ಬೋಫೋರ್ಸ್ ಬಗ್ಗೆ ಮಾತನಾಡುತ್ತಾರೆ. ಇಲ್ಲಿ ಬಾಟ್ಲಿಂಗ್ ಬಗ್ಗೆ ಬೇಕಾದರೆ ಮಾತನಾಡಿ.

SRI RAMESH KUMAR.—I must thank him. I will make a mention of that also.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಕಡೆ ಬಾಟ್ಲಿಂಗ್, ಆ ಕಡೆ ಬೋಫೋರ್ಸ್ ಇವರಿಬ್ಬರ ಮಧ್ಯೆ ರಾಜ್ಯದ ಜನತೆಯ ಗತಿ ಏನು?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಧ್ಯ ಪ್ರದೇಶದ ಚೀಫ್ ಮಿನಿಸ್ಟರ್ ಇದ್ದಾರೆ.

ಶ್ರೀ ಬಿ. ಎ. ಉಮರಬ್ಬ.—ಆ ಕಡೆ ಬಾಟ್ಲಿಂಗ್, ಈ ಕಡೆ ಬೋಫೋರ್ಸ್, ಇನ್ನು ಮಧ್ಯದವರ ಗತಿ ಏನು ಎಂದು ಕೇಳುತ್ತಿದ್ದಾರೆ. ಮೊದಲನೆಯದಾಗಿ, ವಾಜಪೇಯಿಯವರಿಗೆ ಇಷ್ಟು ಎಂದು ಕಲೆಕ್ಷನ್ ಒಂದು ಕೋಟಿ ರೂಪಾಯಿ ನಿಮ್ಮ ನಾಯಕರ ಖರ್ಚಿಗೆ ಕಲೆಕ್ಷನ್ ವಾಜಪೇಯಿಯವರಿಗೆ ಇಷ್ಟು ಎಂದು ಹೇಳಿ?......

ಶ್ರೀ ಬಿ. ಎಸ್. ಯಡಿಯೂರಪ್ಪ.—ಇವತ್ತು ಕೇಂದ್ರದ ವಿಷಯವನ್ನು ಅಂದರೆ ಬೋಫೋರ್ಸ್ ಅಥವಾ ಸಬ್‌ಮೆರಿನ್ ವಿಚಾರಗಳ ಬಗ್ಗೆ ಮಾತನಾಡುವ ಧೈರ್ಯ ಯಾವುದೇ ಮುಖಂಡರಿಗೆ ಇಲ್ಲ. ಇಂಥಾದ್ದು ಪ್ರಪಂಚದ ಇತಿಹಾಸದಲ್ಲೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದರ ಬಗ್ಗೆ ಬಾಕಿಯವರು ಮಾತನಾಡುತ್ತಾರೆ. ವಾಜಪೇಯಿಯವರು ಡೆಲ್ಲಿಯಲ್ಲಿದ್ದಾರೆ, ಅವರು ಮಾತನಾಡುತ್ತಾರೆ, ಅಲ್ಲಿ ಉತ್ತರ ಕೊಡುತ್ತಾರೆ. ಮಧ್ಯಪ್ರದೇಶದ ಚೀಫ್ ಮಿನಿಸ್ಟರ್ ಮೇಲೆ ಅಲಿಗೇಷನ್ ಇತ್ತು, ಅದು ಪ್ರೂವ್ ಆಯಿತು, ಆಮೇಲೆ ಅವರು ರಾಜಿನಾಮೆ ಕೊಟ್ಟರು ಎಂದು ಇಲ್ಲಿ ಹೇಳುವುದಕ್ಕೆ ಬರುತ್ತದೆಯೇ? ಅದೆಲ್ಲಾ ಬೇಡ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಇವತ್ತು ಕೊನೆಯ ಪಕ್ಷ ಜನಗಳನ್ನು ಸಂಗ್ರಹಣೆಮಾಡಿ ಪಕ್ಷ ಕಟ್ಟುವುದು ತಪ್ಪೇ. ಬೋಫೋರ್ಸ್ ಬಗ್ಗೆ ಹೇಳುವುದು ಅನಿವಾರ್ಯ ಪ್ರಸಂಗ, ಹೇಳಬೇಕಾಗುತ್ತದೆ.

ಶ್ರೀ ರಮೇಶ ಕುಮಾರ್.—ಶ್ರೀಮಾನ್ ಯಡಿಯೂರಪ್ಪನವರು ಪಾಪ, ಒಂದು ಅನುಮಾನವನ್ನು ವ್ಯಕ್ತಪಡಿದರು. ಅವರು ಹಾಗೆ ಮಾಡಿದರೆ, ಇವರು ಹೀಗೆ ಮಾಡಿದರೆ ಮಧ್ಯೆ ನಮ್ಮ ಗತಿ ಏನು ಎಂದು ಅನುಮಾನ ವ್ಯಕ್ತಪಡಿಸಿದರು. ಮಾನ್ಯ ಯಡಿಯೂರಪ್ಪನವರೇ. ನೀವು ಭಯ ಬೀಳಬೇಡಿ. In any case you are not the choice. ನಿಮ್ಮ ಮೇಲೆ ಹೊಣೆಗಾರಿಕೆಯನ್ನು ನಾವು ಬಿಡುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾತಂತ್ರ್ಯ ಬಂದು ೪೦ ವರ್ಷಗಳಲ್ಲಿ ಎರಡೂ ಕಡೆ ವಿಚಿತ್ರವಾದ ಸನ್ನಿವೇಶ ಇದೆಯಲ್ಲಾ. ದೇಶದಲ್ಲಿ ಬದಲಾವಣೆಯಾಗುತ್ತದೆ, ಇದು ಅದು ಅನಿವಾರ್ಯ.

ಅಧ್ಯಕ್ಷರು.—ಮಿಸ್ಟಿಬಿಟ್ಟು ಟs on ಯಾವಾಗಲೂ ಮಾತನಾಡಬಾರದು.

SRI RAMESH KUMAR.—I only wish. ಈ ವಿದ್ಯಾಕ್ಷೇತ್ರದಲ್ಲಿ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಪ್ರತಿ ಹೋಬಳಿ ಹೆಡ್ ಕ್ವಾರ್ಟರ್ಸ್‌ನಲ್ಲಾದರೂ ಕನಿಷ್ಟ ಎಲ್ಲಾ ಕಡೆಯೂ ಕೂಡ ಹಾಸ್ಟೆಲ್ ಸೌಲಭ್ಯವನ್ನು ಮಾಡಿಕೊಡಬೇಕು. ವಿಶೇಷವಾಗಿ ಪರಿಶಿಷ್ಟ ಜಾತಿ, ಪಂಗಡಗಳು ಮತ್ತು ಆರ್ಥಿಕ ದುರ್ಬಲವರ್ಗಗಳಿಂದ ಬರತಕ್ಕಂಥ ಮಕ್ಕಳು ಯಾರಿದ್ದಾರೆ ಅವರು ತಮ್ಮ ಶಿಕ್ಷಣವನ್ನು ಮುಂದುವರಿಸುವುದಕ್ಕೆ ಸ್ವಾವಲಂಬಿಗಳಾಗಿ ಅವರ ಆತ್ಮಗೌರವಕ್ಕೆ ಕುಂದು ಬಾರದ ರೀತಿಯಲ್ಲಿ ಮಾಡಬೇಕು ಎನ್ನುವಂಥ ಸೂಚನೆಯನ್ನು ನಾನು ಅವರಿಗೆ ಕೊಡುತ್ತಾ ಇದ್ದೇನೆ. ಇತ್ತೀಚೆಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯವರೂ ಕೂಡ ರೆಸಿಡೆನ್ಷಿಯಲ್ ಸ್ಕೂಲುಗಳನ್ನು ಮಾಡಿಕೊಡಿ ಎಂದು ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿದ್ದಾರೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೆ. ಒಂದೇ ಒಂದು ವಿಚಾರ ಹೇಳುತ್ತೇನೆ. ಬಹುಶಃ ಶಾಲೆಯಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಬಟ್ಟೆಗಳನ್ನು, ಪುಸ್ತಕಗಳನ್ನು ಕೊಡುತ್ತಾ ಇದ್ದೀರಿ. ಹೊಸದಾಗಿ ಶಾಲೆಗಳನ್ನು ತೆರೆಯಬೇಕು ಎಂದು ಕೂಡ ಹೇಳುತ್ತಾ ಇದ್ದಾರೆ. ಈಗಾಗಲೇ ಎರಡು, ಮೂರು ವರ್ಷಗಳಿಂದ ಉಪಾಧ್ಯಾಯರಿಲ್ಲದೇ ಶಾಲೆಗಳನ್ನು ಮುಚ್ಚುತ್ತಿದ್ದಾರೆ. ಇದಕ್ಕೆ ತಾವು ಏನು ಹೇಳುತ್ತೀರಿ? ಇದಕ್ಕೆ ರಮೇಶ್‌ಕುಮಾರ್‌ರವರು ಹೇಳಬೇಕು ಎಂದು ಕೇಳುತ್ತಾ ಇದ್ದೇನೆ.

ಶ್ರೀ ರಮೇಶ್ ಕುಮಾರ್.—ಇವರಿಗೆಲ್ಲಾ ಅದೇ ತಾಪತ್ರಯ. ಅದನ್ನು ಹೇಳುವುದಕ್ಕೆ ಮಾನ್ಯ ಮಂತ್ರಿಗಳಿದ್ದಾರೆ.

ಶ್ರೀ ಎಂ. ಶಿವಣ್ಣ.—ಇವರು ನಾವು ಎಲ್ಲಾ ವಿಚಾರವನ್ನು ಮಾಡುತ್ತೇವೆ ಎಂದು ಬೆನ್ನು ತಟ್ಟಿ ಕೊಳ್ಳುತ್ತಾ ಇದ್ದಾರೆ. ಇದರ ಬಗ್ಗೆ ಏನು ಮಾತನಾಡುತ್ತೀರಿ ಎಂದು ತಮ್ಮನ್ನು ಕೇಳುತ್ತಾ ಇದ್ದೇನೆ. ಬರೀ ಬೆನ್ನು ತಟ್ಟಿಕೊಳ್ಳುವುದಲ್ಲ. ಅಲ್ಲಿ ಆಗುತ್ತಾ ಇರತಕ್ಕಂಥಾದ್ದನ್ನು ತಾವು ನೋಡಬೇಕು.

ಶ್ರೀ ರಮೇಶ್ ಕುಮಾರ್.—ಮಾನ್ಯ ಅಧ್ಯಕ್ಷರೇ ನಾನು ಯಾವ ಧಾಟಿಯಲ್ಲಿ ಮಾತನಾಡು ತ್ತಿದ್ದೇನೆ ಎನ್ನುವುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ನಾನು ಎಲ್ಲಾ ಕಡೆ ಪೂರ್ಣವಾಗಿ ಜನರ ಅಗತ್ಯತೆಯನ್ನು ತುಂಬಿದ್ದೇವೆಂದು ಹೇಳುತ್ತಿಲ್ಲ. ಇನ್ನೂ ಅಗತ್ಯ ಇದೆ. ಡೆಹರಾಡೂನ್ ಟೈಪ್ ನವೋದಯ ಶಾಲೆಗಳನ್ನು ಮಾಡುವುದಕ್ಕೆ ಏನು ಹೊರಟಿದ್ದಾರೆ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ರೆಸಿಡೆನ್ಷಿಯಲ್ ಶಾಲೆಗಳನ್ನು ಅಲ್ಲಲ್ಲಿ ಮಾಡಿ. ಅಲ್ಲಿ ಆರ್ಥಿಕವಾಗಿ ಅಸಮಾನತೆಗಳಿಂದ ಕೂಡಿರುವ ಮಕ್ಕಳನ್ನು ಸೇರಿಸಿ, ಒಟ್ಟಿಗೆ ಬೆಳೆಸಿ ಬಾಲ್ಯದಿಂದ ತರಬೇತಿ ಕೊಟ್ಟರೆ ಅವರ ಮನಸ್ಸಿನೊಳಗೆ ಮೇಲುಕೀಳು ಎನ್ನುವ ಭಾವನೆ ಹೋಗಬಹುದು. ಕೆಲವು ಕ್ಷಣಗಳಿಂದ ಮಾನ್ಯ ಬಸವಲಿಂಗಪ್ಪನವರು ಸಿಟ್ಟಿಗೆದ್ದರು. ನಾನೇ ಅವರ ಸ್ಥಿತಿಯಲ್ಲಿದ್ದಿದ್ದರೆ ಇನ್ನೂ ಸಿಟ್ಟಿಗೆ ಏಳುತ್ತಿದ್ದೆ. ಎಲ್ಲಿಯವರೆಗೆ ಈ ಒಂದು ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುತ್ತೀರಿ. ? We must get over this. This is one of the suggestions I make has. ಅಂಥ ಒಂದು ಕ್ರಮ ತೆಗೆದುಕೊಳ್ಳಬೇಕೆಂದರೆ, ಇದೊಂದು ಸಲಹೆ, ಆ ರೀತಿಯಲ್ಲಿ ಮಾಡಬೇಕಾಗುತ್ತದೆ.

ಇನ್ನು ಕುಡಿಯುವ ನೀರಿನ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯ ದಲ್ಲಿ ಇನ್ನೂ ಕೂಡ ಕುಡಿಯುವ ನೀರಿನ ಸಮಸ್ಯೆ ಇರತಕ್ಕ ಗ್ರಾಮಗಳು ಇವೆ. ೫ ವರ್ಷದ ಕೆಳಗೆ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬರುವ ಮೊದಲು ಏನೊಂದು ಉಲ್ಬಣಾ ಸಮಸ್ಯೆ ಇತ್ತೋ ಅದು ಇವತ್ತು ಇಲ್ಲ. ಸಾಕಷ್ಟು ಪ್ರಗತಿಯನ್ನು ಈ ದಿಸೆಯಲ್ಲಿ ನಾವು ಸಾಧಿಸಿದ್ದೇವೆ. ಸರ್ಕಾರ ಗೌರವದಿಂದ ಹೆಮ್ಮೆ ಯಿಂದ ಕುಡಿಯುವ ನೀರಿನ ವಿಚಾರದಲ್ಲಿ ಪ್ರಗತಿಯನ್ನು ಸಾಧಿಸಿದೆ ಎಂದು ಹೇಳುವುದಕ್ಕೆ ನಾನು ಇಚ್ಛೆ

ಪಡುತ್ತೇನೆ. ಯಾವ ಜನರಿಗೆ ನೀರು ಕುಡಿಸುತ್ತಾ ಬಂದಿದ್ದರೋ, ಅವರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದೇವೆ, ಮನೆ ನಿವೇಶನಗಳ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಮಾನ್ಯ ಬಂಗಾರಪ್ಪನವರು ಹೊರಗಡೆ ಹೋದರು. ಅವರು ಕೆಲವು ಅನುಮಾನಗಳನ್ನು ವ್ಯಕ್ತಪಡಿಸಿದ್ದರು. ಮಾನ್ಯ ಧರ್ಮಸಿಂಗ್ ರವರು ಕೆಲವು ವಿಚಾರಗಳನ್ನು ಹೇಳಿದ್ದರು. ಮಾನ್ಯ ಬಸವಲಿಂಗಪ್ಪನವರು ೧೯೭೭ರಲ್ಲಿ ಮಂತ್ರಿಗಳಾಗಿದ್ದಾಗ ಮನೆ ನಿವೇಶನಗಳನ್ನು ಕೊಡುವ ಕೆಲಸ ಮಾಡಿದರು. ಒಳ್ಳೆಯ ಕೆಲಸ ಮಾಡಿದವರು ಯಾರೇ ಆಗಿರಲಿ ಅವರು ಗೌರವಕ್ಕೆ ಪಾತ್ರರಾಗುತ್ತಾರೆ ಒಳ್ಳೆಯ ಕೆಲಸ ಮಾಡಿದರೂ, ಕಣ್ಣಿಗೆ ಕಾಣಿಸದ ರೀತಿಯಲ್ಲಿ ಕುರುಡರಂತೆ, ಬುದ್ಧಿ ಇಲ್ಲದವರ ಹಾಗೆ ಮಾತನಾಡು ವುದಕ್ಕೆ ಹೋಗಬಾರದು. ಎಮರ್ಜನ್ಸಿಯಲ್ಲಿ ಒಳ್ಳೆಯ ಕೆಲಸವಾಯಿತು. ಇವತ್ತು ಎಲ್ಲಾ ಕಡೆ ಸರ್ಕಾರದ ಜಮೀನು ಇಲ್ಲ. ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬೇಕೆಂದರೆ ಭೂಮಾಲೀಕರು ಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ. ಕೋರ್ಟಿನಲ್ಲಿ ಭೂ ಸ್ವಾಧೀನಕ್ಕೆ ಸಂಬಂಧಪಟ್ಟ ವ್ಯಾಜ್ಯಗಳು ಬೇಗ ಇತ್ಯರ್ಥವಾಗುವುದಿಲ್ಲ. ನಾನು ಸರ್ಕಾರದಲ್ಲಿ ವಿನಂತಿಸಿಕೊಳ್ಳುವುದು ಇಷ್ಟೆ. ಯಾವುದಾದ ರೊಂದು ಪರ್ಯಾಯ ವ್ಯವಸ್ಥೆಯನ್ನು ಈ ವಿಚಾರದಲ್ಲಿ ಕಂಡು ಹಿಡಿಯಬೇಕು. ಭೂ ಸ್ವಾಧೀನ ಕಾಯಿದೆಗೆ ತಿದ್ದುಪಡಿ ತಂದರೂ ಸರಿಯೇ, ತ್ವರಿತಗತಿಯಲ್ಲಿ ಯಾವ ಘೋಷಣೆಯನ್ನು ಹೊರಡಿ ಸಿದ್ದಿರೋ ೧೯೮೮ರ ಮಾರ್ಚಿ ಅಂತ್ಯದೊಳಗೆ, ರಾಜ್ಯದೊಳಗೆ ಇರತಕ್ಕ ಎಲ್ಲಾ ಅರ್ಹರಿಗೆ ನಿವೇಶನ ಗಳನ್ನು ಕೊಡತಕ್ಕ ಘೋಷಣೆ ಬಹಳ ಗುರುತರವಾಗಿದೆ. ಜನಗಳಲ್ಲಿ ಏನು ಈ ಹೊಸ ಆಸೆಯನ್ನು ಚಿಗುರಿಸಿದ್ದೀರಿ. ಇವತ್ತು ಯಾರು ಯಾರಿಗೆ ನೆಲೆ ಇಲ್ಲ. ಅವರೆಲ್ಲಾ ಆಶಾಭಾವನೆಯಿಂದ ನೋಡು ತ್ತಿದ್ದಾರೆ. ಅವರಿಗೆ ನಿರಾಶೆ ಮಾಡಬೇಡಿ. ಘೋಷಣೆ ಹೊರಡಿಸಿದ ಮಾತ್ರಕ್ಕೆ ನಿಮ್ಮ ಜವಾಬ್ದಾರಿ ಮುಗಿಯುವುದಿಲ್ಲ. ಅದನ್ನು ಅನುಷ್ಠಾನಕ್ಕೆ ತರುವಂಥ ಕಾರ್ಯ ಪ್ರವೃತ್ತಿಯನ್ನು ಮಾಡಿ, ಜನತೆಯ ಋಣ ತೀರಿಸುವ ಪ್ರಯತ್ನ ಮಾಡಬೇಕೆಂದು ಸೂಚನೆ ಕೊಡುತ್ತೇನೆ. ಬೋಫರ್ಸ್ ವಿಚಾರ ಇಲ್ಲಿ ಬಂತು. ರಾಜ್ಯದಲ್ಲಿ ಡಕಾಯಿತಿ ಜಾಸ್ತಿಯಾಗುತ್ತಾ ಇದೆ.

೫-೦೦ ಪಿ.ಎಂ.

ಶ್ರೀ ಆರ್. ಎಲ್. ಜಾಲಪ್ಪ.—ಕಡಿಮೆಯಾಗಿದೆ.

ಶ್ರೀ ರಮೇಶ್ ಕುಮಾರ್.—ಅವರು ಎಷ್ಟು ಕಾನ್‌ಷಿಯಸ್ ಆಗಿ ಇದ್ದಾರೆ. Each one of these people is conscious of his office or Party. This is the problem. ಅವರು ಯಶಸ್ವಿಯಾಗಿ ಅವರ ಇಲಾಖೆಯನ್ನು ನಡೆಸಿಕೊಂಡು ಬಂದಿದ್ದಾರೆ. ಇಲ್ಲ ಎಂದು ಹೇಳುವುದಿಲ್ಲ. ಈ ಡಕಾಯಿತ್ಸ್ ಯಾರು ಇದ್ದಾರೆ ಅವರ ಬಗ್ಗೆ ನಾವು ಪತ್ರಿಕೆಗಳಲ್ಲಿ ಓದುವ ರೀತಿಯಲ್ಲಿ ಹೇಳುವುದಾದರೆ ಅವರು ರಾತ್ರಿ ಹೊತ್ತು ಬರುತ್ತಾರೆ, ನಿಕ್ಕರ್ ಹಾಕಿಕೊಂಡಿರುತ್ತಾರೆ, ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿರುತ್ತಾರೆ, ಅವರ ಆಕಾರ ಮತ್ತು ರೂಪ ಗೊತ್ತಿರುವುದಿಲ್ಲ. ಓಡಿ ಹೋಗು ತ್ತಾರೆ. ವಿನ್‌ಚಡ್ಡ ಎನ್ನುವವರು ದೊಡ್ಡ ಹೋಟಲಿನಲ್ಲಿ ೬೦ನೇ ಹುಟ್ಟು ಹಬ್ಬ ಆಚರಣೆ ಮಾಡುತ್ತೇವೆಂದು ಬೋರ್ಡ್ ಹಾಕುತ್ತಾರೆ. Win Chadha the winner, Congrats on the Bofors Deal. Long Live win Chadha. ಅವರು ದೇಶಕ್ಕೆಲ್ಲಾ ಗೊತ್ತಿರು ವವರು, ಅವರನ್ನು ಹಿಡಿದುಕೊಳ್ಳುವವರು ಇಲ್ಲ. Is he not a dacoit ? I do not want to speak more on that. Just I have made a mention of it. The attitude on the part of the Government, to sack these people, to keep track on their movement. ಡಕಾಯಿತಿ ಮಾಡುವವರಿಗೆ ಉದ್ದೇಶಪೂರ್ವಕ ವಾಗಿ ಸರ್ಕಾರ ಅವರ ಜೊತೆ ಶಾಮೀಲಾಗಿ ಅವರನ್ನು ಹಿಡಿಯದೇ ಇದ್ದರೆ ಆ ಸರ್ಕಾರ ತಲೆ ತಗ್ಗಿಸ ಬೇಕಾಗುತ್ತದೆ. ಡಕಾಯಿತಿ ಮಾಡಿರುವವರು ಕಣ್ಣು ಮುಂದೆ ಹೋಗುತ್ತಿರುವಾಗ ಅವರನ್ನು ಹಿಡಿದು ಕೊಳ್ಳಲಿಲ್ಲ ಅಂದರೆ What does it indicate ? My Government does not lack the political will to promote law and order in the State. But there are lot of deficiencies in the system. ಮಾನ್ಯ ಮಂತ್ರಿಗಳು ಸಾಕಷ್ಟು ಹೇಳಿಕೆ ಗಳನ್ನು ಕೊಟ್ಟಿದ್ದಾರೆ. ಇಷ್ಟೆಲ್ಲಾ ಮಾಡಿದರು ಸಹ ಸಂಪೂರ್ಣವಾಗಿ ಇದನ್ನು ತಡೆಹಿಡಿಯುತಕ್ಕ ಸ್ಥಿತಿಯಲ್ಲಿಲ್ಲ. ಇನ್ನು ಪವರ್ ವಿಚಾರದಲ್ಲಿ ಹೇಳಬೇಕೆಂದರೆ, ೧೯೮೩ನೇ ಇಸವಿಯಲ್ಲಿ ಈ ಸರ್ಕಾರ

ಅಧಿಕಾರಕ್ಕೆ ಬಂದಮೇಲೆ ಎಷ್ಟು ಇರಿಗೇಷನ್ ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲಾಗಿದೆ, ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲಾಗಿದೆ ಎಂಬ ಬಗ್ಗೆ ಅಂಕಿಅಂಶಗಳನ್ನು ತಾವು ನೋಡಬೇಕು. ನಮಗೆ ಆ ಜನರ ಮೇಲೆ ಕಳಕಳಿ ಇಲ್ಲದೇ ಇದ್ದರೆ, ಇಷ್ಟು ಪ್ರಗತಿಯನ್ನು ನಾವು ಸಾಧಿಸಲಿಕ್ಕೆ ಆಗುತ್ತಾ ಇರಲಿಲ್ಲ. ಹೋದ ವರ್ಷ ಪ್ರಕೃತಿಯ ಶಾಪಕ್ಕೆ ಬಲಿಯಾದರೂ ನಮ್ಮ ಜಲ ವಿದ್ಯುತ್ ಘಟಕಗಳಲ್ಲಿ ಸಾಕಷ್ಟು ವಿದ್ಯುತ್ ಉತ್ಪಾದನೆ ಮಾಡತಕ್ಕ ಶಕ್ತಿ ಇಲ್ಲದಿದ್ದರೂ ಕೂಡ ಈ ಕ್ಷಣಕ್ಕೂ ಕೂಡ ನಾವು ವಿದ್ಯುತ್ ಸರಬರಾಜು ಮಾಡತಕ್ಕದ್ದು, ಹೊಸ ಪಂಪ್‌ಸೆಟ್ಟುಗಳಿಗೆ ಸರ್ವೀಸ್ ಕೊಡತಕ್ಕದ್ದು ಕಡಿಮೆ ಮಾಡಿಲ್ಲ. ಅತೀ ಹೆಚ್ಚು ಪಂಪ್‌ಸೆಟ್ಟುಗಳನ್ನು ಹೊಂದಿರತಕ್ಕ ಪ್ರದೇಶದಿಂದ ಬಂದವನಾಗಿ ಹೇಳುತ್ತೇನೆ. ಕೆಲವು ಸಾರಿ ವೋಲ್ಟೇಜ್ ಇರುವುದಿಲ್ಲ, ಪವರ್ ಕಟ್ ಇರುತ್ತದೆ. ಅದರ ಬಗ್ಗೆ ವೆಂಕಟರಾಮಯ್ಯನವರು ಪ್ರಸ್ತಾಪ ಮಾಡಿರುತ್ತಾರೆ. ಅದು ಒಂದುಕಡೆ ಇದ್ದೇ ಇದೆ. ಇವೊತ್ತಿನ ದಿವಸ ಯಾರು ಹೆಚ್ಚುವರಿ ವಿದ್ಯುತ್ತನ್ನು ತಮ್ಮ ಕಾರ್ಖಾನೆಗಳಿಗೆ ಬಳಸುತ್ತಿದ್ದಾರೆ ಅವರು ತಮ್ಮದೇ ಆದ ಸ್ವಂತ ವ್ಯವಸ್ಥೆ ಮಾಡಿ ಕೊಳ್ಳಬೇಕೆಂದು ಸೂಚನೆಯನ್ನು ಸರ್ಕಾರ ಕೊಟ್ಟಿದೆ. ಹಲವಾರು ಯೋಜನೆಗಳು ಇವೊತ್ತಿನ ದಿವಸ ಕೇಂದ್ರ ಸರ್ಕಾರದ ಮುಂದಿವೆ. ಯಾವುದೂ ಬೆಳಕನ್ನು ಕಂಡಿಲ್ಲ. ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ತಾವೂ ಕೂಡ ತಮ್ಮ ವರ್ಚಸ್ಸನ್ನು ಉಪಯೋಗಿಸಿ ರಾಜ್ಯದ ಹಿತದೃಷ್ಟಿಯಿಂದ ಈ ಎಲ್ಲಾ ಯೋಜನೆಗಳಿಗೂ ಕೂಡ ಅನುಮತಿ ದೊರಕಿಸಿಕೊಡಬೇಕೆಂದು ತಮ್ಮ ಮೂಲಕ ನಮ್ಮ ಸ್ನೇಹಿತರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ರಮೇಶ್ ಕುಮಾರ್ ಅವರಿಗೆ ಇನ್ನು ಸಮಯ ಬೇಕು ಎಂದು ತಿಳಿಸಿದರೆ ನಾಳೆಗೆ ಸಭೆಯನ್ನು ಮುಂದುವರೆಸಬಹುದು.

ಶ್ರೀ ರಮೇಶ್ ಕುಮಾರ್.—ಅಧ್ಯಕ್ಷರೆ, ಹಾಗಾದರೆ ನಾನು ನಾಳೆ ಚರ್ಚೆ ಮುಂದುವರಿಸುತ್ತೇನೆ.

ಅಧ್ಯಕ್ಷರು.—ಈ ಚರ್ಚೆ ನಾಳೆ ಮುಂದುವರೆಯುವುದು. ಇಂದಿನ ಸಭೆಯನ್ನು ನಾಳೆ ಬೆಳಿಗ್ಗೆ ೧೧–೦೦ ಗಂಟೆಗೆ ಮುಂದೂಡಲಾಗಿದೆ.

ಸದನವು ಸಂಜೆ ೫ ಗಂಟೆ ೪ ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ದಿನಾಂಕ ೨೮ನೇ ಜನವರಿ ೧೯೮೮ ರಂದು ಬೆಳಿಗ್ಗೆ ೧೧–೦೦ ಗಂಟೆಗೆ ಸೇರಲು ನಿಶ್ಚಯಿಸಿತು.